ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 20 ಗುರುವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 212 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ವಿವಿ ಕ್ರಾಫರ್ಡ್ ಭವನದ ಎದುರು ಅತಿಥಿ ಉಪನ್ಯಾಸಕರ ಪ್ರತಿಭಟನೆ

- ಯುಜಿಸಿ, ನಾನ್ ಯುಜಿಸಿ ತಾರತಮ್ಯ ತೆಗೆಯುವಂತೆ ಆಗ್ರಹ
- ಸಿಎಂ ಸಿದ್ದರಾಮಯ್ಯ ಮನೆಗೆ ಮುತ್ತಿಗೆ ಹಾಕಲು ಯತ್ನ



ತಾತ್ಕಾಲಿಕ ಉಪನ್ಯಾಸಕರ ನೇಮಕಾತಿಯಲ್ಲಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮೈಸೂರಿನ ಓವೆಲ್ ಮೈದಾನದಲ್ಲಿ ಪ್ರತಿಭಟನೆ ಮುಂದುವರೆಸಿದರು.

ಮೈಸೂರು,ನ.19(ಜಿಎ)– ತಾತ್ಕಾಲಿಕ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮನೆ ಮುತ್ತಿಗೆಗೆ ಯತ್ನಿಸಿದ ಅತಿಥಿ ಉಪನ್ಯಾಸಕರನ್ನು ಪೊಲೀಸರು ತಡೆದು ಸಿಎಂ ಭೇಟಿಗೆ ಸಮಯಾವಕಾಶ ಕೊಡಿಸುವುದಾಗಿ ಭರವಸೆ ನೀಡಿದರು.

ತಾತ್ಕಾಲಿಕ ಉಪನ್ಯಾಸಕರ ನೇಮಕಾತಿಯಲ್ಲಿ ಯುಜಿಸಿ, ನಾನ್ ಯುಜಿಸಿ ಎಂಬ ತಾರತಮ್ಯ ಮಾಡದೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ ವತಿಯಿಂದ ನಗರದ ಮೈಸೂರು ವಿವಿ ಕ್ರಾಫರ್ಡ್ ಭವನದ ಎದುರು ಪ್ರತಿಭಟನೆ ನಡೆಸಿ, ನಂತರ ಈ ವೇಳೆ ಸಿಎಂ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಪ್ರತಿಭಟನಾಕಾರರನ್ನು ಓವೆಲ್ ಮೈದಾನದಲ್ಲಿ ತಡೆದರು. ಅತಿಥಿ ಉಪನ್ಯಾಸಕರು ಅಲ್ಲೇ ಪ್ರತಿಭಟನೆ ಮುಂದುವರೆಸಿದರು. ಈ ಹಿನ್ನೆಲೆಯಲ್ಲಿ ಪೊಲೀಸರು ಸಿಎಂ ಭೇಟಿಗೆ ಸಮಯಾವಕಾಶ ಕೊಡಿಸಿದ್ದು, ಈ ಬಗ್ಗೆ ತೀರ್ಮಾನ ಆಗುವವರೆಗೂ ಓವೆಲ್ ಮೈದಾನದಲ್ಲೇ ಧರಣಿ ಮುಂದುವರೆಸಲು ನಿರ್ಧರಿಸಿದ್ದಾರೆ.

ಸೇವಾ ಜೇಷ್ಠತೆ, ಬೋಧನಾ ಅನುಭವ, ಅತಿಥಿ ಉಪನ್ಯಾಸಕರ ಆಯ್ಕೆಯಲ್ಲಿ ಮಾನದಂಡವಾಗಬೇಕು. ಈಗ ಉದ್ಭವಿಸಿರುವ ಕಾನೂನಾತ್ಮಕ ಬಿಕ್ಕಟ್ಟನ್ನು ಸರ್ಕಾರದ ಹಂತದಲ್ಲೇ ಬಗೆಹರಿಸಬೇಕು. ಅತಿಥಿ ಉಪನ್ಯಾಸಕರ ಶಾಶ್ವತ ನೇಮಕಾತಿ ನಿಯಮವನ್ನು ರೂಪಿಸಲು ತಜ್ಞರ ಸಮಿತಿ ರಚಿಸಬೇಕು. ಇಡುಗಂಟನ್ನು 5 ಲಕ್ಷದಿಂದ 25 ಲಕ್ಷಕ್ಕೆ ಏರಿಕೆ ಮಾಡಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ರಾಜ್ಯದ 432 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 11 ಸಾವಿರಕ್ಕೂ ಹೆಚ್ಚು ಉಪನ್ಯಾಸಕರು ಕನಿಷ್ಠ ಗೌರವಧನ ಪಡೆದು ಕೆಲಸ ನಿರ್ವಹಿಸುತ್ತಿದ್ದಾರೆ. ರಾಜ್ಯ ಉಚ್ಚ ನ್ಯಾಯಾಲಯ ರಿಟ್ ಅರ್ಜಿಗೆ ಸಂಬಂಧಿಸಿದಂತೆ 2024ರ ಸೆ.5ರಂದು ನೀಡಿರುವ ತೀರ್ಪು ಅತಿಥಿ ಉಪನ್ಯಾಸಕರ ಪಾಲಿಗೆ ಮರಣ ಶಾಸನವಾಗಿದೆ. ಈ ಹಿನ್ನೆಲೆಯಲ್ಲಿ 5353 ಮಂದಿ ಅತಿಥಿ ಉಪನ್ಯಾಸಕರು ತಾತ್ಕಾಲಿಕ ಉದ್ಯೋಗದಿಂದ ವಂಚಿತರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಲ್ಲಿ ಯುಜಿಸಿ ನಿಯಮ 2018ಕ್ಕಿಂತ ಹಿಂದಿನಿಂದ ಕಾರ್ಯನಿರ್ವಹಿಸಿದವರಿಗೆ ಅನ್ವಯಿಸಬಾರದು ಎಂದು ಕೋರಿದರು.

ಪ್ರತಿಭಟನೆಯಲ್ಲಿ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ ರಾಜ್ಯಾಧ್ಯಕ್ಷ ಡಾ.ಸೋಮಶೇಖರ್ ಹೆಚ್.ಶಿವಮೊಗ್ಗಿ, ಸಂಘಟನಾ ಕಾರ್ಯದರ್ಶಿ ನಾಗರಾಜು ಜಿ.ಎಸ್. ಮದ್ದೂರು, ಹನುಮಂತೇಶ್, ಹಾರೀಫ್, ರಾಜ್ಯ ಮಹಿಳಾ ಸಂಯೋಜಕಿ ಹರ್ಷಿತಾ, ಚಂದ್ರಕಾಂತ್ ಬೀದರ್, ಡಾ.ದಿವಾಕರ್ ಕೆಆರ್.ನಗರ, ನೂರ್ ಅಹ್ಮದ್ ಕೋಲಾರ, ಸುನೀತಾ ಸೇರಿದಂತೆ ಇನ್ನಿತರರಿದ್ದರು.

ಕರಾಟೆಯಲ್ಲಿ ನೈಪುಣ್ಯ ವಿದ್ಯಾರ್ಥಿಗಳ ಸಾಧನೆ



ಮೈಸೂರು: ಮೈಸೂರಿನ ಚಾಮುಂಡಿ ವಿಹಾರ್ ಸ್ಟೇಡಿಯಂನಲ್ಲಿ ಶೋರಿನ್ ಕಾಯ್ ಕರಾಟೆ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ 30ನೇ ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ವಿದ್ಯಾರ್ಥಿಗಳು ಕಟಾ ಮತ್ತು ಕುಮಿತೆ ವಿಭಾಗಗಳಲ್ಲಿ ಬಹುಮಾನಗಳನ್ನು ಪಡೆದುಕೊಂಡಿದ್ದಾರೆ.

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯ ದೈವಿಕ್ ಸಾಮ್ರಾಟ್ (ಕಟಾ ಮತ್ತು ಕುಮಿತೆ)–ಪ್ರಥಮ, ಚಾರ್ವಿ ಗೌಡ ಎನ್ (ಕಟಾ ಮತ್ತು ಕುಮಿತೆ)–ಪ್ರಥಮ, ರುತ್ವಿ (ಕಟಾ)–ಪ್ರಥಮ, ಶಶ್ವಿ (ಕಟಾ)–ತೃತೀಯ, ಆದ್ವಿಕ್ ಶರ್ಮಾ (ಕಟಾ)–ದ್ವಿತೀಯ, ಕನಿಷ್ಕಾ ಎಲ್ (ಕಟಾ)–ಪ್ರಥಮ ಮತ್ತು (ಕುಮಿತೆ)–ದ್ವಿತೀಯ, ಧ್ರುವಾಂಶ್ (ಕಟಾ)–ದ್ವಿತೀಯ ಮತ್ತು (ಕುಮಿತೆ)–ತೃತೀಯ, ಸಾಯಿ ರಕ್ಷ್ಯಾ (ಕಟಾ)–ದ್ವಿತೀಯ, ಮೋಹಿತ್ ಆರ್ (ಕಟಾ)–ದ್ವಿತೀಯ, (ಕುಮಿತೆ)–ತೃತೀಯ, ಪ್ರಣವಿ ಪಾಂಡೇಕರ್ (ಕಟಾ)–ಪ್ರಥಮ ಮತ್ತು (ಕುಮಿತೆ)–ತೃತೀಯ, ಪ್ರಭುವ್ ಪಾಂಡೇಕರ್ (ಕಟಾ)–ತೃತೀಯ ಮತ್ತು (ಕುಮಿತೆ)–ದ್ವಿತೀಯ, ಪೂರ್ವಿ ಪವಾರ್ (ಕಟಾ)–ದ್ವಿತೀಯ, (ಕುಮಿತೆ)–ತೃತೀಯ, ತೇಜಸ್ ಎಂ. (ಕಟಾ)–ದ್ವಿತೀಯ, ವಿರಾಟ್ ಪ್ರಸಾದ್ (ಕಟಾ)–ತೃತೀಯ ಮತ್ತು (ಕುಮಿತೆ)–ತೃತೀಯ, ದೈವಿಕ್ ಚಂದ್ರಪ್ರಕಾಶ್ ಕೊಪ್ಪ (ಕಟಾ)–ಪ್ರಥಮ, ನಾವಿಕಾಗೌಡ–(ಕಟಾ)–ತೃತೀಯ, (ಕುಮಿತೆ)–ತೃತೀಯ, ಧನ್ವಿ ಮಧುಕರ್ (ಕಟಾ) ಪ್ರಥಮ, ಆಶ್ವಿ ಅಕ್ಷಯ್ (ಕಟಾ) ಮತ್ತು ಕುಮಿತೆ ಪ್ರಥಮ ಬಹುಮಾನಗಳನ್ನು ಪಡೆದುಕೊಂಡಿದ್ದಾರೆ.

ಶಾಸಕ ಹರೀಶ್‌ಗೌಡರಿಗೆ ಸಚಿವ ಸ್ಥಾನಕ್ಕೆ ಮನವಿ



ಮೈಸೂರು, ನ.19–ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರಿಗೆ ಸಚಿವ ಸಂಪುಟ ಪುನರ್‌ರಚನೆ ಸಂದರ್ಭದಲ್ಲಿ ಸಚಿವ ಸ್ಥಾನ ಕಲ್ಪಿಸಿ ಇನ್ನೂ ಹೆಚ್ಚಿನ ಜನಪರ ಕಾರ್ಯಗಳನ್ನು ಮಾಡಲು ಅವಕಾಶ ನೀಡುವಂತೆ ಮೈಸೂರಿನ ಮೇಟಗಳ್ಳಿಯ ಶ್ರೀ ಮಹಾ ವಿದ್ಯಾಗಣಪತಿ ಸೇವಾ ಸಂಘ ಹಾಗೂ ಮಹದೇಶ್ವರ (ರೆವಿನ್ಯೂ) ಬಡಾವಣೆ ನಾಗರೀಕ ಹಿತಸಂರಕ್ಷಣಾ ಸಮಿತಿ ಅಧ್ಯಕ್ಷ ಕೆ.ಮರಿದೊಳ್ಳಯ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಕ್ಯಾನ್ಸರ್ ವೇಳೆ ದೇಹದ ಸ್ನಾಯು, ಸ್ನಾಯು ಶಕ್ತಿ ಕಳೆದುಕೊಳ್ಳುವ ಬಗ್ಗೆ ಕಾರಣ ಪತ್ತೆ

ಮಹಾಜನ ಕಾಲೇಜು ಸಂಶೋಧನಾ ವಿಭಾಗದ ಸಾಧನೆ


ಮೈಸೂರು,ನ.19(ಜಿಎ)–ಪೂಜಾ ಭಾಗವತ್ ಸ್ಮಾರಕ ಮಹಾಜನ ಸ್ನಾತಕೋತ್ತರ ಕಾಲೇಜು ಸಂಶೋಧನಾ ವಿಭಾಗವು ಕ್ಯಾನ್ಸರ್ ವೇಳೆ ದೇಹವು ಸ್ನಾಯು ಮತ್ತು ಸ್ನಾಯುಶಕ್ತಿ ಕಳೆದುಕೊಳ್ಳುವುದು ಹೇಗೆ ಎಂಬ ಬಗ್ಗೆ ಸಂಶೋಧನೆ ನಡೆಸಿ ಕಾರಣ ಪತ್ತೆ ಹಚ್ಚಿದ್ದು, ಇದಕ್ಕೆ ಈಗ ವಿಶ್ವ ಮಾನ್ಯತೆ ದೊರೆತಿದೆ ಎಂದು ಜೀವ ರಸಾಯನ ವಿಭಾಗದ ಪ್ರೊ.ಎ.ಜೆ. ಮಹಾದೇಶ್ ಪ್ರಸಾದ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕ್ಯಾನ್ಸರ್ ವೇಳೆ ಸ್ನಾಯು ನಾಶವಾಗುವ ಪರಿಸ್ಥಿತಿಗೆ ಕ್ಯಾಚೆಕ್ಸಿಯಾ ಎನ್ನಲಾಗುತ್ತದೆ. ಕ್ಯಾನ್ಸರ್ ರೋಗಿಗಳು ಈ ಸಮಸ್ಯೆ ಕಾರಣ ದೇಹದ ತೂಕ ಕಳೆದುಕೊಳ್ಳುತ್ತಾರೆ. ಕ್ಯಾನ್ಸರ್‌ಪೀಡಿತರಲ್ಲಿ ಶೇ.20ರಷ್ಟು ಮಂದಿ ಇದೇ ಕಾರಣದಿಂದಲೇ ಶೀಘ್ರ ಸಾವನ್ನಪ್ಪುತ್ತಾರೆ. ಹೀಗಾಗಿ ಈ ಸಮಸ್ಯೆ ಹೇಗೆ ಸೃಷ್ಟಿಯಾಗುತ್ತದೆ ಎಂಬುದನ್ನು ತಮ್ಮ ಸಂಶೋಧನೆ ಪತ್ತೆ ಹಚ್ಚಿದೆ. ಇದರಿಂದಾಗಿ ಇತರ ಯಾರು ಬೇಕಾದರೂ ಈ ಸಮಸ್ಯೆಯಿಂದ ಹೊರ ಬರುವ ಬಗ್ಗೆ ಸಂಶೋಧನೆ ನಡೆಸಿ ಔಷಧಿ ಕಂಡು ಹಿಡಿಯಬಹುದಾಗಿದೆ ಎಂದರು.

ಈ ಸಂಶೋಧನೆಯಲ್ಲಿ ತಾವು, ತಮ್ಮ ವಿದ್ಯಾರ್ಥಿ ಕೋಲ್ಕತಾ ಮೂಲದ ಡಾ.ಸೌತನ್ ಶೋ ಪಾಲ್ಗೊಂಡಿದ್ದೆವು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಖ್ಯಾತ ಸ್ನಾಯುತಜ್ಞ ಪ್ರೊ.ಉಪೇಂದ್ರ ಸಹಯೋಗ ನೀಡಿದರು. ಮಾನವನ ವಂಶವಾಹಿಗಳಿಗೆ ಸಮೀಪದ ವಂಶವಾಹಿ ಹೊಂದಿರುವ ಚಿಕ್ಕದಾದರೂ ಶಕ್ತಿಶಾಲಿ ಎನಿಸಿಕೊಂಡಿರುವ ಹಾಗೂ ಪೂರ್ಣ ಪಾರದರ್ಶನ ದೇಹ ಹೊಂದಿರುವ ಜೀಬ್ರಾಫಿಶ್ ಎಂಬ ಮೀನು ಬಳಸಿಕೊಳ್ಳಲಾಯಿತು. ಇದರ ದೇಹಕ್ಕೆ ಕ್ಯಾನ್ಸರ್ ಸೇರ್ಪಡೆ ಮಾಡಿ, ಆ ಮೂಲಕ ಈ ಸಂಶೋಧನೆ ನಡೆಸಲಾಯಿತು ಎಂದರು. ಗೋಷ್ಠಿಯಲ್ಲಿ ಸಂಸ್ಥೆ ವಿಜಯಲಕ್ಷ್ಮಿ ಭಾಗವತ್, ಸಿಇಒ ಪ್ರೊ.ರಮೇಶ್, ಡಾ.ಸೌತನ್ ಶೋ ಉಪಸ್ಥಿತರಿದ್ದರು.

ಇಂದಿರಾಗಾಂಧಿಯವರ 20 ಅಂಶದ ಕಾರ್ಯಕ್ರಮ ಸಮಾಜದ ಕಟ್ಟಕಡೆ ವ್ಯಕ್ತಿಯ ಅಭಿವೃದ್ಧಿಗೆ ಸಹಕಾರಿ

- ಮಾಜಿ ಸಂಸದೆ ತೇಜಸ್ವಿನಿ ರಮೇಶ್ ವಿವರಣೆ
- ಅವರ ಕಲ್ಯಾಣ ಕಾರ್ಯದ ಮುಂದುವರೆದ ಭಾಗವಾಗಿ ಗ್ಯಾರಂಟಿ ಯೋಜನೆಗಳು ಜಾರಿಯಾಗಿವೆ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಾಜಿ ಪ್ರಧಾನಿ ಇಂಧಿರಾಗಾಂಧಿ ಅವರ ಜನ್ಮದಿನದ ಕಾರ್ಯಕ್ರಮದಲ್ಲಿ ಮಾಜಿ ಸಂಸದೆ ತೇಜಸ್ವಿನಿ ರಮೇಶ್ ಪಾಲ್ಗೊಂಡು, ಇಂಧಿರಾಗಾಂಧಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಮೈಸೂರು,ನ.19(ಎಂಟಿವೈ)– ಉಕ್ಕಿನ ಮಹಿಳೆ ಎನಿಸಿರುವ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರು 20 ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ ದೇಶದ ಕಟ್ಟಕಡೆಯ ವ್ಯಕ್ತಿಯ ಅಭಿವೃದ್ಧಿಗೆ ಶ್ರಮಿಸಿದ್ದರು ಎಂದು ಮಾಜಿ ಸಂಸದೆ ತೇಜಸ್ವಿನಿ ರಮೇಶ್ ಹೇಳಿದರು.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ನಗರ ಮತ್ತು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಹುಟ್ಟುಹಬ್ಬದ ಅಂಗವಾಗಿ ಬುಧವಾರ ಆಯೋಜಿಸಿದ್ದ ಭಾರತದ ಉಕ್ಕಿನ ಮಹಿಳೆಗೆ ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪಂಚ ಗ್ಯಾರಂಟಿ ಯೋಜನೆಗೂ ಮೊದಲೇ ದೇಶದಲ್ಲಿ ಇಂಧಿರಾಗಾಂಧಿ ಅವರು 20 ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆ ತಂದು ಕಟ್ಟಕಡೆಯ ವ್ಯಕ್ತಿಯ ಅಭಿವೃದ್ಧಿಗಾಗಿ ಶ್ರಮಿಸಿದ್ದರು. ದೇಶದಲ್ಲಿ ರಾಜರಿಗೆ ಹಣ ನೀಡುವ ಪದ್ಧತಿ ನಿಲ್ಲಿಸಿದರು. ಇದರಿಂದ ದೇಶದಲ್ಲಿ ಇಂದಿರಾ ಗಾಂಧಿ ಅವರ ವಿರುದ್ಧ ಅಲೆ ಎದ್ದಿತು ಎಂದು ವಿಷಾದಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳ ಸೌಲಭ್ಯ ಪಡೆಯುತ್ತಿರುವವರೇ ಗ್ಯಾರಂಟಿ ವಿರೋಧಿಸುತ್ತಿದ್ದಾರೆ. ಹಾಗಿದ್ದರೆ ಯೋಜನೆಯ ಪ್ರಯೋಜನ ಪಡೆಯುವುದ ನಿಲ್ಲಿಸುವುದಿಲ್ಲ. ಜನಪರ ಯೋಜನೆಗಳು ಒಂದು ಪಕ್ಷದ ಕಮಿಟ್‌ಮೆಂಟ್. ಆ ಕಾರಣದಿಂದ ಕಾಂಗ್ರೆಸ್ ಬಡವರ ಪರ ಯೋಜನೆಗಳನ್ನು ಮೊದಲಿಂದಲೂ ಜಾರಿಗೊಳಿಸುತ್ತಾ ಬಂದಿದೆ ಎಂದು ತಿಳಿಸಿದರು.

ಭಾರತಕ್ಕೆ ವಿಶ್ವಮನ್ನಣೆ ತಂದುಕೊಟ್ಟು, ಎಲ್ಲಾ ನೋವು, ಅಪಮಾನವನ್ನು ಸಹಿಸಿಕೊಂಡು ದೇಶಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದವರು ಇಂದಿರಾ ಗಾಂಧಿ. ಬಾಂಗ್ಲಾ ದೇಶವನ್ನು ಪಾಕಿಸ್ತಾನದ ಕಪಿಮುಷ್ಟಿಯಿಂದ ಮುಕ್ತಿಗೊಳಿಸುವ ಮೂಲಕ ಭಾರತಕ್ಕೆ ಶಕ್ತಿ ತಂದುಕೊಟ್ಟರು. ಅಂದು ಚೈನಾದಿಂದ ಓಡಿಸಿದ ದಲೈಲಾಮರಿಗೆ ಭಾರತ ಆಶ್ರಯ ಕೊಟ್ಟಿದೆ. ಇಂದು ಶೇಖ್ ಹಸೀನಾ ಅವರಿಗೆ ಆಶ್ರಯ ನೀಡಿದೆ. ಶೇಖ್ ಹಸೀನಾ ಭಾರತದ ಮಗಳು. ನಂಬಿದವರನ್ನು ಭಾರತ ಎಂದೂ ಕೈ ಬಿಟ್ಟಿಲ್ಲ ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷಕ್ಕೆ ಅಗ್ನಿ ಪರೀಕ್ಷೆ ಎದುರಾದಾಗಲೆಲ್ಲಾ ಕರ್ನಾಟಕ ಕಾಂಗ್ರೆಸ್ ಪಕ್ಷವನ್ನು ಬಿಟ್ಟುಕೊಟ್ಟಿಲ್ಲ. ನಮಗೆ ಸೋಲು, ಗೆಲುವು ಮುಖ್ಯವಲ್ಲ. ದೇಶವನ್ನು 200 ವರ್ಷ ಆಳಿದ ಬ್ರಿಟಿಷರನ್ನು ಓಡಿಸಿದವರಿಗೆ 10 ವರ್ಷದಿಂದ ಅಧಿಕಾರದಲ್ಲಿರುವ ಬಿಜೆಪಿಯನ್ನು ಓಡಿಸುವುದು ಕಷ್ಟವಲ್ಲ. ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡಿದರೆ ಕಾಂಗ್ರೆಸ್ ಮತ್ತೆ ಅಧಿಕಾರದಲ್ಲಿ ಬರುತ್ತದೆ ಎಂದು ಹೇಳಿದರು.

ಪಾಕಿಸ್ತಾನದಲ್ಲಿ ಜಿನ್ನಾ ಅವರನ್ನು ಪೂಜೆ ಮಾಡುತ್ತಾರೆ. ಆದರೆ ಭಾರತದ ಪ್ರಥಮ ಪ್ರಧಾನ ಮಂತ್ರಿಯನ್ನು ಅವಹೇಳನ ಮಾಡುವ ಮೂಲಕ ಇತಿಹಾಸವನ್ನು ಅಳಿಸಿ ಹಾಕುವ ಕೆಲಸ ಮಾಡುತ್ತಿದ್ದಾರೆ. ಚಿತ್ರನಟಿ ಕಂಗನಾ ರಾಣಾವತ್ ಅವರಿಗೆ ಎರಡು ಚಾಪ್ಟರ್ ಓದಲು ಬರುವುದಿಲ್ಲ. ಅಂತಹವರು ತುರ್ತು ಪರಿಸ್ಥಿತಿಯನ್ನು ಮೂವಿ ಮಾಡುತ್ತಾರೆ ಎಂದು ಕಿಡಿಕಾರಿದರು.

ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿ, ಇಂದಿರಾಗಾಂಧಿ ಅವರು ಜೀವನದುದ್ದಕ್ಕೂ ಅನೇಕ ಸವಾಲನ್ನು ಎದುರಿಸಿದ್ದರು. ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ದೇಶದಲ್ಲಿ ಇದ್ದಂತಹ ಅನೇಕ ದೊಡ್ಡ ದೊಡ್ಡ ಸಮಸ್ಯೆಗಳನ್ನು ಇಂದಿರಾಗಾಂಧಿ ಎದುರಿಸಿದ್ದರು. ಏಷ್ಯಾದಲ್ಲಿ ಮಹಿಳೆಯರ ರಾಜಕಾರಣಕ್ಕೆ ಹೆಚ್ಚು ಮನ್ನಣೆ ಸಿಗುತ್ತಿರಲಿಲ್ಲ. ಈ ಸಮಯದಲ್ಲೇ ಜಗತ್ತಿನಲ್ಲಿ ಮಹಿಳಾ ರಾಜಕಾರಣಕ್ಕೆ ಒತ್ತು ಕೊಟ್ಟವರು ಇಂದಿರಾಗಾಂಧಿ. ಚೀನಾ, ಪಾಕಿಸ್ತಾನವನ್ನು ಎದುರಿಸಿ ನಿಂತು ಹೊಸ ರಾಷ್ಟ್ರದ ಉದಯಕ್ಕೆ ಕಾರಣರಾದವರು ಇಂದಿರಾ ಗಾಂಧಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಸಚಿವ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್, ಟಿ.ವಿ.ಚಿಕ್ಕಣ್ಣ, ಬಿ.ಎಲ್.ಭೈರಪ್ಪ ಮೋದಾಮಣಿ, ಪುಷ್ಪ ಲತಾ, ಟಿ.ಬಿ.ಚಿಕ್ಕಣ್ಣ, ಮಾಜಿ ಉಪಮೇಯರ್ ಪುಷ್ಪವಲ್ಲಿ, ಮಾಜಿ ಸಚಿವ ಎಂ.ಶಿವಣ್ಣ, ಮುಖಂಡರಾದ ರವಿ, ರಮೇಶ್, ಈಶ್ವರ್ ಚಕ್ಕಡಿ, ನಾಗೇಶ್ ಇನ್ನಿತರರಿದ್ದರು.

ಭತ್ತ, ಜೋಳ ಖರೀದಿ ಕೇಂದ್ರ ತೆರೆಯಲು ಒತ್ತಾಯಿಸಿ ರೈತರ ಪ್ರತಿಭಟನೆ



ಭತ್ತ ಮತ್ತು ಜೋಳ ಖರೀದಿ ಕೇಂದ್ರ ತೆರೆಯಲು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದಿಂದ ಮೈಸೂರಿನ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ನ.19(ಜಿಎ)–ಜಿಲ್ಲೆಯಲ್ಲಿ ಭತ್ತ ಮತ್ತು ಜೋಳ ಖರೀದಿ ಕೇಂದ್ರ ತೆರೆಯಲು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದಿಂದ ನಗರದ ನಜರ್‌ಬಾದ್‌ನಲ್ಲಿರುವ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ರೈತರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಭತ್ತ ಬೆಳೆದಿದ್ದಾರೆ. ಕೆ.ಆರ್.ನಗರ ತಾಲೂಕು ಭತ್ತದ ಕಣಜ ಎಂದೇ ಹೆಸರಾಗಿದ್ದು, ಈಗಾಗಲೇ ಕಟಾವು ಆರಂಭವಾಗಿದೆ. ಆದರೆ, ಇನ್ನೂ ಖರೀದಿ ಕೇಂದ್ರ ಆರಂಭವಾಗಿಲ್ಲ. ಇದರಿಂದ ರೈತರು ದಲ್ಲಾಳಿಗಳಿಗೆ ಭತ್ತ ಮಾರಿ ನಷ್ಟ ಅನುಭವಿಸುವಂತಾಗಿದೆ. ಹೀಗಾಗಿ ಕೂಡಲೇ ಖರೀದಿ ಕೇಂದ್ರ ಆರಂಭಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಹಕ್ಕೊತ್ತಾಯಗಳು: ಕೂಡಲೇ ಸರ್ಕಾರ ಎಲ್ಲಾ ತಾಲೂಕುಗಳಲ್ಲಿ ಅಗತ್ಯವಿರುವ ಕಡೆ ಖರೀದಿ ಕೇಂದ್ರಗಳನ್ನು ತೆರೆದು ಭತ್ತವನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ ಕೊಳ್ಳಬೇಕು. ರಾಜ್ಯದ ಪಡಿತರ ವ್ಯವಸ್ಥೆಗೆ ಬೇಕಾದ ಅಕ್ಕಿ ಪೂರೈಕೆಗೆ ಅಗತ್ಯವಿರುವ ಭತ್ತವನ್ನು ರೈತರಿಂದಲೇ ನೇರವಾಗಿ ಖರೀದಿ ಮಾಡಬೇಕು. ಈ ಹಿಂದೆ ರೈಸ್ ಮಿಲ್‌ಗಳಿಗೂ ಕನಿಷ್ಠ ಬೆಂಬಲ ಬೆಲೆಯಲ್ಲಿ ಭತ್ತ ಕೊಳ್ಳಲು ಅವಕಾಶವಿತ್ತು. ಅದನ್ನು ಮತ್ತೆ ಜಾರಿಗೆ ತರಬೇಕು. ಜಿಲ್ಲೆಯಲ್ಲಿ ಮುಸುಕಿನ ಜೋಳ ಬೆಳೆದಿದ್ದು, ಬೆಲೆ ಕುಸಿತದಿಂದ ರೈತರು ಕಂಗಾಲಾಗಿದ್ದಾರೆ. ಹೀಗಾಗಿ ಕೂಡಲೇ ಜೋಳ ಖರೀದಿ ಕೇಂದ್ರ ತೆರೆದು ಬೆಂಬಲ ಬೆಲೆಯಡಿ ಸರ್ಕಾರವೇ ಖರೀದಿಸಬೇಕು. ಖರೀದಿ ಕೇಂದ್ರಗಳಲ್ಲಿ ಅವ್ಯವಹಾರ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ, ಕಾರ್ಯದರ್ಶಿ ಹೊಸಕೋಟೆ ಬಸವರಾಜು, ತಾಲೂಕು ಅಧ್ಯಕ್ಷ ಆನಂದೂರು ಪ್ರಭಾಕರ್, ಮಂಡಕಳ್ಳಿ ಮಹೇಶ್, ನಾಗನಹಳ್ಳಿ ಚಂದ್ರಶೇಖರ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಯೋಗಿಣಿ ಎತ್ತರ ಜಿಗಿತದಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ



ಸುತ್ತೂರು,ನ.19–ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಇತ್ತೀಚಿಗೆ ಆಯೋಜಿಸಿದ್ದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯ 9ನೇ ತರಗತಿಯ ಯೋಗಿಣಿ ಎತ್ತರಜಿಗಿತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ವಿಜೇತ ಕ್ರೀಡಾಪಟುವನ್ನು ಸಂಸ್ಥೆಯ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು ಹಾಗೂ ನೌಕರ ವೃಂದದವರು ಅಭಿನಂದಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.11.2025 ಗುರುವಾರ, ಮಳೆ ನಕ್ಷತ್ರ: ಅನೂರಾಧ, 20.11.2025 ರಿಂದ 02.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ವಿಶಾಖ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ.ಸಿ.ನಾಗಣ್ಣ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎ.ಎನ್.ಶೀಲಾ, ವ್ಯಾಖ್ಯಾನ–ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಸಹಕಾರ ಸಪ್ತಾಹ–2025, 9.00 ಕನ್ನಡದ ಕಸ್ತೂರಿ–ನಾ ಕಸ್ತೂರಿ ನೆನಪುಗಳ ಮಾಲಿಕೆ, ಮುದ್ದುರಾಮ ಕಂಡ ನಾ. ಕಸ್ತೂರಿ ಮಾತನಾಡಿದ್ದಾರೆ ಹಿರಿಯ ಕವಿ ಕೆ.ಸಿ.ಶಿವಪ್ಪ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಚಂದನ್ ಕುಮಾರ್–ಕೊಳಲುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ: ಜಿ.ಶಾಂತಕುಮಾರ್ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಸಾವಯವ ಕೀಟನಾಶಕಗಳ ತಯಾರಿಕೆ ಕುರಿತು ಸಂವಾದ ಭಾಗವಹಿಸುತ್ತಾರೆ–ಕೆ.ಆರ್.ಪೇಟೆ ತಾಲೂಕು ಸೀಳನೆರೆ ಹೋಬಳಿ ಚಟ್ಟನಹಳ್ಳಿಯ ಸಿ.ಕೆ.ರಾಮೇಗೌಡ ಮತ್ತು ಪಾಂಡವಪುರ ತಾಲೂಕು ಚಿನಕುರಳಿ ಹೋಬಳಿ ಚಿಕ್ಕಬೋಗನಹಳ್ಳಿಯ ಸಿ.ಬಿ.ಕಾಂತರಾಜು, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 9.30 ಕನ್ನಡ ಭಾರತಿ, 10.00 ಪತ್ತೇದಾರಿ ನಾಟಕ–ಚೋಳರ ಕಾಲದ ರಾಜದಂಡ

- **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ.
- **ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಮತ್ತು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ), ಶ್ರೀ ವಿವೇಕಾನಂದ ಪದವಿಪೂರ್ವ ಕಾಲೇಜು:** ಬೆಳಗ್ಗೆ 9ಕ್ಕೆ ಮೈಸೂರು ಜಿಲ್ಲಾ ಮಟ್ಟದ ಸಾಂಸ್ಕೃತಿಕ ಮತ್ತು ಸಹಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಅಧ್ಯಕ್ಷ ಡಾ.ಜೆ.ಶಶಿಧರಪ್ರಸಾದ್, ಅಧ್ಯಕ್ಷತೆ: ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕಿ ಎಂ.ಪಿ.ನಾಗಮ್ಮ, ಮುಖ್ಯ ಅತಿಥಿಗಳು: ಟ್ರಸ್ಟ್ ಕಾರ್ಯದರ್ಶಿ ಶಿವಸುಂದರ ಸತ್ಯೇಂದ್ರ, ಧರ್ಮದರ್ಶಿ ಜಿ.ರಮೇಶ್, ಪ್ರಾಂಶುಪಾಲ ಡಾ.ಎಂ.ವೆಂಕಟೇಶ; ಮಧ್ಯಾಹ್ನ 2.30ಕ್ಕೆ ಸಮಾರೋಪ ಸಮಾರಂಭ, ಬಹುಮಾನ ವಿತರಣೆ: ಟ್ರಸ್ಟ್ ಅಧ್ಯಕ್ಷ ಜೆ. ಶಶಿಧರ ಪ್ರಸಾದ್, ಸ್ಥಳ: ಶ್ರೀ ವಿವೇಕಾನಂದ ಪದವಿಪೂರ್ವ ಕಾಲೇಜು ಸಭಾಂಗಣ, ಜಯಲಕ್ಷ್ಮಿಪುರಂ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಿಸಿಓಡಿ ಮತ್ತು ಮಕ್ಕಳಲ್ಲಿ ಕಂಡು ಬರುವ ಚರ್ಮರೋಗಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸೆ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10ರಿಂದ.
- **ಅಮೃತಾಂಶು ಟ್ರಸ್ಟ್, ಸುಯೋಗ್ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ತಪಾಸಣಾ ಘಟಕ ಮತ್ತು ಕೆ.ಆರ್. ಆಸ್ಪತ್ರೆ :** ಉಚಿತ ಕಣ್ಣಿನ ತಪಾಸಣೆ, ಶಸ್ತ್ರ ಚಿಕಿತ್ಸಾ ಶಿಬಿರ, ಸ್ಥಳ: 2767, ಪಾಂಚಜನ್ಯ, 5ನೇ ಮುಖ್ಯ ರಸ್ತೆ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ
- **ಆರೋಗ್ಯ ಭಾರತಿ, ಮೈಸೂರು ವಿಭಾಗ :** ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಶಿಬಿರ, ಉದ್ಘಾಟನೆ: ಆರೋಗ್ಯ ಭಾರತಿ ಜಿಲ್ಲಾ ಗೌರವಾಧ್ಯಕ್ಷ ಪ್ರಾಣೇಶ್, ಜಿಲ್ಲಾಧ್ಯಕ್ಷ ಡಾ. ಮಹೇಶ್ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಜಿಲ್ಲಾ ಕಾರ್ಯದರ್ಶಿ ಗಣೇಶ್, ಮೈಸೂರು ನಗರ ಯುವ ವ್ಯವಸ್ಥಾಪಕ ಗೋವಿಂದರಾಜು, ಜಿಲ್ಲಾ ಸಹ ಕಾರ್ಯದರ್ಶಿ ಕೃಷ್ಣ, ನಗರ ಕಾರ್ಯದರ್ಶಿ ನಿಗಿನ್, ಮಹಿಳಾ ಘಟಕ ನಗರ ಕಾರ್ಯದರ್ಶಿ ಶ್ರೀದೇವಿ, ಸಹ ಕಾರ್ಯದರ್ಶಿ ಶ್ರೀಮತಿ ಜಯಲಕ್ಷ್ಮಿ, ಅಧ್ಯಕ್ಷತೆ : ಆರೋಗ್ಯ ಭಾರತಿ ಮೈಸೂರು ನಗರಾಧ್ಯಕ್ಷ ಲಕ್ಷ್ಮೀನಾರಾಯಣ್, ಸ್ಥಳ: ವಿವೇಕ ಫಾರಂ, 199/3ಎ, ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಎದುರು, ಇಲವಾಲ, ಬೆಳಗ್ಗೆ 10 ರಿಂದ.
- **ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.
- **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** 65ನೇ ವಾರ್ಷಿಕ ಪೂಜಾ ಮಹೋತ್ಸವ, ಬೆಳಗ್ಗೆ 5 ರಿಂದ ಗಣಪತಿ ಹೋಮ, ತುಪ್ಪದ ಅಭಿಷೇಕ, ವಾದ್ಯದೊಂದಿಗೆ ಶ್ರೀ ಅಯ್ಯಪ್ಪಸ್ವಾಮಿಗೆ ಅಲಂಕಾರ ಪೂಜಾ, ಮಧ್ಯಾಹ್ನ 3 ರಿಂದ ಪಾಲಕ್ಕೊಂಬು ಮೆರವಣಿಗೆ, ಸಂಜೆ 7 ರಿಂದ ಅಯ್ಯಪ್ಪನ ಭಜನೆ, ಪಾಲಕ್ಕೊಂಬು ನೃತ್ಯ, ತಿರಿಉಳಿಚಲ್, ಅಯ್ಯಪ್ಪನ ಗೀತೆಗಳು, ವೆಟ್ಟುಂ ತಡವು, ಪಾಲ್‌ಕಿಂಡಿ ಉತ್ಸವ, ಕೊಂಡ, ಮಂಗಳಂ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ಹಾಗೂ ಶ್ರೀ ಗುರುವಾಯೂರಪ್ಪನ್ ದೇವಾಲಯ, ಚಾಮುಂಡಿಬೆಟ್ಟದ ಪಾದ.
- **ಶ್ರೀ ಶ್ರೀ ವಿಶ್ವಕರ್ಮ ಸೀತಾರಾಮ ಮಂದಿರ ಮತ್ತು ಶ್ರೀ ಮನೆಮಂಚಮ್ಮ ದೇವಸ್ಥಾನ :** ಶ್ರೀವೀರನಗೆರೆ ಮನೆ ಮಂಚಮ್ಮ ದೇವಿಯ ಪೂಜಾ ಮಹೋತ್ಸವ, ವಾರ್ಷಿಕೋತ್ಸವ ಮತ್ತು ಅನ್ನಸಂತರ್ಪಣೆ, ಬೆಳಗ್ಗೆ 7.30ಕ್ಕೆ ಶ್ರೀ ಮಹಾಗಣಪತಿ ಪೂಜೆ, ಪುಣ್ಯಾಹ, ನವಗ್ರಹ ಪೂಜಾ ಅಭಿಷೇಕ ಹೋಮಾದಿಗಳು, ಪೂರ್ಣಾಹುತಿ, ಮಧ್ಯಾಹ್ನ 12.15ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಅನ್ನಸಂತರ್ಪಣೆ, ಸ್ಥಳ: ಶ್ರೀ ಮನೆ ಮಂಚಮ್ಮ ದೇವಸ್ಥಾನ, ವೀರನಗೆರೆ, ಲಷ್ಕರ್ ಮೊಹಲ್ಲಾ.
- **ಸಾವರ್ಕರ್ ಪ್ರತಿಷ್ಠಾನ :** ಇಂದಿರಾ ಗಾಂಧಿ ಜಯಂತಿ, ಇಂದಿರಾ ಗಾಂಧಿ ಭಾವಚಿತ್ರಕ್ಕೆ ಪುಷ್ಪಾರ್ಚನೆ, ಅಂಚೆ ಚೀಟಿ, ಸಾಕ್ಷ್ಯಚಿತ್ರ ಪ್ರದರ್ಶನ, ಸ್ಥಳ: ಗ್ರೀನ್ ಹೆರಿಟೇಜ್ ಹೋಟೆಲ್ ಆವರಣ, ಬೆಳಗ್ಗೆ 11.30ಕ್ಕೆ.
- **ಅಭಿನವ ಶ್ರೀ ವೀರಭದ್ರೇಶ್ವರ ನೃತ್ಯ ತಂಡ:** ಕಾರ್ತಿಕ ಮಾಸದ ಅಮಾವಾಸ್ಯೆ ಪ್ರಯುಕ್ತ ಶ್ರೀ ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಮಲೆ ಮಹದೇಶ್ವರಸ್ವಾಮಿಗೆ ರುದ್ರಾಭಿಷೇಕ, ಉತ್ಸವ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸ್ಥಳ: ಕಿರಾಳು ಮಹೇಶ್ ಮನೆ, ಗೌರಿಶಂಕರ ನಗರ, ಸಂಜೆ 5ಕ್ಕೆ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಉತ್ತಿಷ್ಠ ಭಾರತ ಪ್ರತಿಷ್ಠಾನ:** ದಾಸ ಶ್ರೇಷ್ಠ ಕನಕದಾಸರ ಜಯಂತ್ಯೋತ್ಸವದ ಪ್ರಯುಕ್ತ ಕನಕದಾಸರ ಕೀರ್ತನೆಗಳ ಗಾಯನ, ಸ್ವಾಗತ : ಶ್ರೀಮತಿ ಮ.ನ. ಲತಾ ಮೋಹನ್, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನಕದಾಸರ ಕುರಿತು : ಸಂಸ್ಕೃತ ವಿದುಷಿ ಡಾ.ಕೆ. ಲೀಲಾಪ್ರಕಾಶ್, ಮುಖ್ಯ ಅತಿಥಿಗಳು: ಪ್ರಾಂಶುಪಾಲ ದೇವರಾಜು ಪಿ.ಚಿಕ್ಕಹಳ್ಳಿ, ಸ್ಥಳ: ಕನ್ನಡ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪ್ರವಚನ: ಪಂಡಿತ್ ವ್ಯಾಸತೀರ್ಥಚಾರ್ಯ ಅವರಿಂದ. ವಿಷಯ: 'ಮಹಾಭಾರತ ತಾತ್ಪರ್ಯ ನಿರ್ಣಯ'. ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ. ಸಂಜೆ 5 ಗಂಟೆಗೆ.
- **ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ :** ಸಹಕಾರ ಸಪ್ತಾಹ ಹಾಗೂ ಕನ್ನಡ ರಾಜ್ಯೋತ್ಸವ, ಅಧ್ಯಕ್ಷತೆ: ಸೊಸೈಟಿ ಅಧ್ಯಕ್ಷ ಎಂ.ಡಿ.ಗೋಪಿನಾಥ್, ಮುಖ್ಯ ಅತಿಥಿಗಳು : ಮನು ಮಂಜುಳ, ಉಪಸ್ಥಿತರು: ಉಪಾಧ್ಯಕ್ಷೆ ಎಂ.ಎನ್. ಸೌಮ್ಯ, ಖಜಾಂಚಿ ಕೆ. ನಾಗರಾಜ, ಸಿ.ವಿ. ಪಾರ್ಥಸಾರಥಿ, ಹೆಚ್.ಎಸ್. ಪ್ರಶಾಂತ್ ತಾತಾಚಾರ್, ಹೆಚ್.ಪಿ. ಚೇತನ್, ಎನ್. ಫಣಿರಾಜ್, ಮಹಿಮ, ಕೆ.ವಿಕ್ರಂ, ಎನ್.ನಾಗಶ್ರೀ, ಕೆ.ಎನ್.ಅರುಣ್, ಶಿವರುದ್ರಪ್ಪ, ಎಸ್. ರಾಜಮ್ಮ, ಶಾಶ್ವತಿ ನಾಯಕ, ಸ್ಥಳ: ಸೊಸೈಟಿ ಆವರಣ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ

ಬ್ಯಾಡರಹಳ್ಳಿಯಲ್ಲಿಂದು, ಕೆ.ಆರ್.ನಗರ ತಾಲೂಕು

- **ಶ್ರೀ ಲಕ್ಷ್ಮೀದೇವಮ್ಮ ದೇವಸ್ಥಾನ :** ಶ್ರೀ ಲಕ್ಷ್ಮೀದೇವಮ್ಮ ದೀಪೋತ್ಸವ, ಸಂಜೆ 4ಕ್ಕೆ ಹೋಮ, ಇತರೆ ಪೂಜಾ ಕಾರ್ಯಕ್ರಮಗಳು, ಸಂಜೆ 7.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 20 ಗುರುವಾರ 2025

ಸಂಪುಟ: 46 | ಸಂಚಿಕೆ: 212 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಬೆಂಗಳೂರಲ್ಲಿ ಹಾಡಹಗಲೇ ಎಟಿಎಂ ವಾಹನ ಹೈಜಾಕ್; 7.11 ಕೋಟಿ ದರೋಡೆ



ಬೆಂಗಳೂರು,ನ.19–ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಬುಧವಾರ ಮಧ್ಯಾಹ್ನ ಇನ್ನೋವಾ ಕಾರಿನಲ್ಲಿ ಬಂದ ಗ್ಯಾಂಗ್, ಎಟಿಎಂಗೆ ಹಣ ಹಾಕಲು ಹೊರಟಿದ್ದ ವಾಹನ ತಡೆದು ಬರೋಬ್ಬರಿ 7.11 ಕೋಟಿ ರೂ ದೋಚಿಕೊಂಡು ಪರಾರಿಯಾಗಿದೆ.

ಸೌತ್ ಎಂಡ್ ಸರ್ಕಲ್ ಬಳಿಯ ಎಟಿಎಂಗೆ ಹಣ ಹಾಕಲೆಂದು ಜಿಜೆ 01 ಹೆಚ್‌ಟಿ 9173 ಸಂಖ್ಯೆ ವಾಹನದಲ್ಲಿ ಹಣ ತುಂಬಿಕೊಂಡು ಅಶೋಕ ಪಿಲ್ಲರ್ ಬಳಿ ತೆರಳುತ್ತಿದ್ದ ವೇಳೆ ಇನ್ನೋವಾ ಕಾರಿನಲ್ಲಿ ಬಂದ ದುಷ್ಕರ್ಮಿಗಳು ವಾಹನವನ್ನು ತಡೆದು ನಾವು ಆರ್‌ಬಿಐನವರು ಎಂದು ಹೇಳಿಕೊಂಡಿದ್ದಾರೆ. ಅಲ್ಲದೇ ನೀವು ನಿಯಮ ಉಲ್ಲಂಘಿಸಿದ್ದೀರಿ. ಪೊಲೀಸ್ ಠಾಣೆಗೆ ಬನ್ನಿ ಎಂದು ಹಣ ಇದ್ದ ಸಿಎಂಎಸ್ ವಾಹನ ಹೈಜಾಕ್ ಮಾಡಿ ತಂದಿದ್ದಾರೆ. ನಂತರ ಡೇರಿ ಸರ್ಕಲ್ ಫ್ಲೈಓವರ್‌ನಲ್ಲಿ ವಾಹನ ನಿಲ್ಲಿಸಿ ಹಣವನ್ನು ತಮ್ಮ ಇನ್ನೋವಾ ಕಾರಿಗೆ ತುಂಬಿಕೊಂಡು ಪರಾರಿಯಾಗಿದ್ದಾರೆ. ಎಟಿಎಂ ವಾಹನದಲ್ಲಿ ಒಟ್ಟು 4 ಜನ ಸಿಎಂಎಸ್ ಸಿಬ್ಬಂದಿ ಇದ್ದರು. ಓರ್ವ ಡ್ರೈವರ್, ಇಬ್ಬರು ಗನ್‌ಮ್ಯಾನ್, ಮತ್ತೊಬ್ಬ ಹಣ ಹಾಕುವ ಸಿಬ್ಬಂದಿ ಇದ್ದು, ಸದ್ಯ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಇವರ ವಿಚಾರಣೆ ನಡೆಯುತ್ತಿದೆ. ಫಿಂಗರ್ ಪ್ರಿಂಟ್ ತಂಡ ಹಾಗೂ ಡಾಗ್ ಸ್ಕ್ವಾಡ್ ಕೂಡ ಪರಿಶೀಲಿಸಿವೆ.

ನಕಲಿ ನಂಬರ್ ಪ್ಲೇಟ್: ದರೋಡೆಕೋರರು ತಂದಿದ್ದ ಇನ್ನೋವಾ ಕಾರಿಗೆ ನಕಲಿ ನಂಬರ್ ಪ್ಲೇಟ್ ಅಳವಡಿಸಿರುವುದು ಬೆಳಕಿಗೆ ಬಂದಿದೆ. ಕೆಎ 03 ಎನ್‌ಸಿ 8052 ಸಂಖ್ಯೆಯ ಇನ್ನೋವಾ ▶ 6ನೇ ಪುಟಕ್ಕೆ

ಸಿಬ್ಬಂದಿ ಮೇಲೆ ಅನುಮಾನ

ಎಟಿಎಂಗೆ ಹಣ ತುಂಬುವ ಗುತ್ತಿಗೆ ಪಡೆದಿರುವ ಸಿಎಂಎಸ್ ಏಜೆನ್ಸಿ ಸಿಬ್ಬಂದಿ ಮೇಲೆಯೇ ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ. ಘಟನೆ ಮಧ್ಯಾಹ್ನ 1 ಗಂಟೆ 15 ನಿಮಿಷಕ್ಕೆ ನಡೆದಿದೆ. ಆದರೆ ತಡವಾಗಿ ಅಂದರೆ 2 ಗಂಟೆ 15 ನಿಮಿಷ ಆಗಿದ್ದರೂ ಯಾರೊಬ್ಬರೂ ಪೊಲೀಸರಿಗೆ ದೂರು ನೀಡಿರಲಿಲ್ಲ. ಸ್ಥಳೀಯರು ಹೀಗೊಂದು ದೊಡ್ಡ ಮಟ್ಟದಲ್ಲಿ ರಾಬರಿ ಆಗಿದೆ ಎಂದು ಕಂಟ್ರೋಲ್ ರೂಮ್‌ಗೆ ಮಾಹಿತಿ ನೀಡಿದ್ದಾರೆ. ಹೀಗಾಗಿ ಇಡೀ ಪ್ರಕರಣದಲ್ಲಿ ಪೊಲೀಸರಿಗೆ ಅನುಮಾನ ಶುರುವಾಗಿದೆ.

ಆರೋಪಿಗಳ ಸುಳಿವು ಸಿಕ್ಕಿದೆ...



“ಬೆಂಗಳೂರು ನಗರದಲ್ಲಿ ನಡೆದ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಳಿವು ಸಿಕ್ಕಿದ್ದು, ಆರೋಪಿಗಳನ್ನು ಶೀಘ್ರ ಬಂಧಿಸುತ್ತೇವೆ. ಎಟಿಎಂಗಳಿಗೆ ಹಣ ಹಾಕುವ ಮಾಹಿತಿಯನ್ನು ಆರೋಪಿಗಳಿಗೆ ಯಾರು ನೀಡಿದ್ದಾರೆ. ಹಣ ಹಾಕುವವರಲ್ಲಿ ಯಾರಾದರೂ ಇದರ ಹಿಂದೆ ಇರುವ ಕುರಿತು ಮಾಹಿತಿ ಸಿಕ್ಕಿದೆ. ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಬೆಂಗಳೂರಿನಲ್ಲಿ ಹಾಡುಹಗಲೇ ಇಂತಹ ಘಟನೆ ನಡೆದಿಲ್ಲ. 7 ಕೋಟಿಗೂ ಹೆಚ್ಚು ಮೊತ್ತದ ಹಣ ದರೋಡೆ ಮಾಡಲಾಗಿದೆ. ವಾಹನಗಳ ನಂಬರ್ ಸಿಕ್ಕಿದೆ. ಕೃತ್ಯ ಎಸಗಿದವರು ಇಲ್ಲಿಯವರಾ... ಹೊರ ರಾಜ್ಯದಲ್ಲಿಯವರಾ ಎಂದು ತನಿಖೆ ನಡೆಯುತ್ತಿದೆ. ತನಿಖೆ ದೃಷ್ಟಿಯಿಂದ ಎಲ್ಲ ಮಾಹಿತಿ ಹಂಚಿಕೊಳ್ಳಲಾಗುವುದಿಲ್ಲ.

–ಡಾ.ಜಿ.ಪರಮೇಶ್ವರ್, ಗೃಹ ಸಚಿವ

ಬಿಹಾರ ನೂತನ ಸಿಎಂ ಆಗಿ ಇಂದು ನಿತೀಶ್‌ಕುಮಾರ್ ಪ್ರಮಾಣ



ಪಾಟ್ನಾ: ಬಿಹಾರ ರಾಜಧಾನಿ ಪಾಟ್ನಾದಲ್ಲಿ ಬುಧ'ವಾರ ನಡೆದ ಜೆಡಿಯು ಶಾಸಕಾಂಗ ಪಕ್ಷದ ಸಭೆಯಲ್ಲಿ ಹೊಸದಾಗಿ ಆಯ್ಕೆಯಾದ ಶಾಸಕರು, ಜೆಡಿ(ಯು)ಮುಖ್ಯಸ್ಥ ನಿತೀಶ್ ಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿದರು. ಎನ್‌ಡಿಎ ಸಭೆಗೂ ಮುಂಚಿತವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ರಾಜ್ಯ ಸಚಿವ ಶ್ರಾವಣ್‌ಕುಮಾರ್ ಹೇಳಿದ್ದಾರೆ. ನಂತರ ನಿತೀಶ್‌ಕುಮಾರ್ ಅವರನ್ನು ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆ ಮಾಡುವ ನಿರೀಕ್ಷೆಯಿದೆ. ಇತ್ತೀಚೆಗೆ ಮುಕ್ತಾಯಗೊಂಡ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಭರ್ಜರಿ ಗೆಲುವು ಸಾಧಿಸಿದ್ದು, ಗುರುವಾರ ಪಾಟ್ನಾದ ಐತಿಹಾಸಿಕ ಗಾಂಧಿ ಮೈದಾನದಲ್ಲಿ ನಿತೀಶ್‌ಕುಮಾರ್ 10ನೇ ಬಾರಿಗೆ ಬಿಹಾರ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಬಿಜೆಪಿ ತನ್ನ ಶಾಸಕಾಂಗ ಪಕ್ಷದ ನಾಯಕರಾಗಿ ಸಾಮ್ರಾಟ್ ಚೌಧರಿ, ವಿಜಯ್ ಕುಮಾರ್ ಸಿನ್ಹಾರನ್ನು ಆಯ್ಕೆ ಮಾಡಿದ್ದು, ಈ ಇಬ್ಬರು ನೂತನ ಎನ್‌ಡಿಎ ಸರ್ಕಾರದಲ್ಲಿ ಉಪಮುಖ್ಯಮಂತ್ರಿಗಳಾಗಿ ನಾಳೆ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ.

ಸಿಎಂ ಬದಲಾವಣೆ ವಿಚಾರವಾಗಿ ಹೈಕಮಾಂಡ್ ಶೀಘ್ರವೇ ನಿರ್ಧಾರ ಕೈಗೊಳ್ಳಬೇಕು



ಮುನಿಯಪ್ಪ

ನವದೆಹಲಿ: ಮುಖ್ಯಮಂತ್ರಿ ಬದಲಾವಣೆ, ಸಚಿವ ಸಂಪುಟ ಪುನರಾಚನೆ ವಿಚಾರದಲ್ಲಿ ಹೈಕಮಾಂಡ್ ಶೀಘ್ರವೇ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಸಚಿವ ಕೆ.ಹೆಚ್.ಮುನಿಯಪ್ಪ ಆಗ್ರಹಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿ ಬಳಿಕ ದೆಹಲಿಯಲ್ಲಿ ಮಾತನಾಡಿದ ಅವರು, ಸಿಎಂ ಬದಲಾವಣೆ ಸೇರಿ ಎಲ್ಲ ಗೊಂದಲಕ್ಕೂ ಮಲ್ಲಿಕಾರ್ಜುನ ಖರ್ಗೆ ಅವರೇ ಉತ್ತರ ಕೊಡಬೇಕು. ಸಿಎಂ ಆಯ್ಕೆ ಸಮಯದಲ್ಲಿ ಏನೇ ಮಾತು ಕೊಟ್ಟಿದ್ದರೂ ಬೇಗನೇ ತೀರ್ಮಾನ ಮಾಡಿ ಎಂದು ಹೇಳಿದ್ದೇನೆ. ಸಿದ್ದರಾಮಯ್ಯ ಹೈಕಮಾಂಡ್ ಮಾತಿಗೆ ಬದ್ಧರಾಗಿದ್ದಾರೆ ಎಂದು ಹೇಳಿದ್ದಾರೆ. ಡಿಸಿಎಂ ಕೂಡ ಪಕ್ಷದ ಶಿಸ್ತಿನ ಸಿಪಾಯಿ ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ಹೈಕಮಾಂಡ್ ಒಂದು ತೀರ್ಮಾನ ಮಾಡಬೇಕು, ಇಂತಹ ಗೊಂದಲದಿಂದ ಅಭಿವೃದ್ಧಿ ಕೆಲಸಗಳಿಗೆ ಅಡ್ಡಿ ಉಂಟಾಗಲಿದೆ ಎಂದಿದ್ದಾರೆ.

ರೂಪಾ ಶಶಿಧರ್‌ಗೆ ಸಚಿವ ಸ್ಥಾನ ನೀಡುವ ವಿಚಾರಕ್ಕೆ ಪ್ರತಿಕ್ರಿಯಿಸಿ, ನಾನು ಕಾಂಗ್ರೆಸ್‌ನಲ್ಲಿ ಹಿರಿಯ ನಾಯಕ. ನಾನು ಬೇರೆ ಜಿಲ್ಲೆಯಿಂದ ಆಯ್ಕೆಯಾಗಿದ್ದೇನೆ. ರೂಪಾ ಅವರು ಬೇರೆ ಜಿಲ್ಲೆ ಪ್ರತಿನಿಧಿಸುತ್ತಿದ್ದಾರೆ. ಅವರನ್ನು ನನ್ನೊಟ್ಟಿಗೆ ಹೋಲಿಕೆ ಮಾಡಬೇಡಿ, ನನಗೆ ಸಾಕಷ್ಟು ಅನುಭವ ಇದೆ. ಎಲ್ಲರ ಬಗ್ಗೆ ಹೈಕಮಾಂಡ್ ತೀರ್ಮಾನಿಸುತ್ತದೆ ಎಂದು ಹೇಳಿದ್ದಾರೆ.

ಶ್ರಮಕ್ಕೆ ಫಲ ಸಿಕ್ಕೇ ಸಿಗುತ್ತೆ

- ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕುತೂಹಲಕರ ವಿಶ್ಲೇಷಣೆ
- ಕೆಪಿಸಿಸಿ ಅಧ್ಯಕ್ಷಗಾದಿ ತೊರೆಯುವ ಬಗ್ಗೆಯೂ ಮಾರ್ಮಿಕ ನುಡಿ



ಬೆಂಗಳೂರು, ನ.19(ಕೆಎಂಶಿ)– ಪವರ್ ವಿಚಾರ ಮುಖ್ಯ ಅಲ್ಲ. ಶ್ರಮಕ್ಕೆ ಫಲ ಸಿಗುತ್ತದೆ. ಎಲ್ಲಿ ಮನಸ್ಸಿದೆಯೋ ಅಲ್ಲಿ ಮಾರ್ಗ ಇದೆ. ಎಲ್ಲಿ ಭಕ್ತಿ ಇದೆಯೋ ಅಲ್ಲಿ ಫಲ ಇದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ಆಧ್ಯಾತ್ಮಿಕ ದಾಟಿಯಲ್ಲಿ ಕುತೂಹಲಕಾರಿ ಸಂಗತಿ ವಿಶ್ಲೇಷಿಸಿದರು.

ಪಕ್ಷದ ಕಚೇರಿಯಲ್ಲಿ ಇಂದಿರಾ ಗಾಂಧಿ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರದೇಶ ಕಾಂಗ್ರೆಸ್ ಅಧ್ಯಕ್ಷನಾಗಿ 6ನೇ ವರ್ಷಕ್ಕೆ ಕಾಲಿಟ್ಟಿದ್ದೇನೆ. ಹಾಗೆಂದು ಇಲ್ಲಿ ಮೊಳೆ ಹೊಡೆದುಕೊಂಡು ಕುಳಿತಿರಲು ಸಾಧ್ಯವಿಲ್ಲ ಎಂದು ಪರೋಕ್ಷವಾಗಿ ಅಧಿಕಾರಕ್ಕೆ ಅಂಟಿಕೊಂಡವರ ಬಗ್ಗೆ ಕುಟುಕಿದರು. ಉಪ ಮುಖ್ಯಮಂತ್ರಿ ಆದ ತಕ್ಷಣವೇ ಕೆಪಿಸಿಸಿ ಹುದ್ದೆ ತ್ಯಜಿಸಬೇಕೆಂದಿದ್ದೆ. ಆದರೆ, ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಮುಂದುವರೆಯಿರಿ ಎಂದರು. ಇಲ್ಲದಿದ್ದರೆ, ಅಂದೇ ಬೇರೆಯವರಿಗೆ ಅಧಿಕಾರ ಹಸ್ತಾಂತರ ಮಾಡುತ್ತಿದ್ದೆ. ನಾನು ಅಧಿಕಾರದಲ್ಲಿ ಇರುತ್ತೇನೋ ಇಲ್ಲವೋ, ಬೇರೆಯವರಿಗೆ ಅವಕಾಶ ಮಾಡಿಕೊಡಬೇಕು ಎಂದು ಒತ್ತಿ ಒತ್ತಿ ಹೇಳಿದರು.

“ಒಮ್ಮೆ ಹೊರತುಪಡಿಸಿ, ಉಳಿದೆಲ್ಲ ಸಂದರ್ಭದಲ್ಲೂ ಪಕ್ಷ ನನ್ನ ಕೈ ಹಿಡಿದಿದೆ. ಶಾಸಕನಾಗಿ, ರಾಜ್ಯಾಧ್ಯಕ್ಷನಾಗಿ, ಸಚಿವನಾಗಿ, ಉಪ ಮುಖ್ಯಮಂತ್ರಿ ಅಧಿಕಾರವನ್ನೂ ನೀಡಿದೆ. ಮುಂದೆ ನನಗೆ ಏನು ದೊರೆಯಬೇಕೋ ಅದನ್ನು ಪಕ್ಷ ನೀಡುತ್ತದೆ. ಹಾದಿಬೀದಿಯಲ್ಲಿ ಹೇಳಿದಂತೆಲ್ಲಾ ನಮ್ಮಲ್ಲಿ ನಡೆಯುವುದಿಲ್ಲ.

–ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಯಾವುದೇ ಹುದ್ದೆಯಲ್ಲಿ ಶಾಶ್ವತವಾಗಿ ಉಳಿಯಲು ಸಾಧ್ಯವಿಲ್ಲ. ಇದು ನನಗೂ, ಇನ್ನೊಬ್ಬರಿಗೂ ಅನ್ವಯ ಆಗುತ್ತದೆ. ನಾನು ಎಲ್ಲಿ ಇರುತ್ತೇನೋ, ಎಲ್ಲಿ ಇರುವುದಿಲ್ಲವೋ ಎನ್ನುವುದು ಮುಖ್ಯವಲ್ಲ. 2028ಕ್ಕೆ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಬೇಕೆಂಬುದೇ ನನ್ನ ಉದ್ದೇಶ ಎಂದು ಮುಖ್ಯಮಂತ್ರಿ ಕುರ್ಚಿಯನ್ನೇ ಮುಂದಿಟ್ಟುಕೊಂಡಂತೆ ಪರೋಕ್ಷವಾಗಿ ತಾವು ಏನು ಹೇಳಬೇಕೋ ಅದನ್ನು ಕಾರ್ಯಕರ್ತರ ಮುಂದೆ ಬಿಡಿಸಿಟ್ಟರು. ಕಾಂಗ್ರೆಸ್ ಪಕ್ಷ ಮತ್ತು ಇಂದಿರಾ ಕುಟುಂಬಕ್ಕೆ ತಾವು ಇದುವರೆಗೂ ಸಲ್ಲಿಸಿರುವ ಸೇವೆಯನ್ನು ಮುಖ್ಯಮಂತ್ರಿ ಸಮ್ಮುಖದಲ್ಲೇ ಎಳೆ ಎಳೆಯಾಗಿ ಬಿಡಿಸಿಟ್ಟರು.

ಇಂದಿರಾಗಾಂಧಿ ಸಮಾಧಿಗೆ ಗ್ರಾನೈಟ್ ಕಳಿಸಿದ್ವಿ: ಇಂದಿರಾ ಗಾಂಧಿ ಸಮಾದಿಗೆ ಗ್ರ್ಯಾನೈಟ್ ಕಳುಹಿಸಿ, ಹಾಕಿಸಿಕೊಟ್ಟವರೂ ನಾನು ಮತ್ತು ನನ್ನ ಸಹೋದರ. ಈ ಕಾರ್ಯಕ್ಕೆ ಸೋನಿಯಾ ಗಾಂಧಿ ▶ 6ನೇ ಪುಟಕ್ಕೆ

ಮೀಸಲಾತಿ ಪ್ರಮಾಣವನ್ನು ಶೇ.70–75ಕ್ಕೆ ಹೆಚ್ಚಳ ಮಾಡೋದು ನನ್ನ ಇಚ್ಛೆ

17ನೇ ಬಜೆಟನ್ನೂ ನಾನೇ ಮಂಡಿಸುತ್ತೇನೆ



ಬೆಂಗಳೂರು, ನ.19–ನಮ್ಮ ಸರ್ಕಾರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ವರದಿಯನ್ನು ಒಪ್ಪಿಕೊಂಡು ಜಾರಿ ಮಾಡಲು ಸಿದ್ಧವಿದೆ. ಮೀಸಲಾತಿ ಪ್ರಮಾಣವನ್ನು ಶೇ.70–75ಕ್ಕೆ ಹೆಚ್ಚಿಸುವ ಬಗ್ಗೆಯೂ ಆಸಕ್ತಿ ಹೊಂದಿದೆ. ಕೊನೆಯ ಉಸಿರು ಇರುವವರೆಗೂ, ನಾನು ರಾಜಕಾರಣದಲ್ಲಿ ಇರುವವರೆಗೂ ಸಾಮಾಜಿಕ ನ್ಯಾಯದ ಪರವಾಗಿ ಇರುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಆಯೋಜಿಸಿದ್ದ ಎಲ್.ಜಿ. ಹಾವನೂರು ವರದಿಯ ಸುವರ್ಣ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ದೇವರು, ಧರ್ಮದ ಹೆಸರಲ್ಲಿ ಸಾಯ್ತಾ ಇರೋರೆಲ್ಲಾ ನಮ್ಮ ಹಿಂದುಳಿದವರೇ. ಬಿಜೆಪಿ, ಆರ್‌ಎಸ್‌ಎಸ್, ಎಬಿವಿಪಿಗೆ ಹಿಂದುಳಿದವರು ▶ 6ನೇ ಪುಟಕ್ಕೆ

ಪ್ರತಿ ವರ್ಷ ಸಾಲು ಮರದ ತಿಮ್ಮಕ್ಕ ಹೆಸರಿನಲ್ಲಿ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಒಂದು ಕೋಟಿ ದತ್ತಿ ನಿಧಿಯನ್ನು ಸ್ಥಾಪಿಸಿ ಠೇವಣಿ ಇರುವ ಹಣದ ಬಡ್ಡಿಯಲ್ಲಿ ಪ್ರತಿ ವರ್ಷವೂ ಕಾರ್ಯಕ್ರಮ ಆಯೋಜಿಸಲಾಗುವುದು ಹಾಗೂ ಕನಿಷ್ಠ 5 ಪರಿಸರವಾದಿಗಳಿಗೆ ಸಾಲು ಮರದ ತಿಮ್ಮಕ್ಕನವರ ಹೆಸರಿನಲ್ಲಿ ಪ್ರಶಸ್ತಿಯನ್ನು ಪ್ರತಿ ವರ್ಷ ಕೊಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಘೋಷಣೆ ಮಾಡಿದರು. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಆಯೋಜಿಸಲಾಗಿದ್ದ ಸುವರ್ಣ ಮಹೋತ್ಸವ –2025 ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ 50 ವರ್ಷಗಳ ▶ 6ನೇ ಪುಟಕ್ಕೆ

ಶಬರಿಮಲೆಯಲ್ಲಿ ಭಕ್ತ ಸಾಗರ; ಭಯದ ವಾತಾವರಣ



- ದಿಕ್ಕೆಟ್ಟ ದೇವಸ್ಥಾನದ ಆಡಳಿತ ಮಂಡಳಿ
- ನೂಕು–ನುಗ್ಗಲಲ್ಲಿ ಸಿಲುಕಿ ಹಲವರು ನಿತ್ರಾಣ
- ಮಹಿಳೆಯರು, ಮಕ್ಕಳ ಅರಚಾಟ–ಚೀರಾಟ
- 8 ಕಿ.ಮೀ. ದೂರದಲ್ಲೇ ಭಕ್ತರ ವಾಹನಕ್ಕೆ ತಡೆ
- ಕೆಲವು ಭಕ್ತರು ಯಾತ್ರೆ ಪೂರ್ಣಗೊಳಿಸದೇ ಸ್ವಸ್ಥಾನಕ್ಕೆ ವಾಪಸ್
- ಒಂದೆಡೆ ರೋಗ ಭೀತಿ; ಮತ್ತೊಂದೆಡೆ ಅಸುರಕ್ಷತೆ ಆತಂಕ

ತಿರುವನಂತಪುರಂ(ಕೇರಳ),ನ.19–ಹಿಂದೂಗಳ ಪ್ರಸಿದ್ಧ ಯಾತ್ರಾಸ್ಥಳ ಶಬರಿಮಲೆಯಲ್ಲಿ ಪ್ರಸ್ತುತ ವರ್ಷದ ಮಂಡಲ ಪೂಜೆ ಹಾಗೂ ಮಕರ ವಿಳಕ್ಕು ಉತ್ಸವ ಆರಂಭವಾಗಿದ್ದು, ದೇವಾಲಯದ ಬಾಗಿಲು ತೆರೆದ ಎರಡೇ ದಿನದಲ್ಲಿ ಶಬರಿಮಲೆಗೆ ಭಕ್ತ ಸಾಗರವೇ ಹರಿದು ಬಂದಿದ್ದು, ಪರಿಸ್ಥಿತಿ ನಿಭಾಯಿಸಲು ಸಾಧ್ಯವಾಗದೇ ದೇವಸ್ಥಾನದ ಆಡಳಿತ ಮಂಡಳಿ ತಿರುವಾಂಕೂರ್ ದೇವಸ್ವಂ ಬೋರ್ಡ್ ದಿಕ್ಕೆಟ್ಟು ಹೋಗಿದೆ.

ಶಬರಿಮಲೆಯಲ್ಲಿ ಅಯ್ಯಪ್ಪ ಸ್ವಾಮಿ ದರ್ಶನಕ್ಕೆ ದಿನವೊಂದಕ್ಕೆ 90 ಸಾವಿರ ಭಕ್ತರನ್ನು ಬಿಡಬಹುದಾಗಿದ್ದು, ಕಳೆದ 2 ದಿನಗಳಿಂದ ಆಡಳಿತ ಮಂಡಳಿಯ ನಿಯಂತ್ರಣ ಕೈತಪ್ಪಿ ಹೋಗಿದ್ದು, ದೇವಸ್ಥಾನದ ಬಳಿಯೇ ಸುಮಾರು 2 ಲಕ್ಷ ಮಂದಿ ಜಮಾಯಿಸಿರುವ ಕಾರಣ ತೀವ್ರ ನೂಕು–ನುಗ್ಗಲು ಉಂಟಾಗಿದೆ. ಈಗಾಗಲೇ ನೂಕು–ನುಗ್ಗಲಿನಲ್ಲಿ ಉಸಿರು ಕಟ್ಟಿ ಮಹಿಳೆಯೋರ್ವರು ಸಾವನ್ನಪ್ಪಿದ್ದಾರೆ. ಅಯ್ಯಪ್ಪ ಸ್ವಾಮಿ ದರ್ಶನಕ್ಕಾಗಿ ಸುಮಾರು ಮೂರ್‍ನಾಲ್ಕು ಕಿ.ಮೀ.ವರೆಗೆ ▶ 6ನೇ ಪುಟಕ್ಕೆ

ರಾಜ್ಯದ ಭಕ್ತರಿಗೆ ಅಗತ್ಯ ಸೌಕರ್ಯ ಕಲ್ಪಿಸಿ

ಕೇರಳ ಮುಖ್ಯ ಕಾರ್ಯದರ್ಶಿಗೆ ರಾಜ್ಯ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಪತ್ರ

ಬೆಂಗಳೂರು, ನ.19(ಕೆಎಂಶಿ)–ಶಬರಿಮಲೆ ಯಾತ್ರೆ ಕೈಗೊಳ್ಳುವ ರಾಜ್ಯದ ಭಕ್ತರಿಗೆ ಅಗತ್ಯ ಸೌಲಭ್ಯ ಹಾಗೂ ಸುರಕ್ಷತೆ ನೀಡುವಂತೆ ಕೇರಳ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಎ.ಜಯತಿಲಕ್ ಅವರಿಗೆ ಕರ್ನಾಟಕ ಸರ್ಕಾರದ ಮುಖ್ಯಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಪತ್ರ ಬರೆದಿದ್ದಾರೆ. ಕರ್ನಾಟಕದಿಂದ ಪ್ರತಿ ವರ್ಷ ಶಬರಿಮಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಯಾತ್ರಾರ್ಥಿಗಳು ಅಯ್ಯಪ್ಪಸ್ವಾಮಿ ದರ್ಶನಕ್ಕೆ ಯಾತ್ರೆ ಕೈಗೊಳ್ಳುತ್ತಾರೆ. ಈ ಭಕ್ತರಿಗೆ ಸುಗಮ ಸೌಲಭ್ಯ ಮತ್ತು ಸುರಕ್ಷತೆ ಖಚಿತಪಡಿಸಿಕೊಳ್ಳಲು ಕೇರಳ ಸರ್ಕಾರ ಅಗತ್ಯ ▶ 6ನೇ ಪುಟಕ್ಕೆ

ದೇಶದ್ರೋಹಿಗಳ ಮನೆಗೆ ಜೆಸಿಬಿ ನುಗ್ಗಿಸುವ ಸರ್ಕಾರ ಕರ್ನಾಟಕದಲ್ಲಿ ಬರಬೇಕು

ಮೈಸೂರಿನ ಹಿಂದೂ ಜಾಗೃತ ಸಮಾವೇಶದಲ್ಲಿ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕರೆ

- ಯೋಗಿ ಆದಿತ್ಯನಾಥರಂತಹ ನಾಯಕತ್ವ 2028ಕ್ಕೆ ಅಗತ್ಯವಿದೆ
- ಹಿಂದೂಗಳು ಉಗ್ರರಲ್ಲ, ಎಕೆ–47 ಇಟ್ಟುಕೊಂಡವರಲ್ಲ
- ದೆಹಲಿ ಬಾಂಬ್ ಸ್ಫೋಟವನ್ನು ನಕಲಿ ಜಾತ್ಯಾತೀತರು ಖಂಡಿಸಿಲ್ಲ
- ಹಿಂದೂ ಸಂಖ್ಯೆ ಕ್ಷೀಣವಾದರೆ ಅಸ್ತಿತ್ವ ಉಳಿಸಿಕೊಳ್ಳುವುದು ಕಷ್ಟ
- ಈಗಾಗಲೇ ರಾಜ್ಯದೆಲ್ಲೆಡೆ ಬಾಂಗ್ಲಾ ಕಾಲೋನಿಗಳು ತಲೆ ಎತ್ತುತ್ತಿವೆ

ಮೈಸೂರು,ನ.19(ಬಿಎಲ್‌ಯು)–ದೇಶದ್ರೋಹಿ ಕೃತ್ಯ ಎಸಗುವ ಹಾಗೂ ಗಣಪತಿ ಮೂರ್ತಿ ಮೇಲೆ ಕಲ್ಲು ತೂರುವ ಸಮಾಜ ಘಾತುಕ ಶಕ್ತಿಗಳ ಮನೆಗೆ ಜೆಸಿಬಿ ನುಗ್ಗಿಸುವ ಉತ್ತರಪ್ರದೇಶ ಸಿಎಂ ಯೋಗಿ ಆದಿತ್ಯನಾಥರಂತಹ ಧೈರ್ಯವಂತ ನಾಯಕತ್ವದ ಸರ್ಕಾರ 2028ಕ್ಕೆ ಕರ್ನಾಟಕದಲ್ಲಿ ರಚನೆಯಾಗಬೇಕು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬಲವಾಗಿ ಪ್ರತಿಪಾದಿಸಿದ್ದಾರೆ

ಮೈಸೂರಿನ ಕಲಾಮಂದಿರದಲ್ಲಿ ಇಂದು ನಡೆದ ಹಿಂದೂ ಜಾಗೃತ ವೇದಿಕೆ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಉತ್ತರ ಪ್ರದೇಶದಲ್ಲಿ ದೇಶದ್ರೋಹಿ ಕೃತ್ಯ ಎಸಗಿದ 8 ಸಾವಿರ ದುಷ್ಕರ್ಮಿಗಳ ಎನ್‌ಕೌಂಟರ್ ಮಾಡಲಾಗಿದೆ, ಜೈಲಿನಲ್ಲಿರುವ ಆರೋಪಿಗಳಿಗೆ ಜಾಮೀನು ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಗಟ್ಟಿ ನಿರ್ಧಾರ ಕೈಗೊಳ್ಳುವ ಯೋಗಿ ಆದಿತ್ಯನಾಥ್‌ರಂತಹ ಶಕ್ತಿಯುತ ನಾಯಕತ್ವದ ಸರ್ಕಾರ ರಾಜ್ಯದಲ್ಲೂ ಅಧಿಕಾರಕ್ಕೆ ಬರಬೇಕಿದೆ ಎಂದು ಆಶಿಸಿದರು.

ಹಿಂದೂ ಧರ್ಮದಲ್ಲಿ ಉಗ್ರಗಾಮಿಗಳಿಲ್ಲ, ಎಕೆ–47 ಇಟ್ಟಿರುವವರು ಯಾರೂ ಇಲ್ಲ, ಮುಸ್ಲಿಂರ ಮೇಲೆ ಕಲ್ಲು ಎಸೆದವರಿಲ್ಲ. ಈ ಮೂಲಕ ಹಿಂದೂ ಧರ್ಮಿಯರು ಸೌಮ್ಯವಾದಿಗಳು ಎಂಬುದು ಸ್ಪಷ್ಟವಾಗಿದೆ ಎಂದು ಯತ್ನಾಳ್ ಸ್ಪಷ್ಟಪಡಿಸಿದರು.

ದೆಹಲಿಯಲ್ಲಿ ಬಾಂಬ್ ಸ್ಫೋಟ ಮಾಡಿದವರು ನಿರುದ್ಯೋಗಿಗಳಲ್ಲ, ಬಡವರಲ್ಲ, ಅನಕ್ಷರಸ್ಥರಲ್ಲ. ತಿಂಗಳಿಗೆ ಏಳೆಂಟು ಲಕ್ಷ ಪಡೆದ ವೈಟ್ ಕಾಲರ್ ಉಗ್ರರು ಬಾಂಬ್ ಸ್ಫೋಟಿಸಿದ್ದಾರೆ. ಮತಾಂಧತೆಯ ಪರಕಾಷ್ಠತೆ ತಲೆಗೆ ಹಚ್ಚಿಕೊಂಡ ಮುಸ್ಲಿಂ ಸ್ಕಾಲರ್ ಒಕ್ಕೂಟ ಇಂತಹ ಕೃತ್ಯ ಎಸಗಿದೆ. ಜಾತ್ಯಾತೀತತೆ ಬಗ್ಗೆ ಭಾಷಣ ಬಿಗಿಯುವ ನಕಲಿಗಳು ಹಾಗೂ ಮುಸ್ಲಿಂ ನಾಯಕರು ಈ ಕೃತ್ಯವನ್ನು ಈತನಕ ಖಂಡಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕುಡಿಯುವ ನೀರಿಗೆ ವಿಷ ಬೆರೆಸುವ ಸಂಚು: ಭಾರತದಲ್ಲಿ ಹಿಂದೂ ಧರ್ಮದವರಾದ ನರೇಂದ್ರ ಮೋದಿ ಪ್ರಧಾನ ಮಂತ್ರಿಯಾಗಿರುವ ಕಾರಣ ಹಿಂದೂಗಳು ಸುರಕ್ಷಿತರಾಗಿದ್ದಾರೆ. ಇದರ ಮಧ್ಯೆ ಬಲಾಢ್ಯ ಮಿಲಿಟರಿ ಸೇರಿದಂತೆ ಶಕ್ತಿಯುತ ತನಿಖಾ ಸಂಸ್ಥೆಗಳಿದ್ದರೂ ಬಾಂಬ್ ಸ್ಫೋಟಿಸುತ್ತಿದ್ದಾರೆ. ದೇವಸ್ಥಾನದ ಪ್ರಸಾದ, ಕುಡಿಯುವ ನೀರಿನಲ್ಲಿ ವಿಷ ಬೆರೆಸುವ ಸಂಚು ರೂಪಿಸಿದ್ದಾರೆ. ಹಿಂದೂಗಳು ಶಕ್ತಿಯುತರಾಗಿ ಸಂಘಟನೆಗೊಳ್ಳಬೇಕು. ಇಲ್ಲದಿದ್ದರೆ ಮುಸ್ಲಿಂರು ಹಿಂದೂಗಳನ್ನು ಅಲ್ಪ ಸಂಖ್ಯಾತರನ್ನಾಗಿ ಮಾಡಿ ನೆಮ್ಮದಿ ಹಾಗೂ ಐಷಾರಾಮಿ ಬದುಕನ್ನು ಕಿತ್ತುಕೊಂಡು ಜೋಪಡಿಗೆ ದೂಡುತ್ತಾರೆ ಎಂದು ಯತ್ನಾಳ್ ಎಚ್ಚರಿಸಿದರು.

ಹಣ ಕೊಟ್ಟು ಮತ ಖರೀದಿ ಧೋರಣೆ: ಹಿಂದೂಗಳು ಜಾತಿ ಅಭಿಮಾನದಿಂದ ನಮಗೆ ಓಟ್ ಹಾಕುತ್ತಾರೆ, ಮತ ಹಾಕುವ ವೇಳೆ ಹಣ ಕೊಟ್ಟು ಖರೀದಿಸಿದರೆ ▶ 6ನೇ ಪುಟಕ್ಕೆ



ಮೈಸೂರಿನ ಕಲಾಮಂದಿರದಲ್ಲಿ ಬುಧವಾರ ನಡೆದ ಹಿಂದೂ ಜಾಗೃತ ವೇದಿಕೆ ಸಮಾವೇಶವನ್ನು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಉದ್ಘಾಟಿಸಿದರು. ವಿಜಯನಗರ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಪ್ರೊ.ಬಾಷ್ಯಂ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಸಮಾರಂಭದಲ್ಲಿ ಹಿರಿಯ ವಕೀಲರಾದ ಹರೀಶ್‌ಕುಮಾರ್ ಹೆಗ್ಡೆ, 'ಲಾ ಗೈಡ್' ಹೆಚ್.ಎನ್.ವೆಂಕಟೇಶ್, ಹಿಂದೂ ಜಾಗೃತ ವೇದಿಕೆ ಅಧ್ಯಕ್ಷ ಮಲ್ಲೇಶ್, ಶ್ರೀನಿವಾಸ್ ಸೇರಿದಂತೆ ಇನ್ನಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮುಸ್ಲಿಂರ ಸಂವಿಧಾನ ವಿರೋಧಿ ಧೋರಣೆಯ ದಲಿತರು ಅರಿಯಬೇಕು

ಮುಸ್ಲಿಂರ ಸಂವಿಧಾನ ವಿರೋಧಿ ಧೋರಣೆಯನ್ನು ದಲಿತ ಸಮುದಾಯದವರು ಅರಿಯಬೇಕು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸಲಹೆ ನೀಡಿದರು. ಭಾರತದ ಭೂಪಟದ ಜಮ್ಮು ಕಾಶ್ಮೀರದಲ್ಲಿದಲ್ಲಿದ್ದ ಅಶೋಕ ಚಕ್ರ ಒಡೆದು ಹಾಕಿದರು, ಸಂವಿಧಾನ ಪುಸ್ತಕದ ಮುಖ ಪುಟದ ಅಶೋಕ ಚಕ್ರವನ್ನು ಟೀಕಿಸಿದರು. ಮತಾಂಧ ಮುಸ್ಲಿಂರಿಗೆ ಸಂವಿಧಾನದ ಬಗ್ಗೆ ಕಿಂಚಿತ್ತೂ ಗೌರವವಿಲ್ಲ. ಮುಸ್ಲಿಂರ ಈ ವರ್ತನೆಯನ್ನು ದಲಿತರು ಸೂಕ್ಷ್ಮವಾಗಿ ತಿಳಿದುಕೊಳ್ಳಬೇಕು. ಬಹುಸಂಖ್ಯಾತ ಹಿಂದೂ ಧರ್ಮಿಯರಿಂದ ಮಾತ್ರ ಸಂವಿಧಾನ ಅಸ್ತಿತ್ವದಲ್ಲಿ ಇರುತ್ತದೆ, ಸಂರಕ್ಷಣೆಯೂ ಆಗುತ್ತದೆ. ಇದು ಬಿಟ್ಟು ಏನಾದರೂ ಹಿಂದೂ ಧರ್ಮಿಯರು ಅಲ್ಪ ಸಂಖ್ಯಾತರಾಗಿ, ಮುಸ್ಲಿಂರು ಬಹ ಸಂಖ್ಯಾತರಾದರೆ ಸಂವಿಧಾನ ತನ್ನ ಮಹತ್ವ ಕಳೆದುಕೊಳ್ಳುತ್ತದೆ. ಮುಸ್ಲಿಂರಿಗೆ ಧರ್ಮ ಮುಖ್ಯವೇ ಹೊರತು, ಸಂವಿಧಾನವಲ್ಲ ಎಂದು ಎಚ್ಚರಿಸಿದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ವೇಳೆ ಇಲ್ಲಿರುವ ಸಂಪೂರ್ಣ ಮುಸ್ಲಿಂರು ಪಾಕಿಸ್ತಾನಕ್ಕೆ ಹೋಗಲಿ, ಅಲ್ಲಿರುವ ಹಿಂದೂಗಳು ಭಾರತಕ್ಕೆ ಬರಲಿ. ಇಲ್ಲದಿದ್ದರೆ ದೇಶದಲ್ಲಿ ಶಾಂತಿ ಇರುವುದಿಲ್ಲ ಎಂದು ಅಂಬೇಡ್ಕರ್ ಅಂದೇ ಎಚ್ಚರಿಕೆ ನೀಡಿದ್ದರು ಎಂದು ಯತ್ನಾಳ್ ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಕೆಲವು ಹುಡುಗಿಯರು ತುಂಬಾ ಕಲಿಯೋದಿಕ್ಕೆ ಆಸಕ್ತಿ ತೋರಿಸೊಲ್ಲ.
ತಿಮ್ಮ : ಯಾಕೆ?
ಗುಂಡ : ಅವರಿಗೆ ಚೆನ್ನಾಗಿ ಗೊತ್ತು. ಪ್ರಪಂಚದ ಯಾವುದೋ ಮೂಲೆಯಲ್ಲಿ ತುಸಾಗಿ ಒಬ್ಬ ನಿದ್ದೆ ಬಿಟ್ಟು ಓದುತ್ತಾ ಇದ್ದಾನೆ ಅಂತಾ!!

ಮೈಸೂರು ಮಿತ್ರ
ಗುರುವಾರ, 20 ನವೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನಂಬಿಕೆ ಇಲ್ಲದವರ ಮುಂದೆ ಬೇಡವಾದ ವಸ್ತುವಾಗುವ ಬದಲು ನಂಬಿಕೆ ಇದ್ದವರ ಮುಂದೆ ಬೆಲೆಯುಳ್ಳ ವ್ಯಕ್ತಿಯಾಗಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಗ್ಗಟ್ಟಿಲ್ಲದ ಊರಲ್ಲಿ ಒಪ್ಪತ್ತೂ ಇರಬೇಡ.

ನಿಮ್ಮ ಪತ್ರಗಳು

ಪೋಷಕರಲ್ಲಿ, ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಸಂಚಾರ ಅರಿವು ಮೂಡಿಸಿ

ಮಾನ್ಯರೆ,



ಇತ್ತೀಚೆಗೆ, ಅನೇಕ ಕಡೆಗಳಲ್ಲಿ ಅಪ್ರಾಪ್ತ ವಯಸ್ಕರು ಯಾವುದೇ ಚಾಲನಾ ಪರವಾನಗಿ ಇಲ್ಲದೆ, ಬೈಕ್ ಅಥವಾ ದ್ವಿಚಕ್ರ ವಾಹನಗಳನ್ನು ಚಲಾಯಿಸುತ್ತಿರುವುದು ಕಂಡುಬರುತ್ತಿದೆ. ಕೆಲವು ಕಡೆ ತ್ರಿಬಲ್ ರೈಡಿಂಗ್ ಸಹ ಸಾಮಾನ್ಯವಾಗಿ ಬಿಟ್ಟಿದ್ದು, ಇದು ಕೇವಲ ಟ್ರಾಫಿಕ್ ನಿಯಮ ಉಲ್ಲಂಘನೆಯಲ್ಲ; ಬದಲಿಗೆ ಅಮಾಯಕ ಜನರ ಸುರಕ್ಷತೆಗೆ ಕುತ್ತು ತರುವ ಗಂಭೀರ ವಿಷಯವಾಗಿದೆ. ಮೋಟಾರು ವಾಹನ ಕಾಯ್ದೆ ಪ್ರಕಾರ, ಅಪ್ರಾಪ್ತರಿಗೆ ವಾಹನ ಚಲಾಯಿಸಲು ಅವಕಾಶ ನೀಡುವುದು ಒಂದು ಗಂಭೀರ ಅಪರಾಧ. ಅಪ್ರಾಪ್ತರು ವಾಹನ ಚಲಾಯಿಸಿ ಸಿಕ್ಕಿಬಿದ್ದರೆ, ವಾಹನದ ಮಾಲೀಕರಾದ ಪೋಷಕರಿಗೆ 25,000 ರೂ.ವರೆಗೆ ದಂಡ ವಿಧಿಸಲಾಗುತ್ತದೆ. ಅಪಘಾತವಾಗಿ ಸಾವು–ನೋವು ಸಂಭವಿಸಿದರೆ, ಪೋಷಕರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ. ಹಾಗೆಯೇ, ಅಪರಾಧ ಮಾಡಿದ ಅಪ್ರಾಪ್ತರಿಗೆ 25 ವರ್ಷ ವಯಸ್ಸಾಗುವವರೆಗೆ ಚಾಲನಾ ಪರವಾನಗಿ ಪಡೆಯುವ ಅರ್ಹತೆ ಇರುವುದಿಲ್ಲ.

ಆದುದರಿಂದ, ಪೋಷಕರಲ್ಲಿ ನನ್ನ ಕಳಕಳಿಯ ಮನವಿ ಏನೆಂದರೆ, ದಯವಿಟ್ಟು ಮಕ್ಕಳ ಆಸೆಗಳಿಗೆ ಮಣಿದು, ಅವರ ಜೀವ ಮತ್ತು ಇತರರ ಜೀವವನ್ನು ಅಪಾಯಕ್ಕೆ ಸಿಲುಕಿಸಬೇಡಿ. ಅವರ ಕೈಗೆ ವಾಹನ ಕೊಡುವುದು. ಅವರಿಗೆ ನೀವು ಕೊಡುತ್ತಿರುವ ಉಡುಗೊರೆಯಲ್ಲ; ಬದಲಿಗೆ ಅಪಾಯಕಾರಿ ಪ್ರೋತ್ಸಾಹ ನೀಡಿದಂತಾಗುತ್ತದೆ. ಈ ಬಗ್ಗೆ ಪೋಷಕರಲ್ಲಿ ಮತ್ತು ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಸಂಚಾರ ಪೊಲೀಸರು ಮತ್ತು ಸಾರಿಗೆ ಇಲಾಖೆಗಳು ಇನ್ನಷ್ಟು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಜಾಗೃತಿ ಅಭಿಯಾನಗಳನ್ನು ಪರಿಣಾಮಕಾರಿಯಾಗಿ ನಡೆಸಬೇಕು ಎಂದು ಕೋರುತ್ತೇನೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಆರ್‌ಎಂಸಿ ವೃತ್ತದ ಬಳಿಯ ಸಿಗ್ನಲ್ ಲೈಟ್‌ಗಳು ಸಂಪೂರ್ಣ ಗೊಂದಲಮಯ

ಮಾನ್ಯರೆ,


ಮೈಸೂರು ನಗರದಲ್ಲಿ ಸುಗಮ ಸಂಚಾರ ಸಂಪೂರ್ಣ ವಿಫಲವಾಗಿರುವುದು ಸಾಮಾನ್ಯವಾಗಿದೆ.

ನಗರದ ಕೆಲ ವೃತ್ತ ಹಾಗೂ ರಸ್ತೆಗಳನ್ನು ಗಮನಿಸಿದರೆ ಸಾಕು ಸುಗಮ ಸಂಚಾರ ಸಂಪೂರ್ಣ ವಿಫಲವಾಗಿರುವುದು ಕಾಣ ಬರುತ್ತದೆ. ನಗರದ ಆರ್.ಎಂ.ಸಿ.ವೃತ್ತದ ಬಳಿ ಅಳವಡಿಸಿರುವ ಸಿಗ್ನಲ್ ಲೈಟ್‌ಗಳು ಸಂಪೂರ್ಣ ಗೊಂದಲಮಯವಾಗಿರುತ್ತದೆ. ತಿಲಕ್‌ನಗರದಿಂದ ಮತ್ತು ಬಂಬೂಬಜಾರ್ ಕಡೆಯಿಂದ ಬರುವ ವಾಹನ ಸವಾರರು ಸಿಗ್ನಲ್ ಲೈಟ್‌ಗಳಿಂದ ಹಸಿರು ನಿಶಾನೆ ಕಂಡ ತಕ್ಷಣ ಎರಡು ಕಡೆಯ ವಾಹನಗಳು ಮುಂದೆ ಸಾಗುತ್ತವೆ. ಆದರೆ ತಿಲಕ್‌ನಗರದಿಂದ ಶೇಷಾದ್ರಿ ಐಯ್ಯರ್ ರಸ್ತೆ ಕಡೆಗೆ ಮತ್ತು ಬಂಬೂಬಜಾರ್ ಕಡೆಯಿಂದ ಸಯ್ಯಾಜಿರಾವ್ ರಸ್ತೆ ಕಡೆಗೆ ಹೋಗಬೇಕಾದರೆ ಎರಡು ಕಡೆಯ ವಾಹನ ಸವಾರರು ಒಂದೇ ರಸ್ತೆಯಲ್ಲಿ ವಾಹನ ಚಾಲನೆ ಮಾಡಬೇಕಿರುವುದರಿಂದ ಅಪಘಾತಗಳಾಗುವ ಸಾಧ್ಯತೆ ಮತ್ತು ಗೊಂದಲ ಹೆಚ್ಚಾಗಿರುತ್ತದೆ.

ಹಾಗೇ ಮುಂದೆ ಸಾಗಿದರೆ ವಿಶ್ವೇಶ್ವರಯ್ಯ ವೃತ್ತದಲ್ಲಿ (ಈಗಿನವರಲ್ಲಿ ಆಯುರ್ವೇದಿಕ್ ಸರ್ಕಲ್) ಪಾದಚಾರಿಗಳು ರಸ್ತೆ ದಾಟಬೇಕಾದರೆ ಕನಿಷ್ಠ 15 ರಿಂದ 20 ನಿಮಿಷಗಳವರೆಗೆ ಕಾಯಬೇಕಾಗುತ್ತದೆ. ಕಾರಣ ರೈಲ್ವೆ ನಿಲ್ದಾಣದ ಕಡೆಯಿಂದ ಬರುವ ವಾಹನಗಳು ಮತ್ತು ಸಬರ್ಬ್ ಬಸ್ ಸ್ಟಾಂಡ್ ಕಡೆಯಿಂದ ಬರುವ ವಾಹನಗಳು ಮತ್ತು ವಿಶೇಷವಾಗಿ ಆಟೋ ಚಾಲಕರು, ಪಾದಚಾರಿಗಳು ರಸ್ತೆ ದಾಟಲು ಅವಕಾಶವನ್ನೇ ಕೊಡುವುದಿಲ್ಲ. ಕಾರಣ ಇವರುಗಳು ಆಟೋ ರಾಜ ಎನ್ನಿಸಿಕೊಂಡಿರುವುದರಿಂದ ಇವರಿಗೆ ಹೆದರಿ ಪಾದಚಾರಿಗಳೇ ಹಿಂದೆ ಸರಿಯಬೇಕು. ಇವರಿಗೆ ಜಾಗ ಬಿಡುವುದು ಪಾದಚಾರಿಗಳ ಕರ್ತವ್ಯ. ಈ ಸ್ಥಳದಲ್ಲಿ ಸಾಮಾನ್ಯವಾಗಿ ಸಂಚಾರಿ ಪೊಲೀಸರು ಕಂಡು ಬಂದರೂ ಪ್ರಯೋಜನವಾಗುವುದಿಲ್ಲ. ಕಾರಣ ಆಯುರ್ವೇದಿಕ್ ಅಸ್ಪತ್ರೆ ಮುಂಭಾಗದಲ್ಲಿ ಆರಾಮವಾಗಿ ಕುಳಿತಿರುತ್ತಾರೆ ಅಥವಾ ಹೆಲ್ಮೆಟ್ ತಪಾಸಣೆಯಲ್ಲಿ ಮಗ್ನರಾಗಿರುತ್ತಾರೆ. ಪಾದಚಾರಿಗಳು ರಸ್ತೆ ದಾಟಬೇಕಾದರೆ ಕನಿಷ್ಠ 15 ರಿಂದ 20 ನಿಮಿಷಗಳವರೆಗೆ ಕಾಯುತ್ತಿದ್ದರೂ ಸಂಚಾರಿ ಪೊಲೀಸರು ಲೆಕ್ಕಿಸುವುದಿಲ್ಲ.

–ಎಂ.ಎನ್.ಧರಣಿ ವೆಂಕಟೇಶ, ಸಾಮಾಜಿಕ ಕಾರ್ಯಕರ್ತ, ಮೈಸೂರು.

ಬೀದಿ ನಾಯಿಗಳ ರಂಪಾಟಕ್ಕೆ ಕಡಿವಾಣ ಹಾಕಿ



ಮಾನ್ಯರೆ,

ಇತ್ತೀಚೆಗೆ ರಾಜ್ಯಾದ್ಯಂತ ಬೀದಿ ನಾಯಿಗಳ ಉಪಟಳ ದಿನೇ ದಿನೆ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಕೆಲವು ದಿನಗಳ ಹಿಂದೆ ಮಂಗಳೂರಿನ ಹೊರ ವಲಯದ 'ಕುಂಪಲ' ಎಂಬ ಗ್ರಾಮದ ಬಳಿ ದಯಾನಂದ ಎಂಬ ಹಿರಿಯ ನಾಗರಿಕರೊಬ್ಬರನ್ನು ಬೀದಿ ನಾಯಿಯೊಂದು ಕಚ್ಚಿ ಕಚ್ಚಿ ಸಾಯಿಸಿದ ಬೀಭತ್ಸ ಘಟನೆ ಮಾಧ್ಯಮಗಳಲ್ಲಿ ವರದಿಯಾಗಿದೆ. ರಾಜ್ಯದಲ್ಲಿ ಬೀದಿ ನಾಯಿಗಳ ಉಪಟಳ ಹೆಚ್ಚುತ್ತಿದೆ. ಸಾಮಾನ್ಯವಾಗಿ ಇಂತಹ ದಾಳಿಗೆ ಸಣ್ಣ ಪುಟ್ಟ ವಯಸ್ಸಿನ ಮಕ್ಕಳು ಹಾಗೂ ಹಿರಿಯ ನಾಗರಿಕರು ಬಲಿಯಾಗುತ್ತಿರುವುದು ದಾಖಲೆಗಳಿಂದ ತಿಳಿದು ಬರುತ್ತದೆ. ಬೀದಿ ನಾಯಿಗಳ ಪೈಕಿ ಅನೇಕ ನಾಯಿಗಳು ರೋಗ ಪೀಡಿತವಾಗಿದ್ದು, ರೇಬಿಸ್ ಎಂಬ ಮಾರಣಾಂತಿಕ ಕಾಯಿಲೆಯನ್ನು ಹರಡುತ್ತವೆ. ಬೀದಿ ನಾಯಿಗಳ ಹಾವಳಿಯನ್ನು ತಡೆಯಲು ರಾಜ್ಯ ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಅವುಗಳಲ್ಲಿ ನಾಯಿಗಳ ಸಂತತಿಯನ್ನು ನಿಯಂತ್ರಿಸಲು 'ಸಂತಾನ ಹರಣ ಶಸ್ತ್ರ ಚಿಕಿತ್ಸೆ' ಕೂಡ ಒಂದು. ನಾಯಿಗಳ ಹಾವಳಿಯನ್ನು ನಿಯಂತ್ರಿಸುವುದು ಸ್ಥಳೀಯ ಸಂಸ್ಥೆಗಳ ಆದ್ಯ ಕರ್ತವ್ಯವಾಗಿದೆ. ಬೀದಿ ನಾಯಿಗಳ ನಿಯಂತ್ರಕ್ಕೆ ದೇಶದ ಸರ್ವೋಚ್ಚ ನ್ಯಾಯಾಲಯ ಕೂಡ ಆಗಿಂದಾಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ನೀಡುತ್ತಿದೆ. ಒಟ್ಟಿನಲ್ಲಿ ಬೀದಿ ನಾಯಿಗಳ ಹಾವಳಿಗೆ ಮತ್ತಷ್ಟು ಜನ ಬಲಿಯಾಗುವುದಕ್ಕಿಂತ ಮುಂಚಿತವಾಗಿ ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಐತಿಹಾಸಿಕ ಸತ್ಯವೆಂಬ ಮಾಯಾಮೃಗದ ಬೆನ್ನೇರಿ....!





–ಡಾ.ನಾಗೇಶ ಡೂಗನವರ
ಸಹಾಯಕ ಪ್ರಾಧ್ಯಾಪಕರು
ವಿಜಯ ಪ್ರಥಮ ದರ್ಜೆ ಕಾಲೇಜು,
ಪಾಂಡವಪುರ, ಮಂಡ್ಯ.

> "ಐತಿಹಾಸಿಕ ಸತ್ಯ ಎಂಬುದು ಒಂದು ಮಾಯಾಮೃಗವಿದ್ದಂತೆ. ಬೆನ್ನಟ್ಟಿ ಹೋದಷ್ಟು ನಮ್ಮಿಂದ ದೂರ ದೂರ ಸಾಗುತ್ತ ನಮ್ಮನ್ನು ಇನ್ನಿಲ್ಲದಂತೆ ಘಾಸಿಗೊಳಿಸುತ್ತದೆ. ಆದ್ದರಿಂದ ಐತಿಹಾಸಿಕ ಸತ್ಯಗಳ ಪ್ರತಿಪಾದನೆಗಾಗಿ ನಾವು ನಡೆಸುವ ಹೋರಾಟಗಳು ನಮ್ಮ ವರ್ತಮಾನವನ್ನು ನುಂಗಿ ಹಾಕಿ ಜ್ವಲಂತ ಸಮಸ್ಯೆಗಳಿಂದ ನಮ್ಮನ್ನು ವಿಮುಖರನ್ನಾಗಿಸುತ್ತವೆ. ಹಾಗಾಗಿ ನಾವು ನಂಬಿರುವ ಐತಿಹಾಸಿಕ ಸತ್ಯಗಳು ನಮ್ಮನ್ನು ಕಾಲಗರ್ಭದಲ್ಲಿ ಕಟ್ಟಿಹಾಕದೇ ಅವುಗಳಿಂದ ನಮ್ಮನ್ನು ಬಿಡುಗಡೆಗೊಳಿಸಿದರೆ ಮಾತ್ರ ನಾವು ನಮ್ಮ ಇಂದಿನ ಸಮಸ್ಯೆಗಳನ್ನು ವೈಚಾರಿಕತೆ ಹಾಗೂ ಮಾನವೀಯ ನೆಲೆಗಟ್ಟಿನಲ್ಲಿ ಬಗೆಹರಿಸಿಕೊಳ್ಳಬಹುದು. ಹಾಗಾದಾಗ ನಮ್ಮ ವರ್ತಮಾನ ಸೌಖ್ಯವೂ, ಆನಂದಮಯವೂ ಆದೀತು...

ಟಿ.ಎಸ್ ಎಲಿಯಟ್ ಬರೆದ Burnt Norton ಕವಿತೆಯ ಮೊದಲ ಸಾಲು ಹೀಗಿದೆ. Time present and time past are both perhaps present in time future. ಅಂದರೆ ವರ್ತಮಾನ ಹಾಗೂ ಭೂತಕಾಲಗಳೆರಡೂ ಭವಿಷ್ಯತ್ ಕಾಲದಲ್ಲಿವೆ ಎಂದರ್ಥ. ಹಾಗೆಯೇ ಭೂತಕಾಲವೆನ್ನುವುದು ಮುಗಿದು ಹೋದ ಅಥವಾ ವರ್ತಮಾನದಿಂದ ಬೇರ್ಪಟ್ಟ ಕಾಲ ಘಟ್ಟವಲ್ಲ. ಬದಲಿಗೆ ವರ್ತಮಾನದ ಗರ್ಭದಲ್ಲಿ ಅಡಗಿ ಅದನ್ನು ರೂಪಿಸುತ್ತಾ ನಮ್ಮ ಭವಿಷ್ಯವನ್ನು ನಿರ್ಮಿಸುವಂತಹುದು. ಹಾಗಾಗಿ ಐತಿಹಾಸಿಕ ಸತ್ಯ ಎಂದು ನಾವು ನಂಬಿರುವ ಹಲವು ಸಂಗತಿಗಳು ನಿರಂತರವಾಗಿ ನಮ್ಮ ವರ್ತಮಾನವನ್ನು ಪುನರ್ ರಚಿಸುತ್ತ ನಮ್ಮ ಭವಿಷ್ಯವನ್ನು ರೂಪಿಸುತ್ತಿರುತ್ತವೆ. ಈ ಕಾರಣಕ್ಕಾಗಿ ಐತಿಹಾಸಿಕ ಸತ್ಯ ಎಂಬುದು ಅತ್ಯಂತ ಸಂಕೀರ್ಣವೂ ಹಾಗೂ ಸುಲಭದಲ್ಲಿ ಅರ್ಥೈಸಲು ಸಾಧ್ಯವಾಗದ ವಿದ್ಯಮಾನ.

ಇತಿಹಾಸ ನಮಗೆ ನಿಖರವಾದ ಸತ್ಯಗಳನ್ನು ಒದಗಿಸುವುದು ಸುಲಭ ಸಾಧ್ಯವಲ್ಲ. 21ನೆಯ ಶತಮಾನದಲ್ಲಿ ಇಷ್ಟೆಲ್ಲ ಸೈಂಟಿಫಿಕ್ ಅಡ್ವಾನ್ಸ್‌ಮೆಂಟ್ ಆಗಿರುವ ಈ ಕಾಲಘಟ್ಟದಲ್ಲಿಯೂ ನಮ್ಮ ಮಧ್ಯೆಯೇ ನಡೆಯುವ ಹಲವು ಘಟನೆಗಳ ಬಗ್ಗೆ ಭಿನ್ನ ನಿಲುವುಗಳನ್ನು ನಾವು ನೋಡುತ್ತೇವೆ. ಉದಾಹರಣೆಗೆ ಪಹಲ್ಗಾಮ್‌ನಲ್ಲಿ ನಡೆದ ಹತ್ಯಾಕಾಂಡ. ಆಡಳಿತ ಪಕ್ಷ ಈ ಹತ್ಯಾಕಾಂಡದ ಕರ್ತೃಗಳು ಪಾಕಿಸ್ತಾನಿ ಭಯೋತ್ಪಾದಕರು ಎಂದರೆ, ವಿರೋಧ ಪಕ್ಷದ ಕೆಲ ನಾಯಕರು ಹಾಗೆ ಹೇಳುವುದಕ್ಕೆ ಆಧಾರಗಳೇನು? ಅವರು ಕಾಶ್ಮೀರದವರೇ ಏಕೆ ಆಗಿರಬಾರದು ಎಂದು ವಾದಿಸಿದರು. ಇದು ಕೇವಲ ಒಂದು ಉದಾಹರಣೆ. ಅವರು ಪಾಕಿಸ್ತಾನಿ ಭಯೋತ್ಪಾದಕರಾ ಇಲ್ಲವೇ ಕಾಶ್ಮೀರದವರಾ ಎಂದು ನಿರ್ಧರಿಸುವುದು ಈ ಲೇಖನದ ಉದ್ದೇಶವಲ್ಲ. ಬದಲಾಗಿ ಈ ಭಿನ್ನ ದೃಷ್ಟಿಕೋನಗಳು ನಮ್ಮ ಸಮಕಾಲೀನ ಈ ಘಟನೆಯ ನಿಖರತೆಯನ್ನು ಸಂಶಯಾಸ್ಪದ ಎನ್ನುವಂತೆ ಕೆಲವು ರಾಜಕೀಯ ಹಿತಾಸಕ್ತಿಗಳು ತಮ್ಮ ಐಡಿಯಾಲಜಿಗಳಿಗೆ ತಕ್ಕಂತೆ ಬಿಂಬಿಸಿ ವಿಭಿನ್ನ ರೀತಿಯಲ್ಲಿ ಅರ್ಥೈಸಿದ್ದು. ದೃಶ್ಯ ಮಾಧ್ಯಮಗಳಂತೂ ಇಂತಹ ಘಟನೆಗಳ ಸುತ್ತ ಇನ್ನೂ ಹೆಚ್ಚಿನ ಗೊಂದಲಗಳನ್ನು ಸೃಷ್ಟಿಸುತ್ತವೆ. ವರ್ತಮಾನದ ಸ್ಥಿತಿಯೇ ಹೀಗಿರುವಾಗ ಒಂದು ಸಾವಿರ ವರ್ಷಗಳ ಹಿಂದೆ ಅಥವಾ ಎರಡು ಸಾವಿರ ವರ್ಷಗಳ ಹಿಂದೆ ನಡೆದ ಘಟನೆಗಳ ಸತ್ಯಾಸತ್ಯತೆಯನ್ನು ನಾವು ಅರಿಯುವುದು ಹೇಗೆ?

ಒಂದು ನೋಟ

ಐತಿಹಾಸಿಕ ಸತ್ಯಗಳು ಎಂದು ನಾವು ಇಂದು ನಂಬಿರುವ ಸಂಗತಿಗಳನ್ನು ಹಲವು ವರ್ಷಗಳ ಕಾಲ ಇತಿಹಾಸಕಾರರು ಆಯಾಯ ಕಾಲದ ಶಾಸನಗಳು, ಅವಶೇಷಗಳು, ವಾಸ್ತುಶಿಲ್ಪ, ಸಾಹಿತ್ಯ ಮೌಖಿಕ ಸಂಪ್ರದಾಯ ಹೀಗೆ ಇನ್ನೂ ಅನೇಕ ಆಧಾರಗಳನ್ನು ಸಂಗ್ರಹಿಸಿ ಅವನ್ನು ಸಂಶೋಧಿಸಿ ತಮ್ಮ ತಿಳಿವಿನ ನೆಲಗಟ್ಟಿನಲ್ಲಿ ಅಳೆದು ತೂಗಿ ಒಂದು ಇತಿಹಾಸದ ನಿರೂಪಣೆಯನ್ನು ಕಟ್ಟಿಕೊಟ್ಟಿರುತ್ತಾರೆ. ಈ ಎಲ್ಲ ಆಧಾರಗಳ ಹಿನ್ನೆಲೆಯಲ್ಲಿ ಒಂದು ಕಾಲದ ಇತಿಹಾಸ ನಿರೂಪಿಸಲ್ಪಟ್ಟಿರುತ್ತದೆ. ಇದರ ಜೊತೆಗೆ ಈ ನಿರೂಪಣೆಯನ್ನು ಕೈಗೊಂಡ ಇತಿಹಾಸಕಾರನ ಜ್ಞಾನ, ಗ್ರಹಿಕೆ ಹಾಗೂ ವ್ಯಕ್ತಿತ್ವ ಆತನ ನಿರೂಪಣೆಯ ಮೇಲೆ ಗಾಢವಾದ ಪ್ರಭಾವ ಬೀರಿರುತ್ತವೆ. ಆದಾಗ್ಯೂ ಈ ನಿರೂಪಣೆ ಪೂರ್ಣ ಸತ್ಯ ಎಂದು ಹೇಳಲಾಗದು. ಏಕೆಂದರೆ ಐತಿಹಾಸಿಕ ಆಧಾರಗಳು ಪರಿಪೂರ್ಣವಾಗಿ ಹಲವು ಸಂದರ್ಭಗಳಲ್ಲಿ ಸಿಕ್ಕಿರುವುದಿಲ್ಲ. ಜೊತೆಗೆ ಐತಿಹಾಸಿಕ ಘಟನೆಗಳ ನಿರೂಪಣೆ ಪ್ರಭಾವಿ ವ್ಯಕ್ತಿ, ದೇಶ ಹಾಗೂ ಆರ್ಥಿಕತೆ ಮುಂತಾದ ಅಂಶಗಳ ಪ್ರಭಾವಕ್ಕೆ ಒಳಗಾಗಿರುತ್ತದೆ. ಹಾಗಾಗಿಯೇ ತಳಸಮುದಾಯಗಳ, ಬಡವರ, ಹೆಣ್ಣುಮಕ್ಕಳ ಮತ್ತು ಮಕ್ಕಳ ಕಥಾನಕಗಳು ಇತಿಹಾಸ ಪುಟಗಳಿಂದ ಹೊರಗುಳಿದದ್ದೇ ಹೆಚ್ಚು. ಇದಲ್ಲದೆ ಐತಿಹಾಸಿಕ ಬರವಣಿಗೆ ಸಮಕಾಲೀನ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗುವುದರಿಂದ ಅದು ಹಲವು ಬಗೆಯ ಅರ್ಥೈಸುವಿಕೆಗೆ ತನ್ನನ್ನು ಒಡ್ಡಿಕೊಂಡು ಭಿನ್ನ ರೀತಿಯ ಗ್ರಹಿಕೆಗಳಿಗೆ ಕಾರಣವಾಗುತ್ತದೆ. ಅಲ್ಲದೆ ಆಯಾ ಕಾಲಘಟ್ಟದಲ್ಲಿದ್ದ ರಾಜಕೀಯ ಅಜೆಂಡಾಗಳ ಮೂಸೆಯಿಂದ ಹೊರಹೊಮ್ಮಿರುತ್ತವೆ. ಉದಾಹರಣೆಗೆ ಇತ್ತೀಚೆಗೆ ಕೇಂದ್ರ ಸರ್ಕಾರ NEP ಭಾಗವಾಗಿ NCERT ಪಠ್ಯ ಪುಸ್ತಕಗಳನ್ನು ಪರಿಷ್ಕರಿಸಿ ಪ್ರಕಟಿಸಿದೆ. ಏಳು ಮತ್ತು ಎಂಟನೆಯ ತರಗತಿಯ ಸಮಾಜ ವಿಜ್ಞಾನ ಪುಸ್ತಕದಲ್ಲಿ ಹಲವು ಮಾರ್ಪಾಡು ಮಾಡಿ ಹೊಸ ಆವೃತ್ತಿಯ ಪಠ್ಯ ಪುಸ್ತಕಗಳನ್ನು ಪ್ರಕಟಿಸಿದೆ. ಇದರಲ್ಲಿ ಮಧ್ಯಯುಗೀನ ಭಾರತಕ್ಕೆ ಸಂಬಂಧಪಟ್ಟ ಆಡಳಿತವನ್ನು 'ಡಾರ್ಕ್ ಏಜಿಸ್' ಎನ್ನುವ ಶೀರ್ಷಿಕೆಯಲ್ಲಿ, ಮೊಘಲರು ಹಾಗೂ ಡೆಲ್ಲಿ ಸುಲ್ತಾನರ ವಿವರಗಳನ್ನು ಏಳನೆಯ ತರಗತಿಯ ಸಮಾಜ ವಿಜ್ಞಾನ ಪಠ್ಯದಿಂದ ಮೊಟಕುಗೊಳಿಸಲಾಗಿದೆ. ಟಿಪ್ಪು ಸುಲ್ತಾನ್, ಹೈದರಾಲಿ ಹಾಗೂ ನಾಲ್ಕು ಆಂಗ್ಲೊ ಮೈಸೂರ್ ಯುದ್ಧಗಳ ವಿವರಗಳನ್ನು ಎಂಟನೆಯ ತರಗತಿಯ ಸಮಾಜ ವಿಜ್ಞಾನ ಪಠ್ಯದಿಂದ ಕೈಬಿಡಲಾಗಿದೆ. ಅಷ್ಟೇ ಅಲ್ಲದೆ ಇಲ್ತುಮಿಷ್‌ನ ಮಗಳು ರಜಿಯಾ ಸುಲ್ತಾನ ಬಗೆಗಿನ ವಿವರಗಳನ್ನು ಕೈಬಿಡಲಾಗಿದೆ. ಜಜಿಯ ಎನ್ನುವ ಸುಂಕವನ್ನು ಮುಸ್ಲಿಮೇತರ ಸಮುದಾಯಗಳ ಮೇಲೆ ಹೇರಿ ಅವರನ್ನು ಮಾನಸಿಕ ಹಾಗೂ ದೈಹಿಕ ಹಿಂಸೆಗೆ ಒಳಪಡಿಸಿ ಧಾರ್ಮಿಕ ಮತಾಂತರಕ್ಕೆ ಒಡ್ಡಲಾಗುತ್ತಿತ್ತೆಂದು ವಿವರಿಸಲಾಗಿದೆ. ಮರಾಠ ರಾಜ್ಯಭಾರವನ್ನು ವಿವರವಾಗಿ ಕೊಡಲಾಗಿದೆ. ಜೊತೆಗೆ ಈ ಹಿಂದೆ ಇತಿಹಾಸ ಪುಟಗಳಲ್ಲಿ ದಾಖಲಾಗಿರದ ಅಸ್ಸಾಂ ರಾಜ್ಯದ 'ಅಹೋಮ್' ರಾಜಮನೆತನದ ವಿವರಗಳನ್ನು ಸೇರಿಸಲಾಗಿದೆ. ಸ್ವಾಭಾವಿಕವಾಗಿ ಈ ಪರಿಷ್ಕೃತ ಪಠ್ಯಪುಸ್ತಕ ಓದಿ ಬೆಳೆಯುವ ಮುಂದಿನ ಪೀಳಿಗೆಯ ಆಲೋಚನೆಗಳು ಈ ಮಾರ್ಪಾಡುಗಳಿಲ್ಲದ ಪಠ್ಯಪುಸ್ತಕ ಓದಿ ಬೆಳೆದ ಪೀಳಿಗೆಗಿಂತ ಭಿನ್ನವಾಗಿರುತ್ತವೆ.

ಮತ್ತೊಂದು ನೋಟ

ಇನ್ನು ಐತಿಹಾಸಿಕ ಸತ್ಯ ಎಂಬುದು ನಿಂತ ನೀರಿನಂತಲ್ಲ. ಅದು ನಿರಂತರವಾಗಿ ತನ್ನನ್ನು ತಾನು ಶೋಧಿಸುತ್ತಾ ಹೊಸರೂಪ ಪಡೆಯುವಂತಹುದು. ಹಲವು ಬಾರಿ ನಾವು ಇತಿಹಾಸದ ಬಗ್ಗೆ ನಂಬಿರುವ ಈಗಿನ ತಿಳುವಳಿಕೆಯನ್ನು ಒರೆಗೆ ಹಚ್ಚುವ ಅಂಶಗಳು ಪತ್ತೆಯಾಗುತ್ತಲೇ ಇರುತ್ತವೆ. ಉದಾಹರಣೆಗೆ ಇತ್ತೀಚೆಗೆ ತಮಿಳುನಾಡಿನಲ್ಲಿ ಕೈಗೊಂಡ ಕೀಲಾಡಿ ಉತ್ಖನನ. ಈ ಉತ್ಖನನದ ಪ್ರಕಾರ ತಮಿಳುನಾಡಿನ ಇತಿಹಾಸ ಸಿಂಧೂ ನಾಗರಿಕತೆಗೆ ಪರ್ಯಾಯವಲ್ಲದಿದ್ದರೂ ಅದರಷ್ಟೇ ಪ್ರಾಚೀನವಾಗಿರಬಹುದೆಂದು ಊಹಿಸಲಾಗುತ್ತಿದೆ. ತಮಿಳುನಾಡಿನ ಸಂಗಮ್ ಯುಗದಲ್ಲಿ ಅಸ್ತಿತ್ವದಲ್ಲಿದ್ದ ನಾಗರಿಕತೆ ಸಿಂಧೂ ನಾಗರಿಕತೆಯೊಂದಿಗೆ ವ್ಯಾಪಾರ ಮತ್ತು ಸಾಂಸ್ಕೃತಿಕ ವಿನಿಮಯ ಹೊಂದಿತ್ತೆಂದು ಊಹಿಸಲಾಗಿದೆ. ತಮಿಳುನಾಡು ಸರ್ಕಾರ ತನ್ನ ನಾಗರಿಕತೆಯ ಪ್ರಾಚೀನತೆಯನ್ನು ಹೆಮ್ಮೆಯಿಂದ ಪ್ರತಿಪಾದಿಸುತ್ತಿದ್ದು ಅದನ್ನು ಪ್ರಾಚೀನ ಐತಿಹಾಸಿಕ ಕುರುಹು ಎಂದು ಶಿಫಾರಸ್ಸು ಮಾಡಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತಿದೆ. ಈ ಮಧ್ಯೆ ಕೇಂದ್ರ ಸರ್ಕಾರ ಹಾಗೆ ಶಿಫಾರಸ್ಸು ಮಾಡಲು ಹೇರಳವಾದ ಸಾಕ್ಷ್ಯಾಧಾರಗಳು ಇಲ್ಲವೆಂದು ವಾದಿಸುತ್ತಿದೆಯಾದರು ತಮಿಳುನಾಡು ತನ್ನ ನಾಗರಿಕತೆಯ ಪ್ರಾಚೀನತೆಯನ್ನು ಮಾನ್ಯ ಮಾಡಲೇಬೇಕೆಂದು ಪಟ್ಟು ಹಿಡಿದಿದೆ. ಮಾತ್ರವಲ್ಲ, ಕೇಂದ್ರ ಸರ್ಕಾರ ತನ್ನ ರಾಜಕೀಯ ಹಿತಾಸಕ್ತಿಗಳಿಗಾಗಿ ಈ ವಿಷಯವನ್ನು ಸಾರ್ವಜನಿಕವಾಗಿ ಒಪ್ಪಿಕೊಳ್ಳಲು ನಿರಾಕರಿಸುತ್ತಿದೆ ಎಂದೆಲ್ಲಾ ಹೇಳಲಾಗುತ್ತಿದೆ. ಅಲ್ಲದೆ ಇತ್ತೀಚೆಗೆ ಈಜಿಪ್ಟಿನ ಗೀಜಾದಲ್ಲಿ ಕೈಗೊಂಡ ಪಿರಮಿಡ್‌ಗಳ ಅವಶೇಷಗಳ ಅಧ್ಯಯನ ಮುಂತಾದವು ಪಿರಮಿಡ್‌ಗಳ ಬಗೆಗಿನ ಇಂದಿನ ಗ್ರಹಿಕೆಗಳನ್ನು ಪುನರ್ವಿಮರ್ಶೆಗೆ ಒಳಪಡಿಸುತ್ತ ನಮ್ಮ ತಿಳಿವಿನ ಎಲ್ಲೆಯನ್ನು ವಿಸ್ತರಿಸುತ್ತಲೇ ಇವೆ.

ಮಗದೊಂದು ನೋಟ

ಬ್ರಿಟಿಷ್ ಇತಿಹಾಸಕಾರ ಈ ಎಚ್ ಕಾರ್, What Is History? ಎಂಬ ತನ್ನ ಪುಸ್ತಕದಲ್ಲಿ ಹೀಗೆ ಹೇಳುತ್ತಾನೆ. ಐತಿಹಾಸಿಕ ಫ್ಯಾಕ್ಟ್ಸ್‌ಗಳು ಫಿಶ್ ಮಾರ್ಕೆಟ್‌ನಲ್ಲಿ ಇರುವ ಫಿಶ್‌ಗಳಿದ್ದ ಹಾಗೆ. ಗ್ರಾಹಕ ತನ್ನ ಅವಶ್ಯಕತೆಗೆ ತಕ್ಕಂತೆ ಅಲ್ಲಿರುವ ಫಿಶ್‌ಗಳಲ್ಲಿ ಕೆಲವನ್ನು ಮಾತ್ರ ಖರೀದಿಸಿ, ಮಸಾಲೆ ಬೆರೆಸಿ, ಒಗ್ಗರಣೆ ಕೊಟ್ಟು, ಸೇವಿಸುತ್ತಾನೆ. ಹಾಗೆಯೇ ಇತಿಹಾಸಕಾರ ಕೂಡ ರಾಶಿಗಟ್ಟಲೆ ಇರುವ ಐತಿಹಾಸಿಕ ಫ್ಯಾಕ್ಟ್ಸ್‌ಗಳಲ್ಲಿ ತನಗೆ ಬೇಕಾದ ಕೆಲವನ್ನು ಮಾತ್ರ ಆಯ್ಕೆ ಮಾಡಿ ತನ್ನ ದೃಷ್ಟಿಕೋನಕ್ಕೆ ತಕ್ಕಂತೆ ಅರ್ಥೈಸಿ ಅದನ್ನು ಮುಂದಿನ ಪೀಳಿಗೆಗೆ ರವಾನಿಸುತ್ತಾನೆ. ಆದರೆ ಗಮನಿಸಬೇಕಾದ ಅಂಶವೆಂದರೆ ಇತಿಹಾಸಕಾರನ ಕಥಾನಕ ಕೆಲವೇ ನಿರ್ದಿಷ್ಟ ಫ್ಯಾಕ್ಟ್ಸ್‌ಗಳ ಮೇಲೆ ಅವಲಂಭಿತವಾಗಿರುತ್ತದೆ. ಅಲ್ಲದೆ ಯಾವ ಐತಿಹಾಸಿಕ ಫ್ಯಾಕ್ಟ್ಸ್‌ಗಳೂ ಇತಿಹಾಸಕಾರನ ಅರ್ಥೈಸುವಿಕೆಗೆ ಹೊರತಾಗಿಲ್ಲ. ಹೀಗಿದ್ದರೂ ನಾವು ಇತಿಹಾಸಕಾರನಿಂದ ನಿರೂಪಿಸಲ್ಪಟ್ಟ ಕಥಾನಕ ಸತ್ಯವಾಗಿದೆ ಎಂದು ನಂಬುತ್ತೇವೆ. ಅಷ್ಟೇ ಏಕೆ, ಅದರ ಸಮರ್ಥನೆಗಾಗಿ ಹೋರಾಡುತ್ತೇವೆ.

ಈ ಎಲ್ಲ ಹಿನ್ನೆಲೆಯಲ್ಲಿ ಐತಿಹಾಸಿಕ ಸತ್ಯ ಎಂಬುದು ಒಂದು ಮಾಯಾಮೃಗವಿದ್ದಂತೆ. ಬೆನ್ನಟ್ಟಿ ಹೋದಷ್ಟು ನಮ್ಮಿಂದ ದೂರ ದೂರ ಸಾಗುತ್ತ ನಮ್ಮನ್ನು ಇನ್ನಿಲ್ಲದಂತೆ ಘಾಸಿಗೊಳಿಸುತ್ತದೆ. ಆದ್ದರಿಂದ ಐತಿಹಾಸಿಕ ಸತ್ಯಗಳ ಪ್ರತಿಪಾದನೆಗಾಗಿ ನಾವು ನಡೆಸುವ ಹೋರಾಟಗಳು ನಮ್ಮ ವರ್ತಮಾನವನ್ನು ನುಂಗಿ ಹಾಕಿ ಜ್ವಲಂತ ಸಮಸ್ಯೆಗಳಿಂದ ನಮ್ಮನ್ನು ವಿಮುಖರನ್ನಾಗಿಸುತ್ತವೆ. ಹಾಗಾಗಿ ನಾವು ನಂಬಿರುವ ಐತಿಹಾಸಿಕ ಸತ್ಯಗಳು ನಮ್ಮನ್ನು ಕಾಲಗರ್ಭದಲ್ಲಿ ಕಟ್ಟಿಹಾಕದೇ ಅವುಗಳಿಂದ ನಮ್ಮನ್ನು ಬಿಡುಗಡೆಗೊಳಿಸಿದರೆ ಮಾತ್ರ ನಾವು ನಮ್ಮ ಇಂದಿನ ಸಮಸ್ಯೆಗಳನ್ನು ವೈಚಾರಿಕತೆ ಹಾಗೂ ಮಾನವೀಯ ನೆಲೆಗಟ್ಟಿನಲ್ಲಿ ಬಗೆಹರಿಸಿಕೊಳ್ಳಬಹುದು. ಹಾಗಾದಾಗ ನಮ್ಮ ವರ್ತಮಾನ ಸೌಖ್ಯವೂ, ಆನಂದಮಯವೂ ಆದೀತು...

ಸಾರ್ವಜನಿಕರು, ಸಂಘ–ಸಂಸ್ಥೆಗಳ ಸಹಕಾರದಿಂದ ಮೈಸೂರನ್ನು ಸುಂದರ, ಸ್ವಚ್ಛ ನಗರವಾಗಿಸುವ ಪ್ರಯತ್ನ

● ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಇರಾದೆ ● ಉದ್ಯಾನಗಳ ದತ್ತು ಪಡೆದು ನಿರ್ವಹಣೆ ಮಾಡಲು ಮನವಿ ● ಸಿಎಸ್‌ಆರ್ ಯೋಜನೆಯಡಿ ಉದ್ಯಾನವನಗಳ ನಿರ್ವಹಣೆ ಮಾಡುತ್ತಿರುವವರಿಗೆ ಪ್ರಶಂಸಾ ಪತ್ರ



ಮೈಸೂರು ಮಹಾನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಮೈಸೂರಿನ ವಿವಿಧ ಪಾರ್ಕ್‌ಗಳನ್ನು ನಿರ್ವಹಣೆ ಮಾಡುತ್ತಿರುವ ಸಂಘ–ಸಂಸ್ಥೆಗಳ ಪ್ರತಿನಿಧಿಗಳಿಗೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಪ್ರಶಂಸನಾ ಪತ್ರ ವಿತರಿಸಿದರು.

ಮೈಸೂರು,ನ.19(ಎಂಟಿವೈ)–ಸಾರ್ವಜನಿಕರು ಹಾಗೂ ಸಂಘ–ಸಂಸ್ಥೆಗಳ ಸಹಕಾರದಿಂದ ಮೈಸೂರು ನಗರವನ್ನು ಸುಂದರ ಹಾಗೂ ಸ್ವಚ್ಛ ನಗರಿಯನ್ನಾಗಿ ಮಾಡುವ ನಿಟ್ಟಿನಲ್ಲಿ ಮೈಸೂರು ಮಹಾನಗರಪಾಲಿಕೆ ಕಾರ್ಯಕ್ರಮ ರೂಪಿಸಿದ್ದು, ಆಸಕ್ತ ಸಂಘ–ಸಂಸ್ಥೆಗಳು ಉದ್ಯಾನವನ ದತ್ತು ತೆಗೆದುಕೊಂಡು ನಿರ್ವಹಣೆ ಮಾಡಲು ಮುಂದಾಗಬೇಕು ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಕೋರಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ 'ನಮ್ಮ ಮೈಸೂರು–ನಮ್ಮ ಕೊಡುಗೆ' ಕಾರ್ಯಕ್ರಮದಡಿ ಸಿಎಸ್‌ಆರ್ ಯೋಜನೆ ಹಾಗೂ ದತ್ತು ಯೋಜನೆಯಡಿ ಮೈಸೂರಿನ ವಿವಿಧ ಪಾರ್ಕ್‌ಗಳನ್ನು ನಿರ್ವಹಣೆ ಮಾಡುತ್ತಿರುವ ಸಂಘ–ಸಂಸ್ಥೆಗಳ ಪ್ರತಿನಿಧಿಗಳಿಗೆ ಪ್ರಶಂಸನಾ ಪತ್ರ ವಿತರಿಸಿ ಮಾತನಾಡಿದ ಅವರು, ಈಗಾಗಲೇ ಮೈಸೂರಿನ ವಿವಿಧ ಬಡಾವಣೆಗಳಲ್ಲಿರುವ 13 ಉದ್ಯಾನವನಗಳನ್ನು ವಿವಿಧ ಸಂಘ–ಸಂಸ್ಥೆಗಳು ದತ್ತು ಪಡೆದು ನಿರ್ವಹಣೆ ಮಾಡುತ್ತಿವೆ. ಇದು ಉತ್ತಮ ಬೆಳವಣಿಗೆಯಾಗಿದ್ದು, ಮೈಸೂರು ನಗರದ ಸ್ವಚ್ಛತೆ ಮತ್ತು ಪರಿಸರ ಕಾಪಾಡಲು ನಾಗರೀಕರು ಹಾಗೂ ಸಂಘ–ಸಂಸ್ಥೆಗಳ ಸಹಕಾರ ಅಗತ್ಯಗತ್ಯ ಎಂದರು.

ಸಾರ್ವಜನಿಕರ ಸಹಭಾಗಿತ್ವವಿದ್ದರೆ ಯಾವುದೇ ಕಾರ್ಯಕ್ರಮ ಹಾಗೂ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದು. ಮೈಸೂರಲ್ಲಿರುವ ಉದ್ಯಾನವನಗಳ ನಿರ್ವಹಣೆ ಮಾಡಲು ಕೆಲವು ಸಂಘ–ಸಂಸ್ಥೆಗಳಿಗೆ ಆಸಕ್ತಿಯಿದ್ದರೂ, ಯಾರ ಸಂಪರ್ಕಿಸಬೇಕು ಎಂದು ತಿಳಿದಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಈಗಾಗಲೇ ವಿವಿಧ ಸಂಸ್ಥೆಗಳು 13 ಪಾರ್ಕ್‌ಗಳನ್ನು ದತ್ತು ಪಡೆದು ಉಚಿತವಾಗಿ ನಿರ್ವಹಣೆ ಮಾಡುತ್ತಿರುವುದು ಶ್ಲಾಘನೀಯ. ಅಲ್ಲದೆ, ಕೆಲವು ಸಂಘ ಸಂಸ್ಥೆಗಳು ಗಿಡಗಳ ನೆಡುವ ಹಾಗೂ ಪಾಲಿಕೆಗೆ ಉಚಿತವಾಗಿ ನೀಡುವ ಮೂಲಕ ತಮ್ಮದೇ ಆದ ರೀತಿಯಲ್ಲಿ ಸೇವೆ ಒದಗಿಸುತ್ತಿವೆ. ಈ ಸೇವೆ ಮನಗಂಡು ಪಾಲಿಕೆ ವತಿಯಿಂದ ಪ್ರಶಂಸನಾ ಪತ್ರ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮೈಸೂರು ಮಹಾನಗರ ಪಾಲಿಕೆಗೆ ಈಗಾಗಲೇ ಮೂರು ಸಾವಿರ ಗಿಡಗಳ ಕೊಡುಗೆ ನೀಡಿದ ಹೆಚ್.ವಿ.ರಾಜೀವ್ ಸ್ನೇಹ ಬಳಗದ ಅಧ್ಯಕ್ಷ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಪ್ರಶಂಸನಾ ಪತ್ರ ಸ್ವೀಕರಿಸಿ ಮಾತನಾಡಿ, ಮೈಸೂರು ನಗರದಲ್ಲಿ ಗಿಡ ನೆಡುವ ಹಾಗೂ ಪರಿಸರ ಸಂರಕ್ಷಣೆ ಮಾಡುವ ವಿಷಯದಲ್ಲಿ ಮೈಸೂರು ಮಹಾನಗರಪಾಲಿಕೆ ಆಸಕ್ತ ಸಂಘ–ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಬೇಕು. ಅದರಲ್ಲಿ ಅರಣ್ಯ ಇಲಾಖೆ ಅಧಿಕಾರಿಯೊಬ್ಬರು ಇರಬೇಕು. ಇತ್ತೀಚಿನ ದಿನಗಳಲ್ಲಿ ಹಲವು ಸಂಘ ಸಂಸ್ಥೆಗಳು ವಿವಿಧೆಡೆ ಗಿಡ ನೆಟ್ಟು ಪೋಷಿಸುವ ಕಾರ್ಯದಲ್ಲಿ ತೊಡಗಿವೆ. ಆದರೆ, ಮುಂದಿನ ನೂರು ವರ್ಷದ ಪರಿಸರದ ಸಮತೋಲನ ಕಾಪಾಡಿಕೊಳ್ಳಲು ಯಾವ ತಳಿಯ ಗಿಡ ನೆಡಬೇಕು ಎಂಬ ವೈಜ್ಞಾನಿಕ ಮಾಹಿತಿ ಸಿಗುತ್ತಿಲ್ಲ. ಆ ಕಾರಣ ಈಗ ನೆಡುತ್ತಿರುವ ಒಂದೆ ತಳಿಯ ಗಿಡಗಳು ಮುಂದಿನ 30 ವರ್ಷದ ನಂತರ ಪರಿಸರಕ್ಕೆ ಮಾರಕವಾಗುವ ಪರಿಸ್ಥಿತಿ ಒದಗಿ ಬರಲೂಬಹುದು. ಹಾಗಾಗಿ ಸಭೆಯಲ್ಲಿ ಅರಣ್ಯ ಅಧಿಕಾರಿಗಳಿದ್ದರೆ 100 ವರ್ಷದ ಮುಂದಾಲೋಚನೆಯಿಂದ ಪರಿಸರ ಸಂರಕ್ಷಣೆ ಹಾಗೂ ಸಮತೋಲನ ಕಾಯ್ದುಕೊಳ್ಳುವ ಗಿಡಗಳನ್ನು ಈಗಿನಿಂದಲೇ ನೆಟ್ಟು ಪೋಷಿಸಲು ಕ್ರಮ ಕೈಗೊಳ್ಳಬೇಕಾಗಿದೆ ಎಂದರು.

ಮೈಸೂರಿನ ವಿಜಯನಗರದ 3ನೇ ಹಂತ ಒಂದು ಎಕರೆ ವಿಸ್ತೀರ್ಣದ ಉದ್ಯಾನವನದಲ್ಲಿ ಕಿರು ಅರಣ್ಯ ಅಭಿವೃದ್ಧಿ ಹಾಗೂ ದಟ್ಟಗಳ್ಳಿಯ ಜೋಡಿ ಬೇವಿನ ಮರ ಉದ್ಯಾನವನದ 2 ಎಕರೆ ಪ್ರದೇಶದಲ್ಲಿ ಗಿಡ ನೆಟ್ಟಿರುವ ಟೊಯೋಟಾ ಕಿರ್ಲೋಸ್ಕರ್ ಆಟೋಪಾರ್ಟ್ಸ್ ಪ್ರೈ.ಲಿ ಅಧಿಕಾರಿಗಳು ಪ್ರಶಂಸನಾ ಪತ್ರ ಸ್ವೀಕರಿಸಿ, ಸಂಸ್ಥೆ ವತಿಯಿಂದ ಈಗಾಗಲೇ ವಿವಿಧೆಡೆ ಗಿಡ ನೆಡುವ ಕಾರ್ಯಕ್ರಮ ನಡೆಸಲಾಗಿದೆ. ಮೈಸೂರಿನ ಪರಿಸರ ಸಂರಕ್ಷಣೆಗೆ ಪಾಲಿಕೆ ಕೈಗೊಳ್ಳುವ ಕಾರ್ಯಕ್ರಮಕ್ಕೆ ಬೆಂಬಲ ನೀಡುವುದಾಗಿ ತಿಳಿಸಿದರು.

ನಾನು ಪ್ರಧಾನಿ ಭೇಟಿ ಮಾಡಿದ ಬಳಿಕವೇ ಸಕ್ಕರೆ ಕನಿಷ್ಠ ಮಾರಾಟ ಬೆಲೆ ಏರಿಕೆಗೆ ಕೇಂದ್ರ ನಿರ್ಧರಿಸಿದೆ



ಬೆಂಗಳೂರು, ನ19–ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿ ಮಾಡಿ ಈ ವಿಷಯವನ್ನು ಅವರ ಬಳಿ ಪ್ರಸ್ತಾಪಿಸಿದ ನಂತರವೇ ಸಕ್ಕರೆಯ ಕನಿಷ್ಠ ಮಾರಾಟ ಬೆಲೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ತಿಳಿಸಿದ್ದಾರೆ.

ಜೋಶಿ (ಕೇಂದ್ರ ಸರ್ಕಾರ) ಅದನ್ನು (ಸಕ್ಕರೆಯ ಕನಿಷ್ಠ ಮಾರಾಟ ಬೆಲೆ) ಕೆಜಿಗೆ 31 ರೂ.ಗಳಿಂದ 40 ರೂ.ಗಳಿಗೆ ಹೆಚ್ಚಿಸುವ ಬಗ್ಗೆ ಪರಿಗಣಿಸುವುದಾಗಿ ಹೇಳಿದ್ದಾರೆ. ನಾನು ಪ್ರತಿ ಕೆಜಿ ಸಕ್ಕರೆಗೆ 41 ರೂ. ಕೇಳಿದ್ದೆ. ನಾನು ಅವರನ್ನು (ಪ್ರಧಾನಿ) ಭೇಟಿಯಾಗಿ ವಿನಂತಿಸಿದ ನಂತರ ಅವರು ಈ ಕ್ರಮ ಕೈಗೊಂಡಿದ್ದಾರೆ ಎಂದು ಸಿದ್ದರಾಮಯ್ಯ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ರಾಜ್ಯಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ, ಕಬ್ಬು ಬೆಲೆ ನಿಗದಿ, ಪ್ರವಾಹ ಪರಿಹಾರ ಹಾಗೂ ಪ್ರಮುಖ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಬೇಡಿಕೆ ಈಡೇರಿಸಲು ಮನವಿ ಪತ್ರ ಸಲ್ಲಿಸಿದ್ದಾರೆ. ಕರ್ನಾಟಕದಲ್ಲಿ ಕಬ್ಬು ಬೆಳೆಗಾರರು ಕಬ್ಬಿಗೆ ದರ ನಿಗದಿ ಮಾಡುವಂತೆ ತೀವ್ರ ಪ್ರತಿಭಟನೆ ನಡೆಸಿದ ನಂತರ ಮುಖ್ಯಮಂತ್ರಿ ಪ್ರಧಾನಿ ಮೋದಿಯವರ ಭೇಟಿಗೆ ಸಮಯ ಕೋರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕೃಷಿಯಲ್ಲಿ ಸಾಕಷ್ಟು ಆದಾಯ ಬಂದರೆ ಯುವ ರೈತರ ಬದುಕು ಬೆಳಗಲಿದೆ

- ಈಗಂತೂ ಆದಾಯ ಕಮ್ಮಿ ಇದೆ; ಶಾಸಕ-ರೈತ ಮುಖಂಡ ದರ್ಶನ್ ಪುಟ್ಟಣ್ಣಯ್ಯ ವಿಷಾಧ
- ಈಗಂತೂ ಆದಾಯ ಕಡಿಮೆಯಾಗಿ ಯುವ ರೈತರಿಗೆ ಯಾರೂ ಹೆಣ್ಣು ಕೊಡುತ್ತಿಲ್ಲ; ಆತಂಕ
- ಪ್ರಗತಿಪರ ರೈತ ಎಂ.ಎಸ್.ಕುಮಾರ್ ಅವರಿಗೆ 'ರೋಟರಿ ಆದರ್ಶ ರೈತ' ಪ್ರಶಸ್ತಿ ಪ್ರದಾನ



ಹುಲ್ಲಹಳ್ಳಿಯ ರಾಂಪುರ ಗ್ರಾಮದ ಪ್ರಗತಿಪರ ರೈತರಾದ ಎಂ.ಎಂ.ಕುಮಾರ್ ಅವರಿಗೆ ರೋಟರಿ ಆದರ್ಶ ರೈತ ಪ್ರಶಸ್ತಿಯನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಪ್ರದಾನ ಮಾಡಿದರು.

ನಮ್ಮ ಊರಿನಲ್ಲಿ ಅಂದಾಜು 3-4 ಸಾವಿರ ಜನಸಂಖ್ಯೆಯಿದೆ. ಇದರಲ್ಲಿ 30 ವರ್ಷ ಮೇಲ್ಪಟ್ಟ 300-400 ಯುವಕರಿದ್ದಾರೆ. ಅವರಿಗೆ ಇನ್ನೂ ಮದುವೆಯಾಗಿಲ್ಲ. ಇವರೆಲ್ಲ ಪದವೀಧರರು. ಹಾಗಾಗಿ ಯುವಕರು ಕೃಷಿಯಲ್ಲಿ ಉಳಿಯಬೇಕು. ಹಳ್ಳಿಯಲ್ಲಿ ವಾಸಿಸಬೇಕು ಎನ್ನುವುದಾದರೆ, ರೈತರು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆ ಸಿಗಬೇಕು. ಇದಕ್ಕೆ ಸಮುದಾಯದ ಪ್ರೋತ್ಸಾಹ ಅಗತ್ಯ
- ದರ್ಶನ್ ಪುಟ್ಟಣ್ಣಯ್ಯ, ಶಾಸಕರು.

ಮೈಸೂರು, ನ.19(ಎಸ್‌ಪಿಎನ್)- ಪ್ರಸ್ತುತ ಈಗಿನ ಕೃಷಿ ಪದ್ಧತಿಯಿಂದ ರೈತರಿಗೆ ಆದಾಯ ಕಡಿಮೆಯಿದೆ, ಕೃಷಿಯಲ್ಲಿ ತೊಡಗಿರುವ ಯುವಕರಿಗೆ ಹೆಣ್ಣು ಕೊಡುತ್ತಿಲ್ಲ. ಸಣ್ಣ ವಿಷಯವಾದರೂ ಗ್ರಾಮೀಣ ಪ್ರದೇಶದಲ್ಲಿ ಈ ವಿಷಯ ಸಾಮಾಜಿಕ ಪಿಡುಗಾಗಿ ಪರಿವರ್ತಿತವಾಗುತ್ತಿದೆ ಎಂದು ಶಾಸಕ, ರೈತ ಮುಖಂಡ ದರ್ಶನ್ ಪುಟ್ಟಣ್ಣಯ್ಯ ಆತಂಕ ವ್ಯಕ್ತಪಡಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಐಡಿಯಲ್ ಜಾವಾ ಸಭಾಂಗಣದಲ್ಲಿ ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ದಿ.ಎಚ್.ಎನ್.ಶಿವದೇವಪ್ಪ ಸ್ಮರಣಾರ್ಥ ಹುಲ್ಲಹಳ್ಳಿಯ ರಾಂಪುರ ಗ್ರಾಮದ ಪ್ರಗತಿ ಪರ ರೈತರಾದ ಎಂ.ಎಂ.ಕುಮಾರ್ ಅವರಿಗೆ ರೋಟರಿ ಆದರ್ಶ ರೈತ ಪ್ರಶಸ್ತಿ ಪ್ರದಾನ ಮಾಡಿ, ಮಾತನಾಡಿದ ಶಾಸಕರು, ರೈತರ ಕೃಷಿ ಚಟುವಟಿಕೆಯನ್ನು ಲಾಭದಾಯಕಗೊಳಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಹಾಗೂ ಈಗಿನ ಕೃಷಿ ಪದ್ಧತಿಯನ್ನು ಬದಲಾಯಿಸುವ ನಿಟ್ಟಿನಲ್ಲಿ ಸರ್ಕಾರಗಳು ಚಿಂತಿಸಬೇಕಾಗಿದೆ. ಕೃಷಿಯಲ್ಲಿ ಆದಾಯ ಬರುವಂತಾದರೆ, ಯುವಕರ ವೈಯಕ್ತಿಕ ಬದುಕು, ಕೌಟುಂಬಿಕ ವ್ಯವಸ್ಥೆಯು ಹಸನಾಗುತ್ತದೆ ಎಂದು ಸಲಹೆ ನೀಡಿದರು.

ರೋಟರಿ ಮೈಸೂರು ಮಿಡ್‌ಟೌನ್ ಪದಾಧಿಕಾರಿಗಳು ಹುಲ್ಲಹಳ್ಳಿಯ ರಾಂಪುರದ ಎಂ.ಎಂ. ಕುಮಾರ್ ಅವರಿಗೆ 'ಆದರ್ಶ ರೈತ ಪ್ರಶಸ್ತಿ' ನೀಡಿ ಗೌರವಿಸುತ್ತಿರುವುದು ರೈತ ಸಮುದಾಯಕ್ಕೆ ನೀಡುತ್ತಿರುವ ಗೌರವವಾಗಿದೆ ಎಂದ ಶಾಸಕರು, ಪ್ರಸ್ತುತ ಭಾರತದಲ್ಲಿ ರೈತರು ಅಳವಡಿಸಿಕೊಂಡಿರುವ ಕೃಷಿ ಪದ್ಧತಿಯಲ್ಲಿ ಬದಲಾವಣೆ ತರುವುದು ಈಗಿನ ಪರಿಸ್ಥಿತಿಗೆ ಅತ್ಯಗತ್ಯ. ಮಿಶ್ರ ಬೆಳೆ ಪದ್ಧತಿ, ಉಪ ಉತ್ಪನ್ನಗಳನ್ನು ಸೃಷ್ಟಿಸುವ ಕೃಷಿ, ಹೈನುಗಾರಿಕೆ ಕುರಿತು ರೈತರು ಗಮನಹರಿಸಿ, ತಮ್ಮ ತಲಾದಾಯ ಹೆಚ್ಚಿಸಿಕೊಳ್ಳುವ ಕುರಿತು ಗಮನ ಹರಿಸಬೇಕು ಎಂದು ಕಿವಿಮಾತು ಹೇಳಿದರು.


ರಾಸಾಯಿನಿಕ ಬಳಸಿ ಬೆಳೆಯುವ ಬೆಳೆಗಳನ್ನು ನಿಧಾನವಾಗಿ ತ್ಯಜಿಸಿ, ಸಾವಯವ ಕೃಷಿ ಉತ್ಪನ್ನಗಳಿಗೆ ಬೆಂಬಲ, ಸೂಕ್ತ ಬೆಲೆ ನಿಗಧಿಯಾಗಬೇಕು. ಇದಕ್ಕೆ ನಗರವಾಸಿಗಳ ಬೆಂಬಲವೂ ಅಗತ್ಯ. ಈ ನಿಟ್ಟಿನಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಿ, ರೈತರ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ದೊರಕುವಂತೆ ಮಾಡಲು ಕ್ರಮವಹಿಸಲಾಗುತ್ತಿದೆ. ಈಗಿನ ಪರಿಸ್ಥಿತಿಯಲ್ಲಿ ಒಂದು ಕಟ್ಟು ಕೊತ್ತಂಬರಿ ಸೊಪ್ಪು ಮಾರುಕಟ್ಟೆಯಲ್ಲಿ 1 ರೂ.ಗೆ ದೊರೆತರೆ, ಅದರಲ್ಲಿ ರೈತನಿಗೆ ದೊರಕುವುದು ಕೇವಲ 23 ಪೈಸಾ. ಹಾಗಾಗಿ ರೈತ ಉತ್ಪನ್ನಗಳಿಗೆ ನೇರ ಮಾರುಕಟ್ಟೆ ಕಲ್ಪಿಸುವ, ಮಾರುಕಟ್ಟೆ ಮೌಲ್ಯದಲ್ಲಿ ಶೇ 50 ರಷ್ಟನ್ನು ರೈತರಿಗೆ ದೊರಕಿಸುವಂತಹ ನಿಯಮ ಸರ್ಕಾರ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ರೋಟರಿ ಆದರ್ಶ ರೈತ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಎಂ.ಎಂ.ಕುಮಾರ್, 30 ವರ್ಷದಿಂದ ವ್ಯವಸಾಯದಲ್ಲಿ ತೊಡಗಿಸಿಕೊಂಡಿದ್ದೇನೆ. ಕೃಷಿ ಎಂದೂ ನನ್ನ ಕೈಬಿಡಲಿಲ್ಲ. ನನ್ನ ಜಮೀನಿನಲ್ಲಿ ಶುಂಠಿ ಬೆಳೆ ಬರುವುದಿಲ್ಲ ಎಂದು ಕೇರಳದ ವ್ಯಾಪಾರಿಯೊಬ್ಬರು ಹೇಳಿದ್ದರು. ಆದರೆ, ನಾನು ಎಕರೆಗೆ 300 ಚೀಲ ಬೆಳೆದು ತೋರಿಸಿದೆ. ಈ ಭಾಗದಲ್ಲಿ ಗೋಧಿ ಬೆಳೆಯನ್ನೂ ಬೆಳೆದು ಯಶಸ್ವಿಯಾಗಿದ್ದೇನೆ. ಭೂಮಿಯನ್ನು ನಂಬಿ ಶ್ರಮಿಸಿದರೆ ಅದು ಎಂದಿಗೂ ಕೈಬಿಡುವುದಿಲ್ಲ ಯುವ ರೈತರಿಗೆ ಕಿವಿಮಾತು ಹೇಳಿದರು.

ರೈತರ ಬೆಳೆಗಳಿಗೆ ಸೂಕ್ತ ಬೆಲೆ ದೊರೆತರೆ ಮಾತ್ರ ಗೌರವ ದೊರೆಯುತ್ತದೆ. ರಾಸಾಯನಿಕ ಮುಕ್ತ ಕೃಷಿಗೆ ಒತ್ತು ನೀಡಿ, ಜನರ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡುವುದು ನಮ್ಮ ಕರ್ತವ್ಯ. ವ್ಯಾಪಾರಿ ಮನೋಭಾವ ಇಲ್ಲದ ರೈತನೇ ನಿಜವಾದ ಆದರ್ಶ ರೈತ ಎಂದು ಬಣ್ಣಿಸಿದರು. ವೇದಿಕೆಯಲ್ಲಿ ರೊ.ಎಚ್.ಎಸ್.ವೀರೇಶ್, ರೋಟರಿ ಮಿಡ್‌ಟೌನ್ ಅಧ್ಯಕ್ಷ ಕೆ.ಎಲ್.ರಾಕೇಶ್ ಬಾಬು, ಕಾರ್ಯದರ್ಶಿ ಭಾಸ್ಕರ್ ಸೈನಿಕ್ ಉಪಸ್ಥಿತರಿದ್ದರು.

ಬಂಡೀಪುರ, ನಾಗರಹೊಳೆಯಲ್ಲಿ ಸಫಾರಿ ಪುನರಾರಂಭಕ್ಕೆ ಮನವಿ

ಮೈಸೂರು, ನ.19(ಎಸ್‌ಪಿಎನ್)- ದಕ್ಷಿಣ ಭಾರತದ ಪ್ರಮುಖ ಅರಣ್ಯ ಹಾಗೂ ಹುಲಿ ಸಂರಕ್ಷಿತ ಪ್ರದೇಶಗಳೆಂದರೆ ಬಂಡೀಪುರ, ನಾಗರಹೊಳೆ. ದೇಶ-ವಿದೇಶಗಳಿಂದ ಜನರು ಈ ಅರಣ್ಯ ನೋಡಲೆಂದು, ಇಲ್ಲಿ ಸಫಾರಿ ಅನುಭವಿಸಲೆಂದು ಬರುತ್ತಾರೆ. ಆದರೆ ಈಗ ಇಲ್ಲಿ ಸಫಾರಿ ಸ್ಥಗಿತಗೊಂಡಿರುವುದು ಪ್ರವಾಸಿಗರಿಗೆ ಮಾತ್ರವಲ್ಲ; ಪ್ರವಾಸೋದ್ಯಮಕ್ಕೂ ಬಾರೀ ನಷ್ಟವನ್ನುಂಟು ಮಾಡಿದೆ ಎಂದು ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಬೇಸರ ವ್ಯಕ್ತಪಡಿಸಿದ್ದಾರೆ.



ಬಿ.ಎಸ್.ಪ್ರಶಾಂತ್

ಮೈಸೂರಿಗೆ ಬರುವ ಪ್ರವಾಸಿಗರು ಮುಖ್ಯವಾಗಿ ಭೇಟಿ ನೀಡುವುದು ಬಂಡೀಪುರ ಹಾಗೂ ನಾಗರಹೊಳೆ. ನಮ್ಮ ನಾಡಿನ ಭವ್ಯ ಅರಣ್ಯ ಸಂಪತ್ತಿನ ಪರಿಚಯದ ಜೊತೆಗೆ ನಮ್ಮ ಆರ್ಥಿಕತೆಯೂ ಪ್ರವಾಸೋದ್ಯಮದ ಮೂಲಕ ಉತ್ತಮಗೊಳ್ಳುತ್ತದೆ. ಸಫಾರಿಗೆಂದು ಕೆಲಸ ಮಾಡುವ ಸಾವಿರಾರು ಜನರ ಕುಟುಂಬಗಳು ಇದರ ಮೇಲೆ ಅವಲಂಬಿತವಾಗಿವೆ. ಸಫಾರಿ ಇಲ್ಲದಿದ್ದರೆ ಅವರೆಲ್ಲರ ಕುಟುಂಬಗಳಿಗೂ ದಿಕ್ಕು ಇಲ್ಲದಂತಾಗುತ್ತದೆ. ಈ ಭಾಗದಲ್ಲಿರುವ ಹೋಟೆಲ್‌ಗಳೂ ಸಹ ಪ್ರವಾಸಿ ಆಕರ್ಷಣೆಯೇ ಆಗಿವೆ ಎಂದಿದ್ದಾರೆ. ಇನ್ನು ಕೆಲ ಹೋಟೆಲ್ ಮಾಲೀಕರು ಇಲ್ಲಿನ ಪ್ರವಾಸೋದ್ಯಮವನ್ನೇ ನಂಬಿ ಬ್ಯಾಂಕ್‌ಗಳಲ್ಲಿ ಕೋಟ್ಯಾಂತರ ರೂಪಾಯಿ ಸಾಲ ಪಡೆದು ರೆಸಾರ್ಟ್‌ಗಳನ್ನು ನಡೆಸುತ್ತಿದ್ದಾರೆ. ಈಗಾಗಲೇ ಬುಕ್ ಆಗಿದ್ದ ರೂಂಗಳೂ ಕ್ಯಾನ್ಸಲ್ ಆಗುತ್ತಿದ್ದು, ಹೋಟೆಲ್ ಹಾಗೂ ರೆಸಾರ್ಟ್ ಮಾಲೀಕರು ಪರದಾಡುವಂತಾಗಿದೆ. ಈ ಹೋಟೆಲ್‌ಗಳಿಗೆ, ರೆಸಾರ್ಟ್‌ಗಳಿಗೆ ಜನರನ್ನು ಕರೆದುಕೊಂಡು ಬರುವ ಟ್ರಾವೆಲ್ ಏಜೆಂಟ್‌ಗಳು ಹಾಗೂ ವಾಹನ ಚಾಲಕರಿಗೂ ದೊಡ್ಡ ಹೊಡೆತ ಬಿದ್ದಂತಾಗಿದೆ.ಅಲ್ಲದೆ ಇದನ್ನೇ ನಂಬಿರುವ ಪ್ರವಾಸಿ ಗೈಡ್‌ಗಳಿಗೂ ಸಮಸ್ಯೆಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರವಾಸೋದ್ಯಮವನ್ನೇ ನಂಬಿರುವ ಟ್ರಾವೆಲ್ ಏಜೆಂಟ್‌ಗಳು, ಪ್ರವಾಸಿ ವಾಹನ ಚಾಲಕರು, ಹೋಟೆಲ್ ಮಾಲೀಕರು, ಪ್ರವಾಸಿ ಗೈಡ್‌ಗಳೆಲ್ಲರೂ ನಿಯಮದ ಪ್ರಕಾರ ಅಗತ್ಯವಿರುವ ಪರವಾನಿಗೆ ಪಡೆದು ತಮ್ಮ ಉದ್ಯಮ ನಡೆಸುತ್ತಿದ್ದಾರೆ. ಸರ್ಕಾರ ಏಕಾಏಕಿ ಸಫಾರಿ ಸ್ಥಗಿತಗೊಳಿಸಿರುವ ಕಾರಣ ಎಲ್ಲಾ ವ್ಯವಹಾರದ ಮೇಲೂ ಆರ್ಥಿಕ ಹೊಡೆತ ಬೀಳುತ್ತಿದೆ. ಈವರೆಗೂ ಸರ್ಕಾರ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಸಫಾರಿ ನಡೆಸಲಾಗುತ್ತಿದ್ದು, ಯಾವುದೇ ದುರ್ಘಟನೆ ಸಫಾರಿ ವೇಳೆ ನಡೆದಿಲ್ಲ ಎಂದು ಸರ್ಕಾರದ ನಡೆ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಉದ್ಯಮಕ್ಕೆ ಬರುವ ಮೊದಲು ನಾವೂ ಕೂಡ ರೈತರ ಮಕ್ಕಳು. ನಾವು ಇಂದಿಗೂ, ಎಂದೆಂದಿಗೂ ರೈತರ ಪರವಾಗಿ ಇದ್ದೇವೆ. ಆದ್ದರಿಂದ ಸರ್ಕಾರ ರೈತರಿಗೆ ಅನುಕೂಲ ಮಾಡಿಕೊಡಬೇಕಿದ್ದರೆ ಹೊಸ ಎಸ್‌ಒಪಿ ರಚನೆ ಮಾಡಿ ಅನುಕೂಲ ಮಾಡಿಕೊಡಲಿ. ಇದಕ್ಕೆ ಉದ್ಯಮವೂ ಸಹಕಾರಿಯಾಗಿರುತ್ತದೆ. ಹಲವು ವರ್ಷಗಳಿಂದ ನಡೆದುಕೊಂಡು ಬಂದಿರುವ ಸಫಾರಿಯನ್ನು ಸರ್ಕಾರ ಮುಂದುವರೆಸುವ ಕೆಲಸ ಮಾಡಲಿ. ಈ ನಿಟ್ಟಿನಲ್ಲಿ ಅರಣ್ಯ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ವಿಜಯನಗರ 3ನೇ ಹಂತದ ಸ್ವಿಗ್ಗಿ ಘಟಕದ ಮುಂದೆ ನಿವಾಸಿಗಳ ಪ್ರತಿಭಟನೆ



ಜನವಸತಿ ಪ್ರದೇಶದಲ್ಲಿರುವ 'ಸ್ವಿಗ್ಗಿ ಘಟಕ'ವನ್ನು ಕೈಗಾರಿಕಾ ಪ್ರದೇಶಕ್ಕೆ ಸ್ಥಳಾಂತರಿಸುವಂತೆ ಒತ್ತಾಯಿಸಿ ವಿಜಯನಗರ 3ನೇ ಹಂತದ ನಿವಾಸಿಗಳು ಮೌನ ಪ್ರತಿಭಟನೆ ನಡೆಸಿದರು.

ಮೈಸೂರು, ನ.19 (ಎಸ್‌ಪಿಎನ್)- ಜನವಸತಿ ಪ್ರದೇಶದಲ್ಲಿ ತಲೆಯೆತ್ತಿರುವ 'ಸ್ವಿಗ್ಗಿ ಘಟಕ'ವನ್ನು ಕೈಗಾರಿಕಾ ಪ್ರದೇಶಕ್ಕೆ ಸ್ಥಳಾಂತರಿಸುವಂತೆ ಒತ್ತಾಯಿಸಿ ವಿಜಯನಗರ 3ನೇ ಹಂತದ 'ಸಿ' ಮತ್ತು 'ಇ' ಬ್ಲಾಕ್‌ನ ನಿವಾಸಿಗಳು ಘಟಕದ ಮುಂಭಾಗ ಬುಧವಾರ ಮೌನ ಪ್ರತಿಭಟನೆ ನಡೆಸಿದರು.

ವಿಜಯನಗರ 3ನೇ ಹಂತದ 'ಸಿ' ಮತ್ತು 'ಇ' ಬ್ಲಾಕ್ ನಿವಾಸಿ, ಸಾಮಾಜಿಕ ಹೋರಾಟಗಾರ ಕಿರಣ್ ನೇತೃತ್ವದಲ್ಲಿ ಸ್ವಿಗ್ಗಿ ಘಟಕದ ಮುಂಭಾಗ ಮೌನ ಪ್ರತಿಭಟನೆ ನಡೆಸಿದರು. ಬಳಿಕ ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ನ.14ರಂದು ಇಲ್ಲಿನ ಸಮಸ್ಯೆ ಕುರಿತು ಪಾಲಿಕೆ ವಲಯ ಕಚೇರಿ 3ರ ಅಧಿಕಾರಿಗಳಿಗೆ ಲಿಖಿತ ರೂಪದಲ್ಲಿ ದೂರು ಸಲ್ಲಿಸಿ, ನಿಯಮ ಬಾಹಿರವಾಗಿ ಗೃಹ ನಿರ್ಮಾಣಕ್ಕೆ ಮೀಸಲಾಗಿರುವ ನಿವೇಶನ(ನಿ.ಸಂ:814, 815(50*80)ದಲ್ಲಿ ಉದ್ಯಮ ನಡೆಸುತ್ತಿರುವುದು ನಿಯಮ ಬಾಹಿರ ಎಂದು ಆರೋಪಿಸಿದರು.

ಈ ನಿವೇಶನದಲ್ಲಿ ಸ್ವಿಗ್ಗಿ ಘಟಕ ಸ್ಥಾಪಿಸಿರುವುದರಿಂದ ದಿನ ಪೂರ್ತಿ ವಾಹನಗಳ ಓಡಾಟ, ಜನರೇಟರ್ ಶಬ್ಧ, ರಾತ್ರಿ ಪಾಳಿಯ ನೌಕರರು ಕಿರುಚುವುದು, ಅಸಭ್ಯ ನಡೆ, ಅವಾಚ್ಯ ಶಬ್ದ ಪ್ರಯೋಗ, ವಾಹನಗಳ ಶಬ್ಧ, ಇದರಿಂದಾಗಿ ಘಟಕದ ಸುತ್ತಮುತ್ತ ವಾಸ ಮಾಡುವ ನಿವಾಸಿಗಳಿಗೆ ರಾತ್ರಿ ವೇಳೆ ದಿನನಿತ್ಯ ಜಾಗರಣೆ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ, ಘಟಕದ ಸುತ್ತಮುತ್ತಲಿನ ಚರಂಡಿ, ಫುಟ್‌ಪಾತ್ ಅತಿಕ್ರಮಣವಾಗಿದೆ ಎಂದು ಆರೋಪಿಸಿದರು.

ಈ ಘಟಕದಲ್ಲಿ ಕೆಲಸ ಮಾಡುವ ನೂರಾರು ನೌಕರರ ವಾಹನಗಳು ರಸ್ತೆಬದಿ ಪಾರ್ಕ್ ಮಾಡುತ್ತಿದ್ದು, ಇದರಿಂದ ಈ ಮಾರ್ಗದಲ್ಲಿ ಓಡಾಡುವ ಪಾದಚಾರಿಗಳಿಗೆ ನಿತ್ಯ ಕಿರಿಕಿರಿಯಾಗುತ್ತಿದೆ. ವಾಣಿಜ್ಯ ಉದ್ಯಮ ಸ್ಥಾಪಿಸುವ ಜಾಗವಲ್ಲದಿದ್ದರೂ ಸ್ವಿಗ್ಗಿ ಕಂಪನಿಯವರು, ಪಾಲಿಕೆ ಮತ್ತು ಸೆಸ್ಕಾಂನಿಂದ ಉದ್ಯಮ ಪರವಾನಿಗೆ ಪಡೆಯದೇ ಬೇರೆ ಚಟುವಟಿಕೆಗಳ ನಿಮಿತ್ತ ಪರವಾನಿಗೆ ಪಡೆದು ಸ್ವಿಗ್ಗಿ ಘಟಕ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.


ಈ ಕೂಡಲೇ ಜಿಲ್ಲಾಡಳಿತ ಮಧ್ಯಪ್ರವೇಶಿಸಿ, ಈ ಘಟಕವನ್ನು ಕೈಗಾರಿಕಾ ಪ್ರದೇಶಕ್ಕೆ ಸ್ಥಳಾಂತರಿಸಿ, ಇಲ್ಲಿನ ನಾಗರಿಕರಿಗೆ ನೆಮ್ಮದಿ ಜೀವನ ನಡೆಸಲು ಅನುವು ಮಾಡಿಕೊಡುವಂತೆ ಮನವಿ ಮಾಡಿದರು.

ಈ ವೇಳೆ ವಿಜಯನಗರ 3ನೇ ಹಂತದ ನಿವಾಸಿಗಳಾದ ಮಂಜುಳಾ, ಕೀರ್ತನ, ಪದ್ಮ, ಉಮಾ, ಕುಸುಮ, ಮೀನಾಕ್ಷಮ್ಮ, ಪ್ರಮೋದ್, ಹನುಮಂತ ಶೆಟ್ಟಿ, ರಘು, ಸಿದ್ಧಾಚಾರ್ಯ, ಗ್ರಾಯತ್ರಿ, ಚನ್ನಾಜಮ್ಮ, ಸುಶೀಲ, ಪ್ರಕಾಶ ಇನ್ನಿತರೆ ನಿವಾಸಿಗಳು ಉಪಸ್ಥಿತರಿದ್ದರು.

ಒಬಿಸಿ ವಿದ್ಯಾರ್ಥಿನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವ

● ಕನ್ನಡ ರಾಜ್ಯೋತ್ಸವ: ದೇವರಾಜ ಅರಸು, ಎಲ್.ಜಿ. ಹಾವನೂರು ಪ್ರಶಸ್ತಿ ಪ್ರದಾನ ● ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾರಂಭ ಉದ್ಘಾಟನೆ

ಮೈಸೂರು, ನ.19(ಎಂಕೆ)- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ನ.21ರಂದು ಬೆಳಗ್ಗೆ 10.30ಕ್ಕೆ ಮೈಸೂರು ಜಿಲ್ಲಾ ಬಿಸಿಎಂ ವಿದ್ಯಾರ್ಥಿ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಸಂಘದ ಪ್ರಥಮ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಕನ್ನಡ ರಾಜ್ಯೋತ್ಸವ ಹಾಗೂ ಡಿ.ದೇವರಾಜ ಅರಸು, ಎಲ್.ಜಿ.ಹಾವನೂರು ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾರಂಭವನ್ನು ಉದ್ಘಾಟಿಸಿ, ಸಂಘದಿಂದ ನೀಡುತ್ತಿರುವ ಡಿ.ದೇವರಾಜು ಅರಸು, ಎಲ್.ಜಿ. ಹಾವನೂರು ಪ್ರಶಸ್ತಿಯನ್ನು ಹಿರಿಯ ವಕೀಲ ಹಾಗೂ ಸಂವಿಧಾನ ತಜ್ಞ ಪ್ರೊ.ರವಿವರ್ಮ ಕುಮಾರ್ ಅವರಿಗೆ ಪ್ರದಾನ ಮಾಡಲಿದ್ದಾರೆ. ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಸಂಘದ ವಿಶೇಷ ಸಂಚಿಕೆಯನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಿಡುಗಡೆ ಮಾಡಲಿದ್ದಾರೆ.

ಸಚಿವರಾದ ಕೆ.ವೆಂಕಟೇಶ್, ಶಿವರಾಜ ಎಸ್.ತಂಗಡಗಿ, ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಹರೀಶ್‌ಗೌಡ, ಸಿ.ಎಸ್.ಅನಿಲ್ ಚಿಕ್ಕಮಾದು, ಡಿ.ರವಿಶಂಕರ್, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಡಾ.ಯತೀಂದ್ರ, ಡಾ.ಕೆ.ಶಿವಕುಮಾರ್, ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಸಂಘದ ಕಾರ್ಯದರ್ಶಿ ಹಾಗೂ ವಕೀಲ ಬಿ.ಪಿ.ರಾಜೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಹಕಾರಿ ಕ್ಷೇತ್ರ, ರೈತರ ನಡುವಿನ ಸಂಬಂಧ ತಾಯಿ ಮಗುವಿನಂತೆ

ಚಿನಕುರಳಿಯ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಬಣ್ಣನೆ

ಚಿನಕುರಳಿ, ನ.19– ಸಹಕಾರಿ ಕ್ಷೇತ್ರ ಹಾಗೂ ರೈತರ ನಡುವಿನ ಸಂಬಂಧ ತಾಯಿ–ಮಗುವಿನ ಸಂಬಂಧ ಇದ್ದಂತೆ. ಹಾಗಾಗಿ ಕ್ಷೇತ್ರದಲ್ಲಿ ಪಾವಿತ್ರ್ಯತೆ ಕಾಪಾಡಬೇಕು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ನಡೆದ 72ನೇ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವಹಿಸಿ, ವಸ್ತು ಪ್ರದರ್ಶನದ ಮಳಿಗೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಾಲು ಉತ್ಪಾದಕರ ಸಹಕಾರ ಸಂಘ, ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಗಳು ಸೇರಿದಂತೆ ಎಲ್ಲಾ ಸಹಕಾರಿ ಕ್ಷೇತ್ರದ ಪ್ರತಿನಿಧಿಗಳು ಸಂಘದಲ್ಲಿ ನಡೆಯುವ ಅವ್ಯವಹಾರಗಳ ಬಗ್ಗೆ ಪ್ರಶ್ನಿಸಿ ತಡೆಗಟ್ಟುವ ಕೆಲಸ ಮಾಡಬೇಕು, ಅಧಿಕಾರಿಗಳು ಸಹ ರಾಜಕೀಯ ವ್ಯಕ್ತಿಗಳ ಒತ್ತಡಕ್ಕೆ ಒಳಗಾಗದೆ ಪಾರದರ್ಶಕವಾಗಿ ಕೆಲಸ ಮಾಡುವ ಮೂಲಕ ಸಂಘಗಳನ್ನು ಅಭಿವೃದ್ಧಿಪಡಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ದೇಶದಲ್ಲಿ ಹೈನುಗಾರಿಕೆಯಿಂದಾಗಿ ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ಮಹಿಳೆಯರು ಹೈನೋದ್ಯಮದ ಮೂಲಕ ಆರ್ಥಿಕವಾಗಿ ಸಬಲೀಕರಣಗೊಂಡು ಕುಟುಂಬ ನಿರ್ವಹಣೆ ಮಾಡಲು ಸಹಕಾರಿಯಾಗಿದೆ, ರಾಜ್ಯದಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರಕಾರ ಇದ್ದಾಗ ಅಂದಿನ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು 25 ಸಾವಿರ ಕೋಟಿ ರೈತರ ಸಾಲ ಮನ್ನಾ ಮಾಡಿದರು. ಮಂಡ್ಯ ಜಿಲ್ಲೆಯ ರೈತರಿಗೆ 398 ಕೋಟಿ ಸಾಲ ಮನ್ನಾವಾಗಿದೆ ಎಂದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ರೈತರನ್ನು ಆರ್ಥಿಕವಾಗಿ ಮೇಲೆತ್ತುವ ಉದ್ದೇಶದಿಂದ ಆರಂಭಗೊಂಡ ಸಹಕಾರ ಸಂಘಗಳು ರೈತರ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಬೇಕು, ಅಧಿಕ ಲಾಭಗಳಿಸಿ ಬರುವ ಆದಾಯವನ್ನು ರೈತರಿಗೆ ವಿತರಣೆ ಮಾಡಬೇಕು ಎಂದರು.

ರೈತರು ಸಹ ಸಹಕಾರ ಸಂಘಗಳ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಬೇಕು, ರೈತರು ಖಾಸಗಿ ಬ್ಯಾಂಕ್‌ನಲ್ಲಿ ಠೇವಣಿ ಇಡುವ ಬದಲು ಸಹಕಾರ ಬ್ಯಾಂಕ್‌ಗಳಲ್ಲಿಯೇ ಠೇವಣಿ ಇಡಬೇಕು, ಸಹಕಾರ ಸಂಘಗಳು ರೈತರ ಬೆಳೆಗೆ ಬೆಂಬಲ ಬೆಲೆಕೊಟ್ಟು ಖರೀದಿಸಿ ದಲ್ಲಾಳಿಗಂತೆ ಮಾರಾಟ ಮಾಡಬೇಕು ಆಗ ಸಹಕಾರ ಸಂಘಗಳ ಅಭಿವೃದ್ಧಿಯ ಜತೆಗೆ ರೈತರು ಸಹ ಸಬಲೀಕರಣಗೊಳ್ಳಲಿದ್ದಾರೆ ಎಂದರು.

ಡಿಸಿಸಿ ಬ್ಯಾಂಕ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವನಜಾಕ್ಷಿ ಮಾತನಾಡಿ, ಸಹಕಾರ ತತ್ವವನ್ನು ಪ್ರಚಾರ ಮಾಡಲು, ಸಮಸ್ಯೆ, ಸವಾಲುಗಳ ಬಗ್ಗೆ ಚಿಂತನ ಮಂಥನ ನಡೆಸುವ ಸಲುವಾಗಿ, ಪ್ರತಿವರ್ಷ ಸಹಕಾರ ಸಪ್ತಾಹ ಕಾರ್ಯಕ್ರಮ ನಡೆಸಲಾಗುತ್ತಿದೆ. ಸಹಕಾರ ಸಂಘದಲ್ಲಿ ಸದಸ್ಯರ ಪಾತ್ರ ದೊಡ್ಡದಾಗಿದೆ. ಜಿಲ್ಲೆಯಲ್ಲಿ ಇರುವ , 62 ಡಿಸಿಸಿ ಬ್ಯಾಂಕ್‌ನಿಂದ 1028 ಕೋಟಿ ಕೃಷಿ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ ವಿತರಣೆ ಮಾಡಲಾಗಿದೆ. 238 ಕೋಟಿ ಸಾಲವನ್ನು ಶೂನ್ಯ ಬಡ್ಡಿಯಲ್ಲಿ ಸ್ವಸಹಾಯ ಗುಂಪಿನ ಮಹಿಳಾ ಸದಸ್ಯರಿಗೆ ವಿತರಣೆ ಮಾಡಲಾಗಿದೆ. ಶೇ.4 ಬಡ್ಡಿ ದರದಲ್ಲಿ ಸಾಲ ವಿತರಣೆ ಮಾಡಲಾಗಿದೆ ಎಂದು ಹೇಳಿದರು.

ಇದೇ ವೇಳೆ ಹಿರಿಯ ಸಹಕಾರಿಗಳಾದ ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಗುರುಸ್ವಾಮಿ, ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಟಿಎಪಿಸಿಎಂಎಸ್ ನಿರ್ದೇಶಕ ವಿ.ಎಸ್.ನಿಂಗೇಗೌಡ, ಚಿನಕುರಳಿ ಸೊಸೈಟಿ ಕಾರ್ಯದರ್ಶಿ ಪುಟ್ಟೇಗೌಡರನ್ನು ಅಭಿನಂದಿಸಲಾಯಿತು.



ಹಿರಿಯ ಸಹಕಾರಿಗಳಾದ ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಗುರುಸ್ವಾಮಿ, ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಟಿಎಪಿಸಿಎಂಎಸ್ ನಿರ್ದೇಶಕ ವಿ.ಎಸ್.ನಿಂಗೇಗೌಡ, ಚಿನಕುರಳಿ ಸೊಸೈಟಿ ಕಾರ್ಯದರ್ಶಿ ಪುಟ್ಟೇಗೌಡ ಅವರನ್ನು ಅಭಿನಂದಿಸಲಾಯಿತು.

ಇದಕ್ಕೂ ಮೊದಲು ಸೊಸೈಟಿ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ ಹಾಗೂ ಡೇರಿ ಅಧ್ಯಕ್ಷ, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರು ಧ್ವಜಾರೋಹಣ ನೆರವೇರಿಸಿದರು. ಬಳಿಕ ಮಹಿಳೆಯರ ಪೂರ್ಣಕುಂಭ ಹಾಗೂ ಜೋಡೆತ್ತುಗಳ ಮೆರವಣಿಗೆ ನಡೆಸಿ ಗಮನ ಸೆಳೆದರು. ಮನ್‌ಮುಲ್ ಒಕ್ಕೂಟದಿಂದ ದೊರೆಯುವ ಸೌಲಭ್ಯ ಪಶು ಆಹಾರ ಮತ್ತು ಸಿಹಿ ತಿಂಡಿಗಳ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಸೊಸೈಟಿ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ, ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿರ್ದೇಶಕ ಎಸ್.ಎಲ್.ಮೋಹನ್, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಡಾ.ಕೆಂಪೇಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಎಚ್.ಸಿ.ಪುಟ್ಟಸ್ವಾಮಿಗೌಡ, ಎ.ವಿ.ಚಂದ್ರಮೂರ್ತಿ, ಮನ್‌ಮುಲ್ ವಿಶೇಷಾಧಿಕಾರಿ ಕೆ.ಅನಿತಾ, ಟಿಎಪಿಸಿಎಂಎಸ್ ಅಧ್ಯಕ್ಷ ಎಚ್.ಗಿರೀಶ್, ಉಪಾಧ್ಯಕ್ಷೆ ಪ್ರೇಮ ಪುಟ್ಟೇಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಚಲುವೇಗೌಡ, ಮನ್‌ಮುಲ್ ನೌಕರರ ಯೂನಿಯನ್ ಅಧ್ಯಕ್ಷ ಜಿ.ಕೆ.ಶಿವಕುಮಾರ್, ಶಿವಪ್ಪ, ಮನ್‌ಮುಲ್ ವ್ಯವಸ್ಥಾಪಕ ಡಾ.ಪಿ.ಆರ್.ಮಂಜೇಶ್, ಡಾ.ಅಕಲಪ್ಪರೆಡ್ಡಿ, ಆರ್.ನಿರ್ಮಲ, ಮನ್‌ಮುಲ್ ಉಪ ವ್ಯವಸ್ಥಾಪಕ ಆರ್.ಪ್ರಸಾದ್ ಸೇರಿದಂತೆ ಹಲವರು ಹಾಜರಿದ್ದರು.

ಶ್ರೀರಂಗಪಟ್ಟಣದಲ್ಲಿ 9 ಪುರಾತನ ಕಲ್ಲಿನ ಗುಂಡುಗಳು, ಪ್ರಾಚೀನ ಕಾಲದ ಕುರುಹುಗಳು ಪತ್ತೆ

ಶ್ರೀರಂಗಪಟ್ಟಣ, ನ.19– ಪುರಾಣ ಪ್ರಸಿದ್ಧ ಐತಿಹಾಸಿಕ ಹಾಗೂ ಕೋಟೆಕೊತ್ತಲು ನಾಡೆಂದೇ ಪ್ರಸಿದ್ಧವಾಗಿರುವ ಶ್ರೀರಂಗಪಟ್ಟಣದಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಭೂಮಿ ಅಗೆಯುವಾಗ 9 ಪುರಾತನ ಕಲ್ಲಿನ ಗುಂಡುಗಳು ಸಿಕ್ಕಿದ್ದು, ಇದರ ಜೊತೆಗೆ ಪ್ರಾಚೀನ ಕಾಲದ ಕಟ್ಟಡದ ಕುರುಹುಗಳು ಸಹ ಪತ್ತೆಯಾಗಿವೆ.

ಶ್ರೀರಂಗಪಟ್ಟಣದ ಕೆನರಾ ಬ್ಯಾಂಕ್ ಶಾಖೆಯ ಪಕ್ಕದಲ್ಲಿ, ಎಲ್‌ಐಸಿ ಶಾಖೆ ಕಚೇರಿ ಕಟ್ಟಡ ನಿರ್ಮಾಣಕ್ಕೆ ತಳಪಾಯಕ್ಕಾಗಿ ಭೂಮಿ ಅಗೆಯುವಾಗ ಕಳೆದ ಭಾನುವಾರ 7 ಕಲ್ಲಿನ ಗುಂಡುಗಳು ಪತ್ತೆಯಾಗಿತ್ತು ಇದೀಗ ಅದೇ ಸ್ಥಳದಲ್ಲಿ ಸೋಮವಾರ ಮತ್ತೆ ಎರಡು ಕಲ್ಲಿನ ಗುಂಡುಗಳು ಸಿಕ್ಕಿವೆ.

ಕಟ್ಟಡಕ್ಕೆ ಐದಾರು ಅಡಿ ದೂರದಲ್ಲಿ ನೆಲ ಮಟ್ಟದಿಂದ 5 ಅಡಿಗಳಷ್ಟು ಆಳದಲ್ಲಿ ಗುಂಡುಗಳು ಸಿಕ್ಕಿರುವ ಸ್ಥಳದಲ್ಲಿ ಸುರಕಿ ಗಾರೆ ಮತ್ತು ಮಣ್ಣಿನ ಸುಟ್ಟ ಇಟ್ಟಿಗೆಗಳ ಗೋಡೆಯಂತಹ ರಚನೆ ಕಂಡು ಬಂದಿದೆ. ಕಟ್ಟಡ ನಿರ್ಮಾಣಕ್ಕೆ 15ಕ್ಕೂ ಹೆಚ್ಚು ಗುಂಡಿಗಳನ್ನು ತೆಗೆದಿದ್ದು, ಈ ಪೈಕಿ ಮೂರು ಗುಂಡಿಗಳಲ್ಲಿ ಪ್ರಾಚೀನ ಕಟ್ಟಡದ ಕುರುಹುಗಳು ಕಂಡುಬಂದಿವೆ.

ಕಲ್ಲುಗುಂಡುಗಳು ಹಾಗೂ ಪ್ರಾಚೀನ ಕಟ್ಟಡದ ಕುರುಹುಗಳು ಪತ್ತೆಯಾದ ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಕೇಂದ್ರ ಪುರಾತತ್ವ ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆಯ ಅಧಿಕಾರಿಗಳಾದ ಸುನೀಲ್ ಮತ್ತು ರವಿ ಪರಿಶೀಲನೆ ನಡೆಸಿ, ಅವಶೇಷಗಳ ಫೋಟೋಗಳನ್ನು ತೆಗೆದುಕೊಂಡಿದ್ದಾರೆ.



ಶ್ರೀರಂಗಪಟ್ಟಣದಲ್ಲಿ ಸಿಕ್ಕ ಪುರಾತನ ಗುಂಡುಗಳು ಮತ್ತು ಕುರುಹುಗಳು.

ಸ್ಥಳದಲ್ಲಿ ಪ್ರಾಚೀನ ಅವಶೇಷಗಳು ಮತ್ತೆ ಸಿಕ್ಕಿದರೆ ತಕ್ಷಣ ಇಲಾಖೆಯ ಅಧಿಕಾರಿಗಳಿಗೆ ತಿಳಿಸಬೇಕು. ಐತಿಹಾಸಿಕ ಕುರುಹುಗಳನ್ನು ನಾಶಪಡಿಸಬಾರದು ಎಂದು ಎಲ್‌ಐಸಿ ಅಧಿಕಾರಿಗಳಿಗೆ ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆಯ ಸುನೀಲ್ ತಿಳಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಅವರು, ಎಲ್‌ಐಸಿ ಕಚೇರಿ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಗುಂಡಿ ತೆಗೆಯುವ ಸಂದರ್ಭದಲ್ಲಿ, ಎರಡು ದಿನಗಳಲ್ಲಿ ಸುಮಾರು 30ರಿಂದ 40 ಕೆ.ಜಿ ತೂಕದ ಒಂದೇ ಅಳತೆಯ 10 ಕಲ್ಲಿನ ಗುಂಡುಗಳು ಸಿಕ್ಕಿವೆ. ಅವುಗಳನ್ನು ಪಟ್ಟಣದ ಶ್ರೀ ಚಾಮರಾಜೇಂದ್ರ ಸ್ಮಾರಕ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಲಾಗುವುದು. ಪಟ್ಟಣದಲ್ಲಿ ಭೂಮಿ ಅಗೆಯುವ ಮಾಹಿತಿ ಸಿಕ್ಕಿದ ಕೂಡಲೇ ಸ್ಥಳಕ್ಕೆ ಭೇಟಿ ನೀಡುವಂತೆ ಸ್ಥಳೀಯ ಸಿಬ್ಬಂದಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಶ್ರೀರಂಗಪಟ್ಟಣವನ್ನು ಹೈದರ್ ಆಲಿ, ಟಿಪ್ಪು ಸುಲ್ತಾನ್ ಸೇರಿದಂತೆ ಮೈಸೂರು ರಾಜಮನೆತನ ಆಳ್ವಿಕೆ ನಡೆಸಿವೆ. ಪ್ರತಿ ನೆಲದಿಂಚು ತನ್ನ ಗತವೈಭವ ಸಾರುತ್ತದೆ. ಎಲ್ಲೆಡೆ ಒಂದಲ್ಲಾ ಒಂದು ಆಳ್ವಿಕೆಯ ಕುರುಹುಗಳು. ಹೆಜ್ಜೆ ಇಟ್ಟಲ್ಲೆಲ್ಲ ಸ್ಮಾರಕಗಳು. ಬ್ರಿಟಿಷರ ವಿರುದ್ಧದ ಕದನಗಳ ಪಳೆಯುಳಿಕೆ. ಅಂದಿನ ಮೈಸೂರು ಸಾಮ್ರಾಜ್ಯದ ರಾಜಧಾನಿಯಾಗಿ ಬ್ರಿಟಿಷ್ ಆಕ್ರಮಣ ತಡೆಗಟ್ಟಲು ಊರಿನ ಸುತ್ತಲೂ ದ್ವೀಪದ ಮಾದರಿಯಲ್ಲಿ ಕೋಟೆ ಕಟ್ಟಲಾಗಿದೆ. ಸ್ಮಾರಕಗಳು, ದೇವಾಲಯ, ಮಸೀದಿ, ಬಂಧಿಖಾನೆ, ಟಿಪ್ಪು ಮಡಿದ ಸ್ಥಳ ಹೀಗೆ ಹಲವಾರು ಇತಿಹಾಸ ಸಾರುವ ನೆಲೆಗಳಿವೆ. ಶ್ರೀರಂಗಪಟ್ಟಣ ಉದ್ದಗಲಕ್ಕೂ ಬ್ರಿಟಿಷರ ಸಮಾಧಿಗಳನ್ನೂ ಕಾಣಬಹುದು. ಇತ್ತೀಚಿಗೆ ನೆಲ ಮಾಳಿಗೆ ಪತ್ತೆಯಾಗಿತ್ತು.

ಸರ್ಕಾರಿ ಶಾಲೆಗಳು ಮುಚ್ಚಿದರೆ ಮಕ್ಕಳು ಕೂಲಿಗೆ

ಕೆ.ಆರ್.ಪೇಟೆ, ನ.19– 25 ಮಕ್ಕಳಿಗಿಂತ ಕಡಿಮೆ ಇರುವ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚುವ ನಿರ್ಧಾರದಿಂದ ರಾಜ್ಯ ಸರ್ಕಾರವು ಹಿಂದೆ ಸರಿಯಬೇಕು. ಸರ್ಕಾರ ಶಾಲೆಗಳನ್ನು ಮುಚ್ಚುವ ನಿರ್ಧಾರ ಮಾಡಿದರೆ ಸುಮಾರು 7 ಸಾವಿರ ಸರ್ಕಾರಿ ಶಾಲೆಗಳು ಬಂದ್ ಆಗಲಿದ್ದು. ಗ್ರಾಮೀಣ ಭಾಗದ ಬಡವರು ಮತ್ತು ಮಧ್ಯಮ ವರ್ಗದವರು ಮಕ್ಕಳನ್ನು ಶಾಲೆಗೆ ಕಳಿಸದೇ ಕೂಲಿಗೆ ಕಳಿಸುವ ಸಾಧ್ಯತೆ ಇದೆ. ಇದರಿಂದ ಮತ್ತೆ ಗ್ರಾಮೀಣ ಜನರಲ್ಲಿ ಸಾಕ್ಷರತೆ ಇಲ್ಲದೆ, ಅನಕ್ಷರತೆ ಉಂಟಾಗುವ ಅಪಾಯ ಎದುರಾಗಲಿದೆ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಸೋಮೇನಹಳ್ಳಿ, ದೊಡ್ಡಕ್ಯಾತನಹಳ್ಳಿ, ನ್ಯಾಯಸಿಂಗನಹಳ್ಳಿ, ನಾರಾಯಣಪುರಕೊಪ್ಪಲು, ಮೋದೂರು, ಕೊರಟೀಕೆರೆ, ಅಣ್ಣೇಚಾಕನಹಳ್ಳಿ, ಮುದ್ದಾಪುರ, ಹೊಸಮಾವಿನಕೆರೆ, ಗುಡುಗನಹಳ್ಳಿ, ಸೋಮನಾಥಪುರ, ಬೆಳತೂರು ಗ್ರಾಮಗಳಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ತಲಾ 10 ಲಕ್ಷ ರೂಗಳಂತೆ ಸುಮಾರು 1 ಕೋಟಿ ರೂ.ಗಳ ವೆಚ್ಚದಲ್ಲಿ ಗ್ರಾಮದ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ರಾಜ್ಯ ಸರ್ಕಾರವು ಕರ್ನಾಟಕ ಪಬ್ಲಿಕ್ ಶಾಲೆಯನ್ನು ಆರಂಭಿಸುವ ನೆಪದಲ್ಲಿ ಹಳ್ಳಿಗಳಲ್ಲಿರುವ ಸರ್ಕಾರಿ ಶಾಲೆಗಳನ್ನು ಬಂದ್ ಮಾಡಲು ಮುಂದಾಗಿರುವುದು ಖಂಡನೀಯ. ಕನಿಷ್ಠ 1 ಮಗು ಇದ್ದರೂ ಸಹ ಶಾಲೆಯನ್ನು ಉಳಿಸಿಕೊಡಬೇಕು. ಗ್ರಾಮದಲ್ಲಿ ಶಾಲೆಯೇ ಇಲ್ಲದಿದ್ದರೆ ಬಡವರು ಮತ್ತು ಮಧ್ಯಮ ವರ್ಗದ ಪೋಷಕರು ಬೇರೆ ಗ್ರಾಮಕ್ಕೆ ತಮ್ಮ ಮಕ್ಕಳನ್ನು ಕಳಿಸಲು ಇಚ್ಛಿಸುವುದಿಲ್ಲ. ಆಗ ಬಡವರ ಮಕ್ಕಳಿಗೆ ಶಿಕ್ಷಣ ಇಲ್ಲದಂತಾಗುತ್ತದೆ. ಮತ್ತೆ ದೇಶದಲ್ಲಿ ಅನಕ್ಷರತೆ ಹೆಚ್ಚಾಗಲಿದೆ ಎಂದರು.



ಶಾಸಕ ಹೆಚ್.ಟಿ.ಮಂಜು ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದರು.

ರಾಜ್ಯ ಸರ್ಕಾರವು ನನ್ನ ಕೃಷ್ಣರಾಜಪೇಟೆ ವಿಧಾನಸಭಾ ಕ್ಷೇತ್ರದ ಯಾವುದೇ ಶಾಲೆಯನ್ನು ಬಂದ್ ಮಾಡಲು ಮುಂದಾಗಬಾರದು. 25 ಮಕ್ಕಳಿಗಿಂತ ಕಡಿಮೆ ಇರುವ ಶಾಲೆಗಳನ್ನು ಸಮೀಪದ ಶಾಲೆಗಳಿಗೆ ಮ್ಯಾಪಿಂಗ್ ಮಾಡಿ ಮುಚ್ಚಿದ ಆ ಗ್ರಾಮಗಳ ಮಕ್ಕಳನ್ನು ಕರೆತರಲು ಬಸ್ ವ್ಯವಸ್ಥೆ ಮಾಡುವ ಯೋಜನೆ ಜಾರಿ ಮಾಡುತ್ತಿದೆ ಎಂಬ ಮಾಹಿತಿ ಕೇಳಿ ಬರುತ್ತಿದೆ. ಇದು ಸರ್ಕಾರಿ ಶಾಲೆಗಳನ್ನು ಶಾಶ್ವತವಾಗಿ ಬಂದ್ ಮಾಡಿ ಪರೋಕ್ಷವಾಗಿ ಖಾಸಗಿ ಶಾಲೆಗಳನ್ನು ಬೆಳೆಸುವ ಕಾರ್ಯಕ್ರಮವಾಗಲಿದೆ. ಹಾಗಾಗಿ ಸರ್ಕಾರವು ಸರ್ಕಾರಿ ಶಾಲೆಗಳನ್ನು ಮ್ಯಾಪಿಂಗ್ ನೆಪದಲ್ಲಿ ಮುಚ್ಚಬಾರದು ಎಂದು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡಿದರು.

ಗ್ಯಾರಂಟಿ ಯೋಜನೆಯಿಂದ ಅಭಿವೃದ್ಧಿಗೆ ಹಿನ್ನಡೆ: ರಾಜ್ಯ ಸರ್ಕಾರವು ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಗೊಳಿಸಿದ್ದು, ಇದರಿಂದ ಮೂಲಭೂತ ಸೌಲಭ್ಯಗಳಿಗೆ ಅನುದಾನ ಕೊರತೆ ಎದುರಾಗಿದೆ. ಇದರಿಂದ ರಾಜ್ಯವು ಅಭಿವೃದ್ಧಿಯಲ್ಲಿ 10ವರ್ಷ ಹಿಂದಕ್ಕೆ ಹೋದಂತೆ ಆಗಿದೆ ಎಂದರು.

ಮೂರನೇ ಪುಟದಿಂದ

7.11 ಕೋಟಿ ದರೋಡೆ

ಕಾರಿನಲ್ಲಿ ಬಂದು ಕೃತ್ಯ ಎಸಗಿದ್ದಾರೆ. ಆದರೆ ಈ ಸಂಖ್ಯೆಯು ಮಾರುತಿ ಸುಜುಕಿ ಕಾರಿನದು ಎಂದು ತಿಳಿದುಬಂದಿದೆ. ಇದರಿಂದ ಈ ಗ್ಯಾಂಗ್ ಪಕ್ಕಾ ಪ್ಲ್ಯಾನ್ ಮಾಡಿಯೇ ಈ ಕೃತ್ಯ ಎಸಗಿದೆ ಎನ್ನುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಹಣ ದರೋಡೆ ಮಾಡಿ ಗ್ಯಾಂಗ್, ಹೊಸಕೋಟೆ ಕಡೆ ತೆರಳಿರುವ ಮಾಹಿತಿ ಸಿಕ್ಕಿದೆ. ಡೇರಿ ಸರ್ಕಲ್, ಕೋರಮಂಗಲ, ಸೋನಿ ವರ್ಲ್ಡ್ ಜಂಕ್ಷನ್, ದೊಮ್ಮಲೂರು, ಮಾರತ್ತಹಳ್ಳಿ, ವೈಟ್ ಫೀಲ್ಡ್ ಮಾರ್ಗವಾಗಿ ಹೊಸಕೋಟೆ ಕಡೆ ತೆರಳಿರುವ ಮಾಹಿತಿ ಲಭ್ಯವಾಗಿದ್ದು, ಪೊಲೀಸರು ದರೋಡೆಕೋರರ ಗ್ಯಾಂಗ್ ಬೆನ್ನುಬಿದ್ದಿದ್ದಾರೆ.

ಇಷ್ಟೊಂದು ದೊಡ್ಡ ಮಟ್ಟದ ದರೋಡೆಯಾಗಿರುವ ಬೆನ್ನಲ್ಲೇ ಬೆಂಗಳೂರು ನಗರ ಪೊಲೀಸ್ ಆಯುಕ್ತರು ನಗರದಲ್ಲಿ ಹೈಅಲರ್ಟ್ ಆಗಿರುವಂತೆ ಸೂಚಿಸಿದ್ದಾರೆ. ಅಲ್ಲದೇ ಆರೋಪಿಗಳು ಬೆಂಗಳೂರು ಬಿಟ್ಟು ಹೋಗದಂತೆ ನಗರದ ಗಡಿಪ್ರದೇಶದಲ್ಲಿ ಬ್ಯಾರಿಕೇಡ್ ಹಾಕಿ ವಾಹನ ಪರಿಶೀಲನೆ ಮಾಡುವಂತೆ ಸಂದೇಶ ರವಾನಿಸಿದ್ದಾರೆ.

ವಾಹನದಲ್ಲಿದ್ದ ಎಲ್ಲಾ ಸಿಬ್ಬಂದಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಅಶೋಕ ಪಿಲ್ಲರ್ ಬಳಿ ವಾಹನವನ್ನು ಅಡ್ಡಗಟ್ಟಿ ಎಲ್ಲಾ ಸಿಬ್ಬಂದಿಯನ್ನು ಇಳಿಸಿ ಚಾಲಕನೊಬ್ಬನನ್ನು ವಾಹನದಲ್ಲಿ ಕರೆದುಕೊಂಡು ಹೋಗಿ ಡೈರಿ ವೃತ್ತದ ಫ್ಲೈಓವರ್ ಮೇಲೆ ನಿಲ್ಲಿಸಿಕೊಂಡು ಹಣವನ್ನು ಬೇರೆ ವಾಹನಕ್ಕೆ ವರ್ಗಾಯಿಸಿಕೊಂಡು ದರೋಡೆಕೋರರು ಪರಾರಿಯಾಗಿದ್ದಾರೆ ಎಂದು ಸಿಎಂಎಸ್ ಏಜೆನ್ಸಿ ಅಧಿಕಾರಿ ತಿಳಿಸಿದ್ದಾರೆ.

ವಾಹನದ ಬಳಿಯೇ ಇದ್ದ ಸಿಬ್ಬಂದಿ: ರಾಬರಿ ಆದ ವಾಹನ ಎಲ್ಲಿಗೆ ಹೋಯಿತು ಎಂಬ ಮಾಹಿತಿ ಪೊಲೀಸರಿಗೆ ಇರಲಿಲ್ಲ. ಆದರೂ ಎಲ್ಲಾ ಠಾಣಾ ವ್ಯಾಪ್ತಿಯಲ್ಲೂ ಹುಡುಕಾಟ ಮಾಡಿದ್ದಾರೆ. ಕೊನೆಗೆ 2.15ರ ಸುಮಾರಿಗೆ ಡೈರಿ ಸರ್ಕಲ್ ಬಳಿ ಎಟಿಎಂ ವಾಹನ ಪತ್ತೆಯಾಗಿತ್ತು. ಈ ವೇಳೆ ವಾಹನದ ಬಳಿಯೇ ನಾಲ್ವರು ಸಿಎಂಎಸ್ ಸಿಬ್ಬಂದಿ ಇದ್ದರು. ಪೊಲೀಸರು ಕೇಳಿದ ವೇಳೆಯೇ ದರೋಡೆ ಬಗ್ಗೆ ಏಜೆನ್ಸಿ ಸಿಬ್ಬಂದಿ ಬಾಯ್ಬಿಟ್ಟಿದ್ದಾರೆ. ಹೀಗಾಗಿ ಸಿಎಂಎಸ್ ಏಜೆನ್ಸಿಯ ನಾಲ್ವರ ಮೇಲೆ ಪೊಲೀಸರಿಗೆ ಅನುಮಾನ ಮೂಡಿದ್ದು, ಸದ್ಯ ನಾಲ್ವರನ್ನು ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ವಿಚಾರಣೆ ನಡೆಸಲಾಗಿದೆ. ಬಂದೂಕು ಇದ್ದರು ಯಾಕೆ ಸಿಬ್ಬಂದಿ ಫೈರ್ ಮಾಡಿಲ್ಲ ಎಂಬುದರ ಬಗ್ಗೆ ಇಬ್ಬರು ಸೆಕ್ಯೂರಿಟಿ ಗಾರ್ಡ್‌ಗಳ ವಿಚಾರಣೆ ನಡೆಸಲಾಗಿದೆ. ಜೊತೆಗೆ ಸಿಎಂಎಸ್ ಏಜೆನ್ಸಿಯ ವಾಹನ ಚಾಲಕನನ್ನೂ ಘಟನಾ ಸ್ಥಳಕ್ಕೆ ಕರೆತಂದು ಪೊಲೀಸರು ವಿಚಾರಣೆ ನಡೆಸಿದ್ದಾರೆ.

ಶ್ರಮಕ್ಕೆ ಫಲ ಸಿಕ್ಕೇ ಸಿಗುತ್ತೆ

ಅವರೇ ಆದೇಶಿಸಿದ್ದರು. ನನ್ನ ಮತ್ತು ಆ ಕುಟುಂಬದ ನಡುವೆ ಇರುವುದು ಇಂತಹ ಬಾಂಧವ್ಯ ಎಂದರು. ಇದಕ್ಕೂ ಮುನ್ನ ವಿಧಾನಸೌಧದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರ ಹಸ್ತಾಂತರ ವಿಷಯದಲ್ಲಿ ಖುಷಿಪಡುವವರು, ಅಳುವವರು, ದುಃಖ ಪಡುವವರು ಅವರ ಇಚ್ಛೆಯಂತೆ ನಡೆದುಕೊಳ್ಳಲಿ ಎಂದು ಮಾರ್ಮಿಕವಾಗಿ ನುಡಿದರು. ದೆಹಲಿಯಲ್ಲಿ ಪಕ್ಷದ ಅಧಿನಾಯಕರ ಭೇಟಿ ಸಾಧ್ಯವಾಗಲಿಲ್ಲ ಎಂಬ ಸುದ್ದಿಗಾರರ ಪ್ರಶ್ನೆಗೆ ಮಾಧ್ಯಮಗಳಿಗೆ ಒಳ್ಳೆಯ ಆಹಾರ ಸಿಗುತ್ತಿದೆ. ನೋಡ್ರೀ, ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತ. ನನ್ನ ಶ್ರಮಕ್ಕೆ ಪ್ರತಿಫಲ ಸಿಕ್ಕೇ ಸಿಗುತ್ತದೆ. ಒಳ ವಿಚಾರಗಳನ್ನು ಅರಿಯದೆ, ಮನ ಬಂದಂತೆ ಬರೆಯುವುದು ಎಷ್ಟರ ಮಟ್ಟಿಗೆ ಸರಿ. ನಿಮಗೆ ಇದರಿಂದ ಸಂತೋಷವಾಗುತ್ತದೆ. ಬರೆದಿದ್ದನ್ನು ಓದಿದ ಕೆಲವರಿಗೆ ಆನಂದವೂ ಆಗಬಹುದು, ದುಃಖವೂ ಆಗಬಹುದು, ಯಾರು ಯಾವ ರೀತಿ ಅನುಭವ ಪಡೆದುಕೊಳ್ಳುತ್ತಾರೋ ಪಡೆದುಕೊಳ್ಳಲಿ. ಹೊಗಳುವುದೂ, ತೆಗಳುವುದೂ ನನ್ನ ಜೀವನದಲ್ಲಿ ನಡೆದುಕೊಂಡು ಬಂದಿದೆ. ಇದಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ. ಪಕ್ಷ ಸಂಘಟನೆಯಲ್ಲಿ ಹೇಗಿದ್ದೇನೆಯೋ ಹಾಗೆಯೇ ಮುಂದುವರೆದುಕೊಂಡು ಹೋಗುತ್ತೇನೆ ಎಂದರು.

ಸಾಲು ಮರದ ತಿಮ್ಮಕ್ಕ ಹೆಸರಿನಲ್ಲಿ ಪ್ರಶಸ್ತಿ

ಸುವರ್ಣ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ನಿಧನರಾದ ಅವರು ಬಹಳಷ್ಟು ಮರಗಿಡಗಳನ್ನು ತಮ್ಮ ಮಕ್ಕಳಂತೆ ಬೆಳೆಸುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದರು. ಪ್ರತಿಯೊಬ್ಬರೂ ಸಾಲಮರದ ತಿಮ್ಮಕ್ಕನವರಂತೆ ಆಗಬೇಕು ಎನ್ನುವ ಆಶಯ ನಮ್ಮದು ಎಂದರು. ಬೆಂಗಳೂರು ಗಾರ್ಬೇಜ್‌ನಗರ ಎಂಬ ಟೀಕೆಗೆ ನಗರ ಗುರಿಯಾಗುತ್ತಿದ್ದು, ಬೆಂಗಳೂರನ್ನು ಗಾರ್ಬೇಜ್ ನಗರವಾಗಿಸುವುದು ನಮ್ಮ ಉದ್ದೇಶವಲ್ಲ. ಪ್ಲಾಸ್ಟಿಕ್ ಮತ್ತು ಕಸ ಮುಕ್ತ ನಗರವಾಗಿಸಬೇಕು ಎನ್ನುವುದು ಸರ್ಕಾರದ ಉದ್ದೇಶ. ಜನರೂ ಹಸಿ ಮತ್ತು ಒಣ ತ್ಯಾಜ್ಯವನ್ನು ಬೇರ್ಪಡಿಸಬೇಕು. ಸಾರ್ವಜನಿಕರು ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳಬೇಕು. ಭೂಮಿಯ ಮೇಲಿನ ಜೀವಸಂಕುಲಕ್ಕೆ ಉತ್ತಮ ಪರಿಸರದಲ್ಲಿ ಬದುಕಲು ಅವಶ್ಯಮಾಲಿನ್ಯ ರಹಿತ ಪರಿಸರವನ್ನು ನಿರ್ಮಿಸುವುದು ಅತ್ಯಂತ ಅವಶ್ಯವಾಗಿದೆ ಎಂದರು. ನಾವು ಉಸಿರಾಡುವ ಗಾಳಿ, ನೀರು ಹಾಗೂ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಅಗತ್ಯ. ಕೇಂದ್ರದ ವರದಿ ಪ್ರಕಾರ ದೇಶದ ಹಲವು ನಗರಗಳು ಮಾಲಿನ್ಯದಿಂದ ಕೂಡಿವೆ. ಈ ಪಟ್ಟಿಯಲ್ಲಿ ಬೆಂಗಳೂರು, ದಾವಣಗೆರೆ, ಕಲ್ಬುರ್ಗಿ ನಗರವೂ ಸೇರಿರುವುದು ಆತಂಕಕಾರಿ ವಿಷಯ ಎಂದರು.

ಭಕ್ತ ಸಾಗರ; ಭಯದ ವಾತಾವರಣ



“ಶಬರಿಮಲೆಯಲ್ಲಿ ಭಯದ ವಾತಾವರಣವಿದೆ. ಯಾವ ಸಮಯದಲ್ಲಿ ಏನಾಗುವುದೋ ಎಂಬ ಪರಿಸ್ಥಿತಿ ಇದೆ. ಯಾರೂ ಭಕ್ತರ ಕಾಪಾಡುವವರಿಲ್ಲ. ನೀರು, ಅನ್ನಾಹಾರ ನೀಡುವವರಿಲ್ಲ. ಅವ್ಯವಸ್ಥೆ ತಾಂಡವವಾಡುತ್ತಿದೆ. ನಿತ್ರಾಣಗೊಂಡವರು, ಬಳಲಿದವರಿಗೆ ವೈದ್ಯಕೀಯ ಸೌಲಭ್ಯವಿಲ್ಲ. ಕೇರಳ ಸರ್ಕಾರ ಕೈಕಟ್ಟಿ ಕುಳಿತಿದೆ. ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸದಿದ್ದರೆ ಅನಾಹುತ ಗ್ಯಾರಂಟಿ.



–ಸಿದ್ದೇಗೌಡ, ಚಿತ್ರ ನಿರ್ದೇಶಕ–ನಿರ್ಮಾಪಕ.

ಬ್ಯಾರಿಕೇಡ್ ಹಾಕಿ ವ್ಯವಸ್ಥಿತವಾಗಿ ಸರದಿ ಸಾಲಿನ ವ್ಯವಸ್ಥೆ ಮಾಡಿದ್ದರೂ, ಲಕ್ಷಾಂತರ ಸಂಖ್ಯೆಯಲ್ಲಿ ಹರಿದು ಬಂದ ಮಾಲಾಧಾರಿಗಳು ಸರತಿ ಸಾಲನ್ನು ಬಿಟ್ಟು ಮುನ್ನುಗ್ಗುತ್ತಿರುವುದು ಹಾಗೂ ಬ್ಯಾರಿಕೇಡ್ ಹಾರಿ ಹೋಗುತ್ತಿರುವುದರಿಂದ ಪರಿಸ್ಥಿತಿ ಅಯೋಮಯವಾಗಿದೆ. 18 ಮೆಟ್ಟಿಲಿನಲ್ಲಿ ಭಕ್ತರನ್ನು ನಿಯಂತ್ರಿಸಲು ದೇವಾಲಯದ ಸಿಬ್ಬಂದಿ ಹರಸಾಹಸ ಪಡುತ್ತಿದ್ದು, ದರ್ಶನಕ್ಕೆ ಹೆಚ್ಚು–ಕಡಿಮೆ 15 ಗಂಟೆಗಳ ಕಾಲ ಹಿಡಿಯುತ್ತಿದೆ. ಇದರಿಂದಾಗಿ ಸಾವಿರಾರು ಭಕ್ತರು ಅಯ್ಯಪ್ಪ ಸ್ವಾಮಿ ದರ್ಶನ ಮಾಡುವ ಸಾಹಸಕ್ಕೆ ಹೋಗದೇ ಪಂದಳದಲ್ಲೇ ತುಪ್ಪಾಭಿಷೇಕ ಮಾಡಿ ವಾಪಸ್ಸಾಗುತ್ತಿದ್ದಾರೆ ಎಂದು ಕೇರಳದ ಮಾಧ್ಯಮಗಳು ವರದಿ ಮಾಡಿವೆ.

ನಿಯಂತ್ರಣಕ್ಕೆ ಬಾರದ ಸ್ಥಿತಿ: ದೇವಸ್ಥಾನದ ಆಡಳಿತ ಮಂಡಳಿಯು ನೀಲಕ್ಕಲ್‌ನಲ್ಲಿ 7 ಸ್ಪಾಟ್ ಬುಕ್ಕಿಂಗ್ ಕೇಂದ್ರಗಳನ್ನು ತೆರೆದಿದೆ. ಪಂಪಾದಲ್ಲಿ ಭಕ್ತರ ಸಂಖ್ಯೆಯನ್ನು ಕಡಿಮೆ ಮಾಡಲು ನಿರ್ಧರಿಸಿದೆ. ಆದರೂ ಪರಿಸ್ಥಿತಿ ನಿಯಂತ್ರಣಕ್ಕೆ ಸಿಗುತ್ತಿಲ್ಲ. ಶಬರಿಮಲೈನಲ್ಲಿ ಭಯಪಡುವಂತಹ ರೀತಿಯಲ್ಲಿ ಭಕ್ತರ ಸಾಗರ ಹರಿದು ಬಂದಿದೆ. ನಮಗೆ ಏನೂ ಮಾಡಲು ಆಗುತ್ತಿಲ್ಲ. ಸದ್ಯಕ್ಕೆ ಇಲ್ಲಿಗೆ ಬರುವ ಭಕ್ತರನ್ನು ತಡೆಯಬೇಕಾದ ಅನಿವಾರ್ಯತೆ ಇದೆ ಎಂದು ಆಡಳಿತ ಮಂಡಳಿ ಮುಖ್ಯಸ್ಥರೊಬ್ಬರು ತಿಳಿಸಿದ್ದಾರೆ.

ಪ್ರತಿ ನಿಮಿಷಕ್ಕೆ 80ರಿಂದ 90 ಭಕ್ತರನ್ನು 18 ಮೆಟ್ಟಿಲು ಹತ್ತಿಸಿ ಗರ್ಭಗುಡಿಯ ಕಡೆ ಬಿಡಬೇಕಾದ ಅನಿವಾರ್ಯತೆ ಇರುವುದರಿಂದ ಭಕ್ತರು ಗರ್ಭಗುಡಿಗೆ ಹೋಗುತ್ತಿದ್ದಂತೆಯೇ ಆಕಡೆ–ಈಕಡೆ ಕಣ್ಣು ಮಿಟುಕಿಸದೇ ಕ್ಷಣಾರ್ಧದಲ್ಲಿ ಸ್ವಾಮಿ ದರ್ಶನ ಪಡೆಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಜನಸಂದಣಿ ನಿಯಂತ್ರಣಕ್ಕೆ ಕೇಂದ್ರ ಮೀಸಲು ಪಡೆ ಕರೆಸಿಕೊಳ್ಳಲು ಕೇರಳ ಸರ್ಕಾರ ನಿರ್ಧರಿಸಿದೆ. ವರ್ಚುಯಲ್ ಕ್ಯೂ ಮೂಲಕ ದಿನವೊಂದಕ್ಕೆ 70 ಸಾವಿರ ಮತ್ತು ಸ್ಪಾಟ್‌ನಲ್ಲಿ 20 ಸಾವಿರ ಬುಕ್ಕಿಂಗ್ ಮಾಡುವ ವ್ಯವಸ್ಥೆಯನ್ನು ಶಬರಿಮಲೆಯಲ್ಲಿ ಇದೆಯಾದರೂ, ಇಂದಿನ ಪರಿಸ್ಥಿತಿಯಲ್ಲಿ ಅದು ಕಾರ್ಯರೂಪಕ್ಕೆ ಬಾರದೇ ಭಕ್ತರು ಪ್ರವಾಹದೋಪಾದಿಯಲ್ಲಿ ಮುನ್ನುಗ್ಗುತ್ತಿರುವುದು ಆಡಳಿತ ಮಂಡಳಿಗೆ ಕಗ್ಗಂಟಾಗಿ ಪರಿಣಮಿಸಿದೆ.

ರೋಗ ಭೀತಿ: ಕೇರಳದಲ್ಲಿ ಮೆದುಳು ತಿನ್ನುವ ಅಮೀಬಾ ಹಾವಳಿ ಹೆಚ್ಚಾಗಿರುವುದು ಒಂದೆಡೆಯಾದರೆ, ಶಬರಿಮಲೆಯಲ್ಲಿನ ಇಂದಿನ ಪರಿಸ್ಥಿತಿಯಲ್ಲಿ ಕುಡಿಯುವ ನೀರಿಗೂ ಭಕ್ತಾದಿಗಳು ಬವಣೆ ಪಡುವಂತಾಗಿದೆ. ಮತ್ತೊಂದೆಡೆ ಪಂಪಾ ನದಿ ನೀರು ಮಲಿನಗೊಂಡಿದ್ದರೂ, ಅನ್ಯ ಮಾರ್ಗವಿಲ್ಲದೆ ಭಕ್ತಾದಿಗಳು ಅದನ್ನೇ ಕುಡಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಲಕ್ಷಾಂತರ ಭಕ್ತಾದಿಗಳ ಮಧ್ಯೆ ಸಣ್ಣ ಮಕ್ಕಳು ಹೈರಾಣಾಗುತ್ತಿದ್ದಾರೆ. ಜನ ಸಂದಣಿಯಲ್ಲಿ ಉಸಿರಾಟದ ತೊಂದರೆಗೆ ಒಳಗಾಗುವ ಮಕ್ಕಳನ್ನು ವಿಶಾಲವಾದ ಸ್ಥಳಕ್ಕೆ ಸ್ಥಳಾಂತರಿಸುವುದೂ ದುಸ್ತರವಾಗಿ ಪರಿಣಮಿಸಿದೆ. ಅವರಿಗೆ ಕುಡಿಯಲು ನೀರನ್ನು ಕೊಡಲು ಆಡಳಿತ ಮಂಡಳಿ ವಿಫಲವಾಗಿವೆ ಎಂಬ ಆರೋಪಗಳು ಕೇಳಿಬರುತ್ತಿವೆ.

ಮತ್ತೊಂದೆಡೆ ಶಬರಿಮಲೆಯಲ್ಲಿನ ಅವ್ಯವಸ್ಥೆ ಸಂಬಂಧ ಕೇರಳಾ ಹೈಕೋರ್ಟ್ ಸರ್ಕಾರದ ವಿರುದ್ಧ ಕಿಡಿಕಾರಿದೆ. ಭಕ್ತರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ತಾಕೀತು ಮಾಡಿದೆ. ಶಬರಿಮಲೆಯಲ್ಲಿ ಸರಿಯಾದ ವ್ಯವಸ್ಥೆ ಮಾಡದಿದ್ದರೆ ಅನಾಹುತ ನಿಶ್ಚಿತವಾಗಿದ್ದು, ತಕ್ಷಣವೇ ಎಚ್ಚೆತ್ತುಕೊಂಡು ಸಮರೋಪಾದಿಯಲ್ಲಿ ಮೂಲ ವ್ಯವಸ್ಥೆಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಬೇಕೆಂದು ಹೈಕೋರ್ಟ್ ಎಚ್ಚರಿಕೆ ನೀಡಿದೆ.

ಈ ಹಿನ್ನೆಲೆಯಲ್ಲಿ ಕೇರಳ ಪೊಲೀಸರು ಶಬರಿಮಲೆಯಲ್ಲಿ 30 ಕಿ.ಮೀ. ಹಿಂದೆಯೇ ಮಾಲಾಧಾರಿಗಳ ವಾಹನಗಳನ್ನು ತಡೆದು ನಿಲ್ಲಿಸುತ್ತಿದ್ದಾರೆ. ಕನಿಷ್ಠ ಒಂದು ದಿನವಾದರೂ ಇಲ್ಲೇ ಕಾಯಬೇಕು. ಇಲ್ಲದಿದ್ದರೆ ವಾಪಸ್ ತೆರಳಿ ಎಂದು ಕಟ್ಟಾಜ್ಞೆ ಮಾಡಿ ಎಂದು ತಾಕೀತು ಮಾಡುತ್ತಿದ್ದಾರೆ. ಇದರ ಪರಿಣಾಮವಾಗಿ ಪದೇ ಪದೇ ಪೊಲೀಸರು ಮತ್ತು ಭಕ್ತರ ನಡುವೆ ಮಾತಿನ ಚಕಮಕಿ ನಡೆಯುತ್ತಿದೆ. ಪರಿಸ್ಥಿತಿ ಮನವರಿಕೆಯಾದ ಸಾವಿರಾರು ಮಂದಿ ಭಕ್ತಾದಿಗಳು ಶಬರಿಮಲೈಗೆ ಹೋಗದೇ ಹಿಂತಿರುಗಿ ಅವರವರ ಊರಿಗೆ ತೆರಳುವ ಮಾರ್ಗ ಮಧ್ಯೆ ಇರುವ ಅಯ್ಯಪ್ಪ ಸ್ವಾಮಿ ದೇವಾಲಯಕ್ಕೆ ಇರುಮುಡಿ ಅರ್ಪಿಸುತ್ತಿದ್ದಾರೆ.

ರಾಜ್ಯದ ಭಕ್ತರಿಗೆ ಅಗತ್ಯ ಸೌಕರ್ಯ ಕಲ್ಪಿಸಿ

ಸಹಕಾರ ನೀಡಬೇಕು ಎಂದು ಮನವಿ ಮಾಡಿದ್ದಾರೆ. ಕರ್ನಾಟಕದ ಯಾತ್ರಿಕರು ಹೆಚ್ಚಾಗಿ ಬಳಸುವ ಪ್ರವೇಶ ಮಾರ್ಗಗಳಲ್ಲಿ, ವಿಶೇಷವಾಗಿ ಮಹತ್ವದ ದಿನಗಳಲ್ಲಿ ಹೆಚ್ಚಿನ ಜನಸಂದಣಿ ಇರುವ ಪ್ರದೇಶಗಳಲ್ಲಿ ಸೂಕ್ತ ಸಾರಿಗೆ ವ್ಯವಸ್ಥೆ ಮಾಡಬೇಕು.

ಅಗತ್ಯ ವೈದ್ಯಕೀಯ ನೆರವು, ತುರ್ತು ಸ್ಪಂದನಾ ಸೇವೆಗಳು ಮತ್ತು ಪ್ರಮುಖ ಸಾರಿಗೆ ಕೇಂದ್ರಗಳಲ್ಲಿ ಆರೋಗ್ಯ ಅಧಿಕಾರಿಗಳ ಸಮನ್ವಯತೆ ಇರಬೇಕು. ಯಾತ್ರಿಕರ ಯೋಗ ಕ್ಷೇಮ ಖಚಿತಪಡಿಸಿಕೊಳ್ಳಲು ಸಾಕಷ್ಟು ಪೊಲೀಸ್ ಮತ್ತು ಸುರಕ್ಷತಾ ಕ್ರಮಗಳನ್ನು ವಿಶೇಷವಾಗಿ ಸೂಕ್ಷ್ಮ ಅಥವಾ ಹೆಚ್ಚಿನ ಜನಸಾಂದ್ರತೆಯ ಸ್ಥಳಗಳಲ್ಲಿ ವ್ಯವಸ್ಥೆ ಮಾಡಬೇಕು ಎಂದು ಡಾ.ಶಾಲಿನಿ ರಜನೀಶ್ ಕೋರಿದ್ದಾರೆ.

ಯಾತ್ರಿಕರಿಗೆ ಸೌಲಭ್ಯ, ಕಾರ್ಯವಿಧಾನಗಳ ಸಮನ್ವಯ ಮತ್ತು ಸಹಾಯಕ್ಕಾಗಿ ಕನ್ನಡ ಭಾಷೆ ಸೇರಿದಂತೆ ಬಹುಭಾಷೆಗಳಲ್ಲಿ ಸಂವಹನ ಸಹಾಯ ಕೇಂದ್ರಗಳು ಅಥವಾ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಬೇಕು. ತುರ್ತು ಪರಿಸ್ಥಿತಿ ಅಥವಾ ವಿಶೇಷ ಅವಶ್ಯಕತೆಗಳ ಸಂದರ್ಭದಲ್ಲಿ ಕರ್ನಾಟಕದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಲು ಕೇರಳದಲ್ಲಿ ಸಂಪರ್ಕ ಕೇಂದ್ರ ಸ್ಥಾಪಿಸುವಂತೆ ಮನವಿ ಮಾಡಿದ್ದಾರೆ. ಪ್ರತಿ ವರ್ಷ ತೀರ್ಥಯಾತ್ರೆ ಋತುವಿನಲ್ಲಿ ಕೇರಳ ಸರ್ಕಾರದ ನಿರಂತರ ಸಹಕಾರವನ್ನು ಕರ್ನಾಟಕ ಸರ್ಕಾರ ಆತ್ಮೀಯವಾಗಿ ಗೌರವಿಸುತ್ತದೆ. ಕೇರಳ ಸರ್ಕಾರದ ಬೆಂಬಲದೊಂದಿಗೆ, ಪ್ರಸಕ್ತ ಸಾಲಿನ ತೀರ್ಥಯಾತ್ರೆ ಸುಗಮವಾಗಿ ಮುಂದುವರಿಯುತ್ತಿದ್ದು, ಎಲ್ಲಾ ಭಕ್ತರಿಗೆ ಸುರಕ್ಷಿತ ಮತ್ತು ಅರ್ಥಪೂರ್ಣ ಅನುಭವ ನೀಡುವ ವಿಶ್ವಾಸವಿದೆ ಎಂದಿದ್ದಾರೆ. ಕೇರಳ ಸಕಾರಾತ್ಮಕ ಸ್ಪಂದನೆ ಮತ್ತು ಅಗತ್ಯ ಸಹಕಾರಕ್ಕಾಗಿ ಎದುರು ನೋಡುತ್ತಿರುವುದಾಗಿ ಕೇರಳದ ಮುಖ್ಯ ಕಾರ್ಯದರ್ಶಿಗಳಿಗೆ ತಿಳಿಸಿದ್ದಾರೆ.

ಹೆಚ್ಚಳ ಮಾಡೋದು ನನ್ನ ಇಚ್ಛೆ

ಸೇರುತ್ತಾರಲ್ಲಾ ಇವರಿಗೆ ಏನು ಹೇಳೋದು. ಇವರ ಸಿದ್ಧಾಂತ ಹಿಂದುಳಿದವರ ಶತ್ರು ಎಂದು ಗೊತ್ತಿದ್ದೂ ಹೋಗಿ ಹೋಗಿ ಅಲ್ಲಿಗೇ ಸೇರುತ್ತಾರಲ್ಲ ಇದಕ್ಕೆ ಏನು ಮಾಡೋದು ಎಂದು ಸಿಎಂ ಸಿದ್ದರಾಮಯ್ಯ ಅಸಮಾಧಾನ ಹೊರ ಹಾಕಿದರು.

ನಾನು ಹಣಕಾಸು ಮಂತ್ರಿಯಾದಾಗ ಈ ಸಿದ್ದರಾಮಯ್ಯಂಗೆ ನೂರು ಕುರಿ ಎಣಿಸೋಕೆ ಬರಲ್ಲ ಬಜೆಟ್ ಮಂಡಿಸ್ತಾರಾ ಎಂದು ಪತ್ರಿಕೆಯೊಂದರಲ್ಲಿ ಬರೆದಿದ್ದರು. ಇದನ್ನು ನಾನು ಸವಾಲಾಗಿ ಸ್ವೀಕರಿಸಿದೆ. 16 ಬಜೆಟ್ ಮಂಡಿಸಿದೆ. 17ನೇ ಬಜೆಟನ್ನೂ ಮಂಡಿಸುತ್ತೇನೆ. ನನಗೆ ಅವಕಾಶ ಸಿಕ್ಕಿದ್ದರಿಂದ ನಾನು ಇಷ್ಟೆಲ್ಲಾ ಮಾಡಲು ಸಾಧ್ಯವಾಯಿತು. ಅವಕಾಶ ಸಿಗದಿದ್ದರೆ ನನ್ನಿಂದ ಇದನ್ನು ಮಾಡಲು ಸಾಧ್ಯವಿರಲಿಲ್ಲ. ಆದ್ದರಿಂದ ದಮನಿತ ಜಾತಿಗಳಿಗೆ ಅವಕಾಶ ಮುಖ್ಯ ಎಂದರು. ಎಲ್ಲಿವರೆಗೂ ಜಾತಿ ವ್ಯವಸ್ಥೆ ಇರುತ್ತದೋ ಅಲ್ಲಿವರೆಗೂ ಮೀಸಲಾತಿ ಇರಬೇಕು ಎನ್ನುವುದು ಡಾ.ಅಂಬೇಡ್ಕರ್ ಅವರ ಮಾತಾಗಿತ್ತು. ನಮ್ಮಲ್ಲಿ ಶಿಕ್ಷಣ ಪ್ರಮಾಣ ಶೇ.68ರಷ್ಟಿದ್ದರೂ ಜಾತಿ ವ್ಯವಸ್ಥೆ ಇನ್ನಷ್ಟು ಗಟ್ಟಿಯಾಗುತ್ತಿದೆ. ಜಾತಿ ವ್ಯವಸ್ಥೆಯಿಂದ ಅನುಕೂಲ ಮಾಡಿಕೊಂಡವರು ಈ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಿದ್ದರೆ. ಹಿಂದುಳಿದವರು ಇನ್ನೂ ಗುಲಾಮಗಿರಿ ಮನಸ್ಥಿತಿಯಿಂದ ಹೊರಗೆ ಬಂದಿಲ್ಲ. ಮೇಲು ಜಾತಿಯ ಬಡವರನ್ನೂ ಬಹುವಚನದಿಂದ ಕರೆಯುವುದು, ಕೆಳ ಜಾತಿಯ ಶ್ರೀಮಂತರನ್ನು ಏಕವಚನದಲ್ಲಿ ಕರೆಯುವುದೇ ಗುಲಾಮಿ ಮನಸ್ಥಿತಿಯ ಸಂಕೇತ ಎಂದರು.

ಜೆಸಿಬಿ ನುಗ್ಗಿಸುವ ಸರ್ಕಾರ ಕರ್ನಾಟಕದಲ್ಲಿ ಬರಬೇಕು

ಆಯಿತು ಎಂದು ಕಾಂಗ್ರೆಸ್‌ನವರು ಹಿಂದೂ ಧರ್ಮಿಯರ ಬಗ್ಗೆ ಹಗುರ 'ವಾಗಿ ಮಾತನಾಡುತ್ತಾರೆ. ಇದರಿಂದ ಹಿಂದೂ ಧರ್ಮದವರು ಪಾಠ ಕಲಿಯಬೇಕು. ಹಿಂದೂಗಳು ಬುದ್ಧಿ ಕಲಿಯದಿದ್ದರೆ ಇದೂ ಕೂಡ ಕೇರಳ ಹಾಗೂ ಪಶ್ಚಿಮ ಬಂಗಾಳದಂತೆ ಮುಸ್ಲಿಂ ಪ್ರಾಬಲ್ಯ ಹೊಂದುವಂತಾಗುತ್ತದೆ ಎಂದು ಮರು ಎಚ್ಚರಿಕೆ ನೀಡಿದರು. ಹಿಂದೂ ಸನಾತನ ಧರ್ಮಿಯರು ಕ್ಷೀಣರಾದರೆ ಮುಸ್ಲಿಂರು ಬಲಾಢ್ಯರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಹಿಂದೂಗಳು ಒಂದಾಗಬೇಕು. ರಾಷ್ಟ್ರ ಧ್ವಜದ ಕೆಳಗೆ ಹಿಂದೂ ಕೇಸರಿ ಬಾವುಟ ರಾರಾಜಿಸ ಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಬಾಂಗ್ಲಾದೇಶ ಹಾಗೂ ಪಾಕಿಸ್ತಾನದಿಂದ ಲಕ್ಷಾಂತರ ಜನರು ಭಾರತಕ್ಕೆ ಕಳ್ಳಮಾರ್ಗದಲ್ಲಿ ವಲಸೆ ಬಂದಿದ್ದಾರೆ. ಚುನಾವಣಾ ಗುರುತಿನ ಚೀಟಿ ಸೇರಿದಂತೆ ಹಲವು ದಾಖಲಾತಿಗಳನ್ನು ಮಾಡಿಸಿಕೊಂಡಿದ್ದಾರೆ. ಬೆಂಗಳೂರು ಸೇರಿದಂತೆ ದೇಶದ ಹಲವೆಡೆ ಬಾಂಗ್ಲಾದೇಶದ ಕಾಲೋನಿಗಳೇ ತಲೆ ಎತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು. ವಿಶ್ವ ಭೂಪಟದಲ್ಲಿ ಇಸ್ರೇಲ್ ಮೆಣಸಿನ ಕಾಯಿಯಷ್ಟು ಗಾತ್ರದಲ್ಲಿದೆ. ಆದರೆ ಭಯೋತ್ಪಾದಕ ಮುಸ್ಲಿಂರನ್ನು ಬಗ್ಗು ಬಡಿಯುತ್ತಿದ್ದಾರೆ. ಅಮೇರಿಕಾದ ಜೊತೆ ಮಾತನಾಡುತ್ತಲೆ ಮುಸ್ಲಿಂರನ್ನು ಹುಟ್ಟಡಗಿಸುತ್ತಿದ್ದಾರೆ. ಹೀಗೆ ನಾವು ಕೂಡ ಮುಸ್ಲಿಂರ ಹುಟ್ಟಡಗಿಸಬೇಕು ಎಂದು ಹೇಳಿದರು.

ಮದರಸಾಗಳಿಗೆ ಕೋಟಿ ಕೊಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ ಕನ್ನಡ ಶಾಲೆಗೆ ಏನೂ ಕೊಡಲ್ಲ!

ಮದರಸಾ ಹಾಗೂ ಉರ್ದು ಶಾಲೆಗಳಿಗೆ ಕೋಟಿ ಕೋಟಿ ಹಣ ಕೊಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕನ್ನಡ ಶಾಲೆಗಳ ಅಭಿವೃದ್ಧಿಗೆ ಹಣ ಕೊಡಲು ಆರ್ಥಿಕ ಬಿಕ್ಕಟ್ಟಿನ ಸಬೂಬು ಹೇಳುತ್ತಿದ್ದಾರೆ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಆಕ್ರೋಶ ವ್ಯಕ್ತಪಡಿಸಿದರು. ಕನ್ನಡ ಶಾಲೆಗಳ ಕಟ್ಟಡಗಳು ಸೋರಗಿವೆ. ಶಿಕ್ಷಕರಿಲ್ಲದೆ ಪಾಠ–ಪ್ರವಚನ ಹಿಂದುಳಿದಿದೆ. ಆದರೂ ಕನ್ನಡ ಶಾಲೆಗಳ ಸಮಸ್ಯೆ ಪರಿಹಾರಕ್ಕೆ ಹಣ ನೀಡಲು ಸಿದ್ದರಾಮಯ್ಯ ಹಿಂಜರಿಯುತ್ತಾರೆ ಎಂದರು.

ಮುಸ್ಲಿಂ ಒಬ್ಬರಿಗೆ 10 ಸಾವಿರ ಕೋಟಿ ಕೊಡುತ್ತೇನೆ. ಅವಶ್ಯವಿದ್ದರೆ ಹೇಳಿ, ಮತ್ತಷ್ಟು ಹಣ ಕೊಡುತ್ತೇನೆ ಎನ್ನುತ್ತಾರೆ. ಹಾಗಾದರೆ ಮುಸ್ಲಿಂ ಬಿಟ್ಟು ಬೇರೆ ಜಾತಿ, ಧರ್ಮದವರು ಕಾಂಗ್ರೆಸ್‌ಗೆ ಮತ ಹಾಕುವುದಿಲ್ಲವೇ ಎಂದು ಯತ್ನಾಳ್ ಪ್ರಶ್ನಿಸಿದರು.

ನಾನು ಕೂಡ ಮುಸ್ಲಿಂ, ಈಗಾಗಲೇ ನಾನು ಮುಸ್ಲಿಂ ಆಗಿ ಬಿಟ್ಟಿದ್ದೇನೆ, ಮುಂದಿನ ಜನ್ಮದಲ್ಲಿ ಮುಸ್ಲಿಂನಾಗಿ ಹುಟ್ಟುತ್ತೇನೆ ಎಂದ ಸಿದ್ದರಾಮಯ್ಯ ಹೇಳುತ್ತಾರೆ. ಇದು ಇವರ ಮುಸ್ಲಿಂ ಪರ ಧೋರಣೆ ಬಿಂಬಿಸುತ್ತದೆ ಎಂದರು. ವಸತಿ ಸಚಿವ ಜಮೀರ್ ಅಹಮ್ಮದ್ 400 ಮುಸ್ಲಿಂರಿಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ತರಬೇತಿ ಕೊಡಿಸಿದ್ದಾರೆ. ಇವರೆನ್ನಾದರೂ ಎಸ್‌ಐಗಳಾಗಿ ನೇಮಕಗೊಂಡು ಒಂದೊಂದು ಪೊಲೀಸ್ ಠಾಣೆಗೆ ಬಂದರೆ ಹಿಂದೂಗಳನ್ನು ಬಗ್ಗು ಬಡಿಯುತ್ತಾರೆ. ಮುಸ್ಲಿಂರಿಗೆ ಕೋಮು ಪ್ರಚೋದನೆ ನೀಡುತ್ತಾರೆ ಎಂದು ಎಚ್ಚರಿಕೆ ನೀಡಿದರು. ನಾನು ಎಸ್‌ಟಿ, ಎಸ್‌ಸಿ, ಅಹಿಂದ ಪರ ಎಂದೇಳುವ ಸಿದ್ದರಾಮಯ್ಯ ಅವರು ತಮ್ಮ ಸರ್ಕಾರದ ಅವಧಿಯಲ್ಲಿ ಈ ವರ್ಗದವರಿಗೆ ಹೀಗೆ ತರಬೇತಿ ಕಾರ್ಯಕ್ರಮ ರೂಪಿಸಿದ್ದಾರೆಯೇ ಎಂದು ಕೇಳಿದರು. ಪೊಲೀಸ್ ಠಾಣೆಗಳಿಗೆ ಬೆಂಕಿ ಹಚ್ಚಿದರೂ ಈ ಸರ್ಕಾರ ಅವರ ಮೇಲೆ ಕ್ರಮ ಕೈಗೊಂಡಿಲ್ಲ. ಲಕ್ಷಾಂತರ ಹಿಂದೂಗಳನ್ನು ಹತ್ಯೆ ಮಾಡಿದ ಟಿಪ್ಪು ಸುಲ್ತಾನ್ ಸರ್ಕಾರ ರಾಜ್ಯದಲ್ಲಿ ಅಧಿಕಾರದಲ್ಲಿದೆ ಎಂದು ಆರೋಪಿಸಿದರು.

ಆರ್ಥಿಕ ಸ್ವಾವಲಂಬನೆಗೆ ರೇಷ್ಮೆ ಕೃಷಿ ಅತ್ಯುತ್ತಮ ಆಯ್ಕೆ

ರೇಷ್ಮೆ ನಿರ್ದೇಶನಾಲಯದ ಅಪರ ನಿರ್ದೇಶಕ ವೈ.ಟಿ.ತಿಮ್ಮಯ್ಯ ಪ್ರತಿಪಾದನೆ

ಮೈಸೂರು,19(ಎಂಕೆ)–ಕಡಿಮೆ ಖರ್ಚಿನಲ್ಲಿ ಹೆಚ್ಚು ಲಾಭ ಗಳಿಸಲು ರೇಷ್ಮೆ ಕೃಷಿ ಸಹಕಾರಿಯಾಗಿದ್ದು, ಲಾಭದ ಜೊತೆಗೆ ಆರ್ಥಿಕ ಭದ್ರತೆಯನ್ನು ಒದಗಿಸಲಿದೆ ಎಂದು ರೇಷ್ಮೆ ನಿರ್ದೇಶನಾಲಯದ ಅಪರ ನಿರ್ದೇಶಕ(ತಾಂತ್ರಿಕ) ವೈ.ಟಿ.ತಿಮ್ಮಯ್ಯ ಹೇಳಿದರು.



ಮೈಸೂರು ವಿವಿ ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ನಡೆದ 'ರೇಷ್ಮೆ ಕೃಷಿಯಲ್ಲಿನ ಪ್ರಗತಿ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮೈಸೂರು ವಿವಿ ಕುಲಸಚಿವರಾದ ಎಂ.ಕೆ.ಸವಿತಾ ಮಾತನಾಡಿದರು.(ಎಡದಿಂದ ಕುಳಿತಿರುವವರು) ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಬಿ.ಸಣ್ಣಪ್ಪ, ರೇಷ್ಮೆ ನಿರ್ದೇಶನಾಲಯದ ಅಪರ ನಿರ್ದೇಶಕ(ತಾಂತ್ರಿಕ) ವೈ.ಟಿ.ತಿಮ್ಮಯ್ಯ, ಸಂಘಟನಾ ಕಾರ್ಯದರ್ಶಿ ಪ್ರೊ.ಆರ್.ಎಸ್.ಉಮಾಕಾಂತ್ ಉಪಸ್ಥಿತರಿದ್ದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯ ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ಸಹಯೋಗದೊಂದಿಗೆ ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ್(ರುಸಾ ಯೋಜನೆ) ಯೋಜನೆಯಡಿ ಹಮ್ಮಿಕೊಂಡಿರುವ ಎರಡು ದಿನದ 'ರೇಷ್ಮೆ ಕೃಷಿಯಲ್ಲಿನ ಪ್ರಗತಿ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಆರ್ಥಿಕವಾಗಿ ಸ್ವಾವಲಂಬಿಗಳಾಗಲು ರೇಷ್ಮೆ ಕೃಷಿ ಅತ್ಯುತ್ತಮ ಆಯ್ಕೆಯಾಗಿದೆ ಎಂದರು.

ರೇಷ್ಮೆ ಕೃಷಿಯಲ್ಲಿ ಸುಧಾರಿತ ಆಧುನಿಕ ತಂತ್ರಜ್ಞಾನ ಅಳವಡಿಕೆಯಿಂದ ಖರ್ಚು ಕಡಿಮೆಯಾಗಿ ಆದಾಯ ಹೆಚ್ಚಾಗಲಿದೆ. ರೇಷ್ಮೆ ಹುಳುಗಳಿಗೆ ರೋಗಗಳು ಬಾಧಿಸುವಿಕೆಯೂ ನಿಯಂತ್ರಣಕ್ಕೆ ಬರಲಿದೆ. ರೇಷ್ಮೆ ಹುಳುಗಳಿಗೆ ನೀಡುವ ಹಿಪ್ಪುನೇರಳೆ ಬೆಳೆಯಲು 16 ಬಗೆಯ ಪೋಷಕಾಂಶಗಳು ಮುಖ್ಯವಾಗಿದ್ದು, ಸಾವಯವ ಗೊಬ್ಬರದ ಜೊತೆಗೆ ಶೇ.70ರಷ್ಟು ರಾಸಾಯನಿಕ ಗೊಬ್ಬರ ಬಳಕೆ ಮಾಡಿದರೂ ತೊಂದರೆಯಿಲ್ಲ ಎಂದು ಮಾಹಿತಿ ನೀಡಿದರು.

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ಕುಲಸಚಿವರಾದ ಎಂ.ಕೆ.ಸವಿತಾ ಮಾತನಾಡಿ, ಕಾರ್ಯಾಗಾರ, ಮತ್ತು ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವುದರಿಂದ ಜ್ಞಾನ ವೃದ್ಧಿಸಲಿದೆ. ಕಳೆದ 20 ವರ್ಷಗಳಿಂದ ಗಮನಿಸುತ್ತಿದ್ದೇನೆ ವರ್ಷದಿಂದ ವರ್ಷಕ್ಕೆ ರೇಷ್ಮೆ ಸೀರೆಗಳಿಗೆ ಡಿಮ್ಯಾಂಡ್ ಹೆಚ್ಚಾಗುತ್ತಿದೆಯೇ ಹೊರತು ಕಡಿಮೆಯಾಗಿಲ್ಲ. ಸರತಿ ಸಾಲಿನಲ್ಲಿ ನಿಂತು ಮೈಸೂರು ರೇಷ್ಮೆ ಸೀರೆಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಈ ನಿಟ್ಟಿನಲ್ಲಿ ರೇಷ್ಮೆ ಕೃಷಿಯು ಚಿನ್ನದ ಬೆಳೆಯನ್ನೇ ಬೆಳೆದಂತೆ ಎಂದು ಅಭಿಪ್ರಾಯಿಸಿದರು.

ಆಳವಾದ ಅಧ್ಯಯನದೊಂದಿಗೆ ರೇಷ್ಮೆ ಕೃಷಿಯಲ್ಲಿ ತೊಡಗಿಕೊಂಡರೆ ಉದ್ಯಮಿಗಳಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ, ಸಾಕಷ್ಟು ಆದಾಯವಿದ್ದರೂ ರೇಷ್ಮೆ ಕೃಷಿ ಮಾಡುವವರ ಸಂಖ್ಯೆ ಕಡಿಮೆಯಾಗಿರುವುದು ಮುಂದಿರುವ ಪ್ರಶ್ನೆಯಾಗಿದೆ. ಆದ್ದರಿಂದ ರೇಷ್ಮೆ ಕೃಷಿ ಸುಧಾರಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಹಾಗೆಯೇ ವಿದ್ಯಾರ್ಥಿಗಳು ಶೈಕ್ಷಣಿಕ ಸಾಲಿನ ಅಧ್ಯಯನ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ತಯಾರಿ ನಡೆಸಬೇಕು. ಸಾಮಾಜಿಕ ಜಾಲತಾಣದಲ್ಲಿ ಕಾಮೆಂಟ್ ಮಾಡುತ್ತಾ ಕಾಲ ಕಳೆದರೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂದರು. ಮೈಸೂರು ವಿವಿ ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಬಿ.ಸಣ್ಣಪ್ಪ, ಸಂಘಟನಾ ಕಾರ್ಯದರ್ಶಿ ಪ್ರೊ.ಆರ್.ಎಸ್.ಉಮಾಕಾಂತ್, ಪ್ರೊ.ಎಂ.ಎನ್.ಅನಿಲ್ ಕುಮಾರ್, ಪ್ರೊ.ಟಿ.ಎಸ್.ಜಗದೀಶ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಹೊರದೇಶಗಳಿಗೆ ಹೋಗಿ ಬಂದವರು ಅಲ್ಲಿನ ಜ್ಞಾನವನ್ನು ಹಂಚಿಕೊಳ್ಳಬೇಕು

ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಕಿವಿಮಾತು


ಮಾನಸಗಂಗೋತ್ರಿಯ ರಸಾಯನಶಾಸ್ತ್ರ ವಿಭಾಗದಲ್ಲಿ 'ಕೆಮಿಕಲ್ ಸೊಸೈಟಿ'ಯನ್ನು ಖ್ಯಾತ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಉದ್ಘಾಟಿಸಿದರು.

ಮೈಸೂರು,19(ಎಂಕೆ)– ಹೊರದೇಶಗಳಿಗೆ ಹೋಗಿ ಬಂದವರು ತಮ್ಮ ಜ್ಞಾನವನ್ನು ಹಂಚಿಕೊಳ್ಳಬೇಕು ಎಂದು ಖ್ಯಾತ ವಿಜ್ಞಾನಿಯೂ ಆದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಹೇಳಿದರು.

ಮೈಸೂರು ವಿವಿ ಮಾನಸಗಂಗೋತ್ರಿಯ ರಸಾಯನಶಾಸ್ತ್ರ ವಿಭಾಗದಲ್ಲಿ 'ಕೆಮಿಕಲ್ ಸೊಸೈಟಿ' ಉದ್ಘಾಟಿಸಿ ಮಾತನಾಡಿದ ಅವರು, ಕೆಮಿಕಲ್ ಸೊಸೈಟಿಯ ಮೂಲಕ ಕಾರ್ಯಾಗಾರ, ಸಮ್ಮೇಳನ, ಕೈಗಾರಿಕೆಗಳು ಹಾಗೂ ಪ್ರಯೋಗಾಲಯಗಳಿಗೆ ಭೇಟಿ ನೀಡಬೇಕು. ವಿದ್ಯಾರ್ಥಿಗಳು, ಸಂಶೋಧಕರು ರಾಸಾಯನಿಕಗಳ ಕುರಿತು ಜ್ಞಾನ ಹೆಚ್ಚಿಸಿಕೊಳ್ಳುವುದು ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಹೊರದೇಶಗಳಿಗೆ ಹೋಗಿ ಬಂದವರು ತಮ್ಮ ಜ್ಞಾನವನ್ನು ಹಂಚಿಕೊಳ್ಳುವ ವ್ಯವಸ್ಥೆ ಮಾಡಬೇಕು ಎಂದು ಸಲಹೆ ಮಾಡಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್.ರಾಮೇಗೌಡ ಮಾತನಾಡಿ, ಪರಿಸರ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ವಿದ್ಯಾರ್ಥಿಗಳು, ಸಂಶೋಧಕರು ಮುಂದಾಗಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ರಸಾಯನಶಾಸ್ತ್ರ ವಿಭಾಗದ ಅಧ್ಯಕ್ಷ ಪ್ರೊ.ಕೆ.ಎನ್.ಮೋಹನ ಮಾತನಾಡಿ, ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ಕೆಮಿಕಲ್ ಸೊಸೈಟಿಯ ಮೂಲಕ ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗುವುದು. ರಸಾಯನಶಾಸ್ತ್ರೇತರ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ, ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದರು.

ಕ್ರಿಯಾ ಫೌಂಡೇಷನ್ ಸಂಸ್ಥಾಪಕ ಪ್ರೊ.ಕೆ.ಎಂ.ಪ್ರಸನ್ನಕುಮಾರ್ ಮಾತನಾಡಿ, ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ(ಸಿಎಸ್‌ಆರ್) ರೀತಿಯಲ್ಲಿ ಅಕಾಡೆಮಿಕ್ ಮತ್ತು ಸೈಂಟಿಫಿಕ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ ಕೂಡ ಇರಬೇಕು ಎಂದರು. ಬಳಿಕ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ.ಎನ್.ಎಸ್.ರಾಮೇಗೌಡ ಹಾಗೂ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರನ್ನು ಸನ್ಮಾನಿಸಲಾಯಿತು. ಕೆಮಿಕಲ್ ಸೊಸೈಟಿ ಖಜಾಂಚಿ ಪ್ರೊ.ಹೆಚ್.ಡಿ.ರೇವಣಸಿದ್ದಪ್ಪ, ಪ್ರೊ.ಎಂ.ಪಿ.ಸದಾಶಿವ, ಡಾ.ಶರತ್‌ಕುಮಾರ್, ಪ್ರಿಂಸಾ, ಸೂರ್ಯ, ಚರಣ್ ಮತ್ತಿತರರಿದ್ದರು.

ಸಿಎಂ ತವರಿನಲ್ಲಿ ರೈತರನ್ನು ಒಕ್ಕಲೆಬ್ಬಿಸಲು ಯತ್ನ

ಹಾರೋಹಳ್ಳಿ ಗ್ರಾಮದಲ್ಲಿ ಸರ್ವೇ ಕಾರ್ಯಕ್ಕೆ ರೈತರ ಭಾರೀ ಆಕ್ರೋಶ


ಕಂದಾಯ ಅಧಿಕಾರಿಗಳು ಸರ್ವೇ ಮಾಡುವುದನ್ನು ರೈತರು ವಿರೋಧಿಸಿದರು.

ಮೈಸೂರು,ನ.19–ಮುಖ್ಯಮಂತ್ರಿ ತವರು ಕ್ಷೇತ್ರದಲ್ಲೇ ರೈತರನ್ನು ಒಕ್ಕಲೆಬ್ಬಿಸುವ ಪ್ರಯತ್ನ ನಡೆಯುತ್ತಿದ್ದು, ನಾವು ಸರ್ವೆಗೆ ಅವಕಾಶ ನೀಡುವುದಿಲ್ಲ ಎಂಬ ರೈತರ ಆಕ್ರೋಶ ನಡುವೇ ಹಾರೋಹಳ್ಳಿಯಲ್ಲಿ ರೈತರ ವಿರೋಧದ ನಡುವೆಯೂ ಕಂದಾಯ ಇಲಾಖೆ ಅಧಿಕಾರಿಗಳು ಮಂಗಳವಾರ ಸರ್ವೇ ಕಾರ್ಯ ನಡೆಸಿದರು.

ವರುಣಾ ಹೋಬಳಿ ಹುನಗನಹಳ್ಳಿ ಗ್ರಾಮದ ರಸ್ತೆಯಲ್ಲಿರುವ ಹಾರೋಹಳ್ಳಿ ಸರ್ವೇ ನಂ.791ರಲ್ಲಿ 145 ಎಕರೆ ಸರ್ಕಾರಿ ಜಮೀನು ಇದೆ. ಅದನ್ನು ದುರಸ್ತಿ ಮಾಡದೇ ಒಬ್ಬ ವ್ಯಕ್ತಿಗೆ 10 ಎಕರೆ ಜಮೀನು ನೀಡಲು ಜಿಲ್ಲಾಡಳಿತ ಮುಂದಾಗಿದ್ದು, ಮುಖ್ಯಮಂತ್ರಿಗಳ ತವರು ಕ್ಷೇತ್ರದಲ್ಲಿಯೇ ರೈತರನ್ನು ಒಕ್ಕಲೆಬ್ಬಿಸಲು ಜಿಲ್ಲಾಡಳಿತ ಮುಂದಾಗಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ನೇತೃತ್ವದಲ್ಲಿ ಜಮಾವಣೆಗೊಂಡ ಗ್ರಾಮಸ್ಥರು ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಳೆದ 70 ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದೇವೆ. ನಮ್ಮನ್ನು ಒಕ್ಕಲೆಬ್ಬಿಸಬೇಡಿ. ಅಧಿಕಾರಿಗಳು ಆಮಿಷಕ್ಕೆ ಒಳಗಾಗಿದ್ದಾರೆ. ಸರ್ವೇ ಮಾಡಲು ನಾವು ಬಿಡುವುದಿಲ್ಲ ಎಂದು ಪಟ್ಟುಹಿಡಿದರು.

ಲೋಕಾಯುಕ್ತದ ಆದೇಶದ ಮೇರೆಗೆ ಸರ್ವೇ ಮಾಡಲು ಆಗಮಿಸಿದ್ದೇವೆ. ಅವಕಾಶ ನೀಡುವಂತೆ ಹೆಚ್ಚುವರಿ ತಹಸಿಲ್ದಾರ್ ವಿಶ್ವನಾಥ್ ಹೇಳಿದರು. ಲೋಕಾಯುಕ್ತದ ಆದೇಶ ತೋರಿಸುವಂತೆ ಅಹಿಂದ ಜವರಪ್ಪ ಒತ್ತಾಯಿಸಿದರು. ಲೋಕಾಯುಕ್ತರು ಮೌಖಿಕ ಆದೇಶ ನೀಡಿದ್ದಾರೆ ಎಂಬ ಉತ್ತರಕ್ಕೆ ರೈತರು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಜಿಲ್ಲಾಧಿಕಾರಿಗಳು, ತಹಸಿಲ್ದಾರ್ ಸ್ಥಳಕ್ಕೆ ಆಗಮಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದರು.

ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರ ನಾರಾಯಣಸ್ವಾಮಿ ಅವರಿಗೆ ಸರ್ವೇ ನಂ.791 (ಹೊಸ ಸ.ನಂ. 87ರಲ್ಲಿ) 10 ಎಕರೆ ಜಮೀನು ಮಂಜೂರಾಗಿದೆ. ಆದರೆ, ಅವರು 75 ವರ್ಷಗಳಿಂದ ಸ್ವಾಧೀನದಲ್ಲಿ ಇಲ್ಲ. ಅಧಿಕಾರಿಗಳು ಲೋಕಾಯುಕ್ತ ನೆಪ ಮಾಡಿಕೊಂಡು ಒತ್ತುವರಿ ತೆರವು ಮಾಡಲು ಮುಂದಾಗಿರುವುದಕ್ಕೆ ಖಂಡನೆ ವ್ಯಕ್ತಪಡಿಸಿದರು.

ಅಹಿಂದ ಜವರಪ್ಪ ಮಾತನಾಡಿ, ಕ್ಷೇತ್ರದ ಶಾಸಕರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಪ್ಪು ಮಾಹಿತಿ ಕೊಟ್ಟು ಲೋಕಾಯುಕ್ತರು ಮೌಖಿಕ ಆದೇಶ ಕೊಟ್ಟಿದ್ದಾರೆ ಎಂದು ರೈತರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಒತ್ತುವರಿ ಮಾಡಿಕೊಂಡವರ ಬಗ್ಗೆ ಅವರಿಗೆ ನೋಟಿಸ್ ಕೊಟ್ಟಿಲ್ಲ. ಕೆಲವರು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ. ಜಿಲ್ಲಾಡಳಿತ ಕಾನೂನು ಬದ್ಧವಾಗಿ ಚರ್ಚೆ ಮಾಡಿ ಶಾಂತಿಯುತವಾಗಿ ಸಮಸ್ಯೆಯನ್ನು ಬಗೆಹರಿಸಬೇಕು ಎಂದರು.

ಲೋಕಾಯುಕ್ತ ಅಧಿಕಾರಿಗಳಿಗೆ ಭೂ ಒತ್ತುವರಿ ತೆರವು ಮಾಡುವಂತೆ ಆದೇಶ ನೀಡುವಂತಿಲ್ಲ. ಸ್ವಂತ ಜಮೀನನ್ನು ಕಂದಾಯ ಅಧಿಕಾರಿಗಳು ಬಿಡಿಸಿಕೊಡುವಂತಿಲ್ಲ. ಸಿದ್ದರಾಮಯ್ಯ ತವರು ಕ್ಷೇತ್ರದಲ್ಲಿ ಭೂ ಅಕ್ರಮ ನಡೆಯುತ್ತಿದೆ. ಅದಕ್ಕೆ ಜಿಲ್ಲಾಧಿಕಾರಿಗಳು, ತಹಸಿಲ್ದಾರ್ ಕುಮ್ಮಕ್ಕು ಇದೆ ಎಂದು ಆರೋಪಿಸಿದರು.

ಗ್ರಾಮಾಂತರ ಡಿವೈಎಸ್‌ಪಿ ರಾಜಣ್ಣ, ಸರ್ಕಲ್ ಇನ್‌ಸ್ಪೆಕ್ಟರ್ ಶಿವನಂದ ಶೆಟ್ಟಿ, ಸಬ್‌ಇನ್‌ಸ್ಪೆಕ್ಟರ್ ಸದಾಶಿವ ತಿಪ್ಪರಡ್ಡಿ, ಹೆಚ್ಚುವರಿ ತಹಸಿಲ್ದಾರ್ ವಿಶ್ವನಾಥ್, ಉಪ ತಹಸಿಲ್ದಾರ್ ಲತಾ, ಕಂದಾಯ ಅಧಿಕಾರಿ ಯೋಗೇಂದ್ರ ಇದ್ದರು. ಗ್ರಾಮಸ್ಥರಾದ ಆನಂದ್, ಮಾದೇಗೌಡ ಮತ್ತಿತರರು ಉಪಸ್ಥಿತರಿದ್ದರು.

ನ.23ರಂದು ಒಡಿಸ್ಸಿ ಉತ್ಸವ

ಮೈಸೂರು,ನ.19(ಜಿಎ)– ಮೈಸೂರಿನ ರುದ್ರ ನೃತ್ಯಶಾಲೆ ವತಿಯಿಂದ ನ.23ರಂದು ಸಂಜೆ 5.30ಕ್ಕೆ ವಿಜಯನಗರದ ಜಗನ್ನಾಥ ಕಲಾ ಮತ್ತು ಸಾಂಸ್ಕೃತಿಕ ಕೇಂದ್ರದಲ್ಲಿ ಮೈಸೂರು ಒಡಿಸ್ಸಿ ಉತ್ಸವ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನೃತ್ಯಶಾಲೆಯ ವಿದ್ಯಾರ್ಥಿನಿ ಪೃಥೆ ಹವಾಲ್ದಾರ್ ಈ ವಿಷಯ ತಿಳಿಸಿ, ಶಾಲೆಯ ನೃತ್ಯಗುರು ಸಿಂಧು ಕಿರಣ್ ಅವರ ವಿದ್ಯಾರ್ಥಿಗಳು ಕಾರ್ಯಕ್ರಮದ ಮೂಲಕ ಉತ್ಸವ ಆರಂಭವಾಗಲಿದೆ. ಖ್ಯಾತ ನೃತ್ಯ ಕಲಾವಿದರಾದ ಪ್ರಸೂನ್ ಮಂಡಲ್, ಓಜಸ್ ಬಳ್ಳೂರು, ಅಮೃತಾ, ವಿಜಿತ್ ಕುಂದು, ಸಾನ್ವಿ ಇನ್ನಿತರರು ಅತಿಥಿಗಳಾಗಿರುವರು. ವಿವಿಧ ಸಂಘ ಸಂಸ್ಥೆ, ನೃತ್ಯ ಕೇಂದ್ರಗಳ ವಿದ್ಯಾರ್ಥಿಗಳು, ಕಲಾವಿದರು ಒಡಿಸ್ಸಿ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಶ್ರೀ ಕೃಷ್ಣಗಾನ ಸಭಾ ಅಧ್ಯಕ್ಷ ಶ್ರೀಧರರಾಜ್ ಅರಸ್, ಮೈಸೂರಿನ ಪುರಿ ಜಗನ್ನಾಥ ಸಾಂಸ್ಕೃತಿಕ ಮತ್ತು ಕಲ್ಯಾಣ ಸಮಿತಿಯ ಅಧ್ಯಕ್ಷ ಘನಶ್ಯಾಮ್, ಯೋಗ ಒಕ್ಕೂಟದ ಕಾರ್ಯಾಧ್ಯಕ್ಷ ಡಾ.ಬಿ.ಪಿ.ಮೂರ್ತಿ, ಆರಿಯಾಧನಾ ಫೌಂಡೇಷನ್ ನಿರ್ದೇಶಕಿ ಕೆ.ಜ್ಯೋತಿ ಮರ್ಯಿ ಪಟ್ನಾಯಕ್, ನೃತ್ಯ ಕಲಾವಿದೆ ಬದರಿ ದಿವ್ಯ ಭೂಷಣದ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ರುದ್ರ ನೃತ್ಯಶಾಲೆ ನಿರ್ದೇಶಕಿ ಸಿಂಧು ಕಿರಣ್, ಲಿವ್ಯಾ, ವೈದ್ಯನಾಥ್ ಇದ್ದರು.

ಮೈಸೂರು ಮಹಾನಗರಪಾಲಿಕೆಯಿಂದ ಹೆಚ್.ವಿ.ರಾಜೀವ್ ಸ್ನೇಹ ಬಳಗಕ್ಕೆ ಅಭಿನಂದನೆ

ಮೈಸೂರು, ನ.19–'ನಮ್ಮ ಮೈಸೂರು ನಮ್ಮ ಕೊಡುಗೆ' ಎಂಬ ವಿಶೇಷ ಅಭಿನಂದನಾ ಸಮಾರಂಭದಲ್ಲಿ ಮೈಸೂರು ಮಹಾನಗರ ಪಾಲಿಕೆಯು ಹೆಚ್.ವಿ.ರಾಜೀವ್ ಸ್ನೇಹ ಬಳಗದ ಅಧ್ಯಕ್ಷರೂ ಆದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರಿಗೆ ಅಭಿನಂದನಾ ಪತ್ರವನ್ನು ನೀಡಿ ಗೌರವಿಸಿತು.


ಮೈಸೂರು ಪಾಲಿಕೆಯು ಹೆಚ್.ವಿ.ರಾಜೀವ್ ಸ್ನೇಹ ಬಳಗದ ಅಧ್ಯಕ್ಷರೂ ಆದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರಿಗೆ ಅಭಿನಂದನಾ ಪತ್ರ ನೀಡಿ ಗೌರವಿಸಿತು.

2025–26ನೇ ಸಾಲಿನಲ್ಲಿ ಪಾಲಿಕೆಗೆ 3 ಸಾವಿರ ಗಿಡಗಳನ್ನು ಕೊಡುಗೆಯಾಗಿ ನೀಡುವ ಮೂಲಕ 'ನಮ್ಮ ಮೈಸೂರು ಪರಿಸರ ಸಂರಕ್ಷಣಾ ಕಾರ್ಯಕ್ರಮಕ್ಕೆ' ಬೆಂಬಲ ನೀಡಿದ ಹಿನ್ನೆಲೆಯಲ್ಲಿ ಈ ಕೃತಜ್ಞತೆಯನ್ನು ಸಲ್ಲಿಸಲಾಯಿತು.

ಪಾಲಿಕೆಯ ಆಯುಕ್ತರು ಹೆಚ್.ವಿ.ರಾಜೀವ್ ಅವರ ಈ ಉದಾರ ಕೊಡುಗೆಯನ್ನು ಶ್ಲಾಘಿಸಿ, ಮೈಸೂರಿನ ಹಸಿರೀಕರಣಕ್ಕೆ ಅವರ ಪಾತ್ರ ಮಹತ್ವದ್ದು ಎಂದು ತಿಳಿಸಿದರು. ಪರಿಸರ ಸಂರಕ್ಷಣೆಯ ಮಹತ್ವಾಕಾಂಕ್ಷೆಯ ಕಾರ್ಯಕ್ರಮಕ್ಕೆ ನೀಡಿದ ಈ ಬೆಂಬಲಕ್ಕಾಗಿ ಆಯುಕ್ತರು ತುಂಬು ಹೃದಯದ ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾಜಿ ಮಹಾಪೌರರಾದ ಬಿ.ಎಲ್.ಭೈರಪ್ಪ, ನಗರಪಾಲಿಕೆ ಸದಸ್ಯ ಮಾಜಿ ಕೆ.ವಿ.ಮಲ್ಲೇಶ್, ಹೆಚ್.ವಿ.ರಾಜೀವ್ ಸ್ನೇಹ ಬಳಗದ ಸದಸ್ಯರಾದ ಎಸ್.ರಂಗನಾಥ, ಶೇಷಪ್ರಸಾದ್, ಸೂರಿ, ವಾಸು ಸೇರಿದಂತೆ ಹಲವರು ಭಾಗವಹಿಸಿದ್ದರು.

ಬೀದಿನಾಯಿಗಳ ಬಗ್ಗೆ ಮಾಹಿತಿ ನೀಡಲು ಪಾಲಿಕೆ ಸೂಚನೆ

ಮೈಸೂರು, ನ.19–ಖಾಸಗಿ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳು, ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣ, ಬಸ್ ನಿಲ್ದಾಣ ಹಾಗೂ ರೈಲ್ವೆ ನಿಲ್ದಾಣಗಳಲ್ಲಿ ವಾಸವಿರುವ ಬೀದಿ ನಾಯಿಗಳನ್ನು ಲೆಕ್ಕ ಮಾಡಿ ಮಾಹಿತಿಯನ್ನು ನಗರ ಪಾಲಿಕೆ ಆಯುಕ್ತರಿಗೆ ನೀಡಬೇಕೆಂದು ಮೈಸೂರು ಪಾಲಿಕೆ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

ಸುಪ್ರೀಂಕೋರ್ಟ್ ಆದೇಶದಂತೆ ಈ ಸಂಸ್ಥೆಗಳ ಆವರಣದಲ್ಲಿ ಬೀದಿ ನಾಯಿಗಳ ಉಪಟಳ ತಡೆಯುವುದು, ಅವುಗಳನ್ನು ಸ್ಥಳಾಂತರಿಸುವುದು. ಬೀದಿ ನಾಯಿಗಳ ಪ್ರವೇಶ ನಿರ್ಬಂಧಿಸಲು ಸದರಿ ಸಂಸ್ಥೆಗಳು ಒಬ್ಬ ಜವಾಬ್ದಾರಿಯುತ ನೌಕರರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಬೇಕು. ಒಂದು ವೇಳೆ ಈ ಸಂಸ್ಥೆಗಳ ಆವರಣದಲ್ಲಿ ಬೀದಿ ನಾಯಿಗಳು ವಾಸ ಮಾಡಲು ಅವಕಾಶ ಕೊಟ್ಟರೆ ಸುಪ್ರೀಂ ಕೋರ್ಟ್ ಆದೇಶದಂತೆ ಬೀದಿ ನಾಯಿಗಳನ್ನು ಸ್ಥಳಾಂತರಿಸುವ ವೆಚ್ಚವನ್ನು ಸದರಿ ಸಂಸ್ಥೆಗಳಿಂದಲೇ ವಸೂಲಿ ಮಾಡಲಾಗುವುದು. ಸುಪ್ರೀಂಕೋರ್ಟ್ ಆದೇಶ ಉಲ್ಲಂಘಿಸಿದರೆ ಕಾನೂನು ಕ್ರಮ ವಹಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಟಿಎಂ ಮಷಿನ್ ಡೋರ್ ಅರ್ಧಂಬರ್ಧ ತೆರೆದಿರುವುದ ಕಂಡು ಗ್ರಾಹಕರು ಆತಂಕ!

ಮೈಸೂರು, ನ.19(ಎಸ್‌ಪಿಎನ್)– ಮೈಸೂರು ಹೆಬ್ಬಾಳ ಒಂದನೇ ಹಂತದ ಕಾವೇರಿ ವೃತ್ತದಲ್ಲಿರುವ ಕರ್ನಾಟಕ ಬ್ಯಾಂಕ್‌ನ ಎಟಿಎಂ ಮಷಿನ್‌ನ ಡೋರ್ ಸರಿಯಾಗಿ ಮುಚ್ಚದೇ ಇಲ್ಲಿನ ಸಿಬ್ಬಂದಿ ನಿರ್ಲಕ್ಷ್ಯ ವಹಿಸಿದ್ದು, ಜನ ಬೆಚ್ಚಿಬಿದ್ದಿದ್ದಾರೆ.


ಕರ್ನಾಟಕ ಬ್ಯಾಂಕ್‌ಗೆ ಸೇರಿದ ಎಟಿಎಂ

ಬುಧವಾರ ಸಂಜೆ 5.30ರ ಸಮಯದಲ್ಲಿ ತಮ್ಮ ಖಾತೆಯಿಂದ ಹಣ ಡ್ರಾ ಮಾಡಲು ಕಾವೇರಿ ವೃತ್ತದ ಸಮೀಪದ ಕರ್ನಾಟಕ ಬ್ಯಾಂಕ್‌ನ ಎಟಿಎಂ ಬಳಿ ಹೆಬ್ಬಾಳ ನಿವಾಸಿ ವಿರೂಪಾಕ್ಷಪ್ಪ ಬಂದಿದ್ದಾರೆ. ಈ ವೇಳೆ ಎಟಿಎಂ ಮುಂಭಾಗದ ಡೋರ್ ಓಪನ್ ಆಗಿರುವುದನ್ನು ಕಂಡು ಆತಂಕಗೊಂಡು ಬ್ಯಾಂಕ್ ಸಿಬ್ಬಂದಿಗೆ, ಹೆಬ್ಬಾಳ ಪೊಲೀಸ್ ಠಾಣೆಗೆ ಹಾಗೂ 'ಮೈಸೂರು ಮಿತ್ರ'ನಿಗೆ ಕರೆ ಮಾಡಿ, ಇಲ್ಲಿನ ಲೋಪವನ್ನು ವಿವರಿಸಿದರು.

ಎಟಿಎಂ ನಿರ್ವಹಣೆ ಮಾಡುವ ಸಿಬ್ಬಂದಿ, ನಾನು ಎಟಿಎಂಗೆ ಹೋಗುವ ಮೊದಲು ಬಂದು ಹೋಗಿರಬಹುದು. ಲಕ್ಷಾಂತರ ರೂ. ವ್ಯವಹಾರ ನಡೆಸುವ ಬ್ಯಾಂಕ್ ಸಿಬ್ಬಂದಿ ಎಟಿಎಂಗೆ ಹಣ ತುಂಬಲು ಇಲ್ಲವೇ ತಾಂತ್ರಿಕ ದೋಷವಿದ್ದರೆ ಸರಿಪಡಿಸಲು ಬಂದಿದ್ದಾರೆ. ಹೀಗೆ ಬಂದವರು ತಮ್ಮ ಕೆಲಸ ಮುಗಿದ ಮೇಲೆ ಎಟಿಎಂ ಬಾಗಿಲು ಹಾಕಿ, ಭದ್ರಪಡಿಸಿ ಹೋಗಬೇಕಿತ್ತು. ಆತುರವಾಗಿ ಕೆಲಸ ಮುಗಿಸಿ, ಎಟಿಎಂ ಬಾಗಿಲು ಹಾಕದೇ ಹೋಗಿರುವುದು ಸಿಬ್ಬಂದಿಯ ಕರ್ತವ್ಯ ಲೋಪ ಎಂದು ಆರೋಪಿಸಿದರು.

ಇನ್ನು ಮುಂದಾದರೂ ಬ್ಯಾಂಕ್ ಸಿಬ್ಬಂದಿ ಹಣಕಾಸಿನ ವಿಚಾರದಲ್ಲಿ ಬ್ಯಾಂಕ್ ಸಿಬ್ಬಂದಿ ಎಷ್ಟು ಎಚ್ಚರವಹಿಸಿದರೂ ಸಾಲದು. ಆದರೆ, ಕರ್ನಾಟಕ ಬ್ಯಾಂಕ್ ಸಿಬ್ಬಂದಿ ಎಟಿಎಂ ಭದ್ರತೆ ಕುರಿತು ನಿರ್ಲಕ್ಷ್ಯವಹಿಸಿರುವುದು ಆತಂಕದ ವಿಷಯ ಎಂದರು.

ನಿಧನ

ಪಿ. ರುಕ್ಮಿಣಿ



ಮೈಸೂರು, ನ. 19– ಮೈಸೂರು ಹೆಬ್ಬಾಳು ಬಡಾವಣೆಯ ಲಕ್ಷ್ಮೀಕಾಂತನಗರ ನಿವಾಸಿ ಪಿ. ರುಕ್ಮಿಣಿ(79) ಅವರು ನಿನ್ನೆ (ನ.18) ಸಂಜೆ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗದವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಚೇಗೌಡನಕೊಪ್ಪಲು ರುದ್ರಭೂಮಿಯಲ್ಲಿ ಇಂದು ಬೆಳಗ್ಗೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಡುವಂಡ ಪಾರ್ವತಿ ಚಿಯ್ಯಣ್ಣ



ಮೈಸೂರು: ಮೈಸೂರು ರಾಘವೇಂದ್ರನಗರ ನಿವಾಸಿ, ದಿವಂಗತ ಮಂಡುವಂಡ ಚಿಯ್ಯಣ್ಣ ಅವರ ಪತ್ನಿ, ಮಂಡುವಂಡ ಪಾರ್ವತಿ ಚಿಯ್ಯಣ್ಣ (ಪಾಲಿ–83) ಅವರು ಇಂದು ರಾತ್ರಿ ನಿಧನರಾದರು. ಮೃತರು ಮೂವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಗುರುವಾರ) ಮಧ್ಯಾಹ್ನ 1 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲು ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರು ಮೂಲತಃ ಬಿಲಿಗ್ರಿ ಗ್ರಾಮದವರು. (ಮೊಬೈಲ್: 9449818552, 9449703428)

ಸಿಲಿಕಾನ್ ಸಿಟಿ ಬೆಂಗಳೂರಿಗೆ ಟನಲ್ ರಸ್ತೆ ಅತ್ಯವಶ್ಯವಿದೆ

ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಭಾರತೀಯ ಇಂಜಿನಿಯರ್‌ಗಳ ಸಂಸ್ಥೆ ಮನವರಿಕೆ

ಮೈಸೂರು, ನ.19(ಬಿಎಲ್‌ಯು)– ಸಿಲಿಕಾನ್ ಸಿಟಿ ಬೆಂಗಳೂರಿನ ವಾಹನ ದಟ್ಟಣೆ ನಿವಾರಣೆಗೆ ಟನಲ್ ರಸ್ತೆ (ಸುರಂಗ ಮಾರ್ಗ) ಅಗತ್ಯವಿದೆ ಎಂದು ಭಾರತೀಯ ಇಂಜಿನಿಯರ್‌ಗಳ ಸಂಸ್ಥೆ (ಐಐಇ) ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವರಿಕೆ ಮಾಡಿಕೊಟ್ಟಿದೆ.


ಬೆಂಗಳೂರಿನಲ್ಲಿ ಟನಲ್ ರಸ್ತೆ ನಿರ್ಮಾಣದ ಅಗತ್ಯತೆ ಕುರಿತು ಭಾರತೀಯ ಇಂಜಿನಿಯರ್‌ಗಳ ಸಂಸ್ಥೆ ಕಾರ್ಯದರ್ಶಿ ಎಂ.ಲಕ್ಷ್ಮಣ್ ನೇತೃತ್ವದ ಇಂಜಿನಿಯರ್‌ಗಳ ನಿಯೋಗ ಬುಧವಾರ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ವರದಿ ಸಲ್ಲಿಸಿತು.

ಬೆಂಗಳೂರಿನ ಅಲಿ ಆಸ್ಕರ್ ರಸ್ತೆಯಲ್ಲಿ ಇಂದು ನಡೆದ ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ಕಾರ್ಯಕ್ರಮದ ವೇಳೆ ಸಂಸ್ಥೆಯ ಕಾರ್ಯದರ್ಶಿ ಎಂ.ಲಕ್ಷ್ಮಣ್ ಅವರು ಟನಲ್ ರಸ್ತೆ ನಿರ್ಮಾಣ ಮಾಡುವಂತೆ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಮಾಡಿದರು.

ಬೆಂಗಳೂರಿನಲ್ಲಿ ಟನಲ್ ರಸ್ತೆ ನಿರ್ಮಾಣಕ್ಕೆ ಪ್ರತಿ ಕಿಲೋ ಮೀಟರ್‌ಗೆ 1,500 ಕೋಟಿ ವೆಚ್ಚವಾಗುತ್ತದೆ ಎಂದು ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ ವಾಸ್ತವವಾಗಿ ಪ್ರತಿ ಕಿಲೋ ಮೀಟರ್‌ಗೆ 440 ಕೋಟಿ ಖರ್ಚಾಗುತ್ತದೆ ಎಂದು ತಿಳಿಸಿದರು. ಬೆಂಗಳೂರಿನ ಸಂಚಾರ ದಟ್ಟಣೆ ನಿವಾರಣೆ ಮಾಡಲು ರೂಪಿಸಿರುವ ಟನಲ್ ರಸ್ತೆ ನಿರ್ಮಾಣ ಯೋಜನೆ ಸಾಕಾರಗೊಳ್ಳಬೇಕು. ಇದಕ್ಕೆ ನಮ್ಮ ಸಂಸ್ಥೆ ನಿಮ್ಮ ಪರವಾಗಿ ನಿಲ್ಲಲಿದೆ. ಯಾವುದೇ ಸಮಯದಲ್ಲಿ ಕರೆದರೂ ಇಂಜಿನಿಯರ್‌ಗಳಾದ ನಾವು ಸರ್ಕಾರಕ್ಕೆ ಸಲಹೆ ನೀಡಲು ಸಿದ್ಧ ಎಂದು ಲಕ್ಷ್ಮಣ್ ಭರವಸೆ ನೀಡಿದರು. ಈ ವೇಳೆ ಟನಲ್ ರಸ್ತೆಯಿಂದ ಏನೆಲ್ಲಾ ಉಪಯೋಗ ಆಗಲಿದೆ ಎಂಬ ಬಗ್ಗೆ ತಯಾರಿಸಿರುವ ವಿಸ್ತೃತ ತಾಂತ್ರಿಕ ವರದಿಯನ್ನು ಲಕ್ಷ್ಮಣ್ ಅವರು ಡಿ.ಕೆ.ಶಿವಕುಮಾರ್ ಅವರಿಗೆ ಸಲ್ಲಿಸಿದರು.

ಬೈಕ್ ಡಿಕ್ಕಿ; ಗಾಯಗೊಂಡಿದ್ದ ಪಾದಚಾರಿ ಸಾವು

ಮೈಸೂರು, ನ.19(ಪಿಎಂ)– ಬೈಕ್ ಡಿಕ್ಕಿ ಹೊಡೆದು ವ್ಯಕ್ತಿಯೊಬ್ಬರು ಮೃತ ಪಟ್ಟಿರುವ ಸಂಬಂಧ ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀರಂಗಪಟ್ಟಣ ತಾಲೂಕಿನ ಚಿನ್ನಹಳ್ಳಿ ಬೋರೆ ಗ್ರಾಮದ ಬಾಲಾಜಿ ಅಲಿಯಾಸ್ ಕೃಷ್ಣಪ್ಪ (51) ಮೃತಪಟ್ಟವರು. ಬಾಲಾಜಿ ಅವರು ಕಬ್ಬು ಕಡಿಯುವ ಕೆಲಸ ಮಾಡಿಕೊಂಡಿದ್ದು, ಕೆಲಸಕ್ಕಾಗಿ ಮೈಸೂರು ತಾಲೂಕಿನ ದುದ್ದಗೆರೆ ಗ್ರಾಮಕ್ಕೆ ಬಂದಿದ್ದರು. ನ.14ರಂದು ದುದ್ದಗೆರೆ–ಲಕ್ಷ್ಮೀಪುರಂ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಅವರಿಗೆ ಹಿಂದಿನಿಂದ ಬೈಕ್ ಡಿಕ್ಕಿ (ಕೆಎ–55, ಇಸಿ 8112) ಹೊಡೆದು ಗಾಯಗೊಂಡಿದ್ದರು. ಬಳಿಕ ಮೈಸೂರು ಕೆಆರ್ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೇ ನ.15ರಂದು ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ಬೈಕ್ ಸವಾರನ ಅತಿವೇಗದ ಚಾಲನೆಯೇ ಈ ದುರ್ಘಟನೆಗೆ ಕಾರಣವೆಂದು ಮೃತ ಬಾಲಾಜಿ ಯವರ ಪುತ್ರಿ ಸರಳಾ ನೀಡಿರುವ ದೂರಿನನ್ವಯ ಪ್ರಕರಣ ದಾಖಲಾಗಿದೆ.

ನಂಬರ್ ಪ್ಲೇಟ್ ಮರೆಮಾಚಿ ಬೈಕ್ ಚಾಲನೆ; ಮಾಲೀಕನ ವಿರುದ್ಧ ಪ್ರಕರಣ ದಾಖಲು

ಮೈಸೂರು,ನ.19(ಪಿಎಂ)– ನಂಬರ್ ಪ್ಲೇಟ್ ಮರೆಮಾಚಿ ಬೈಕ್ ಚಾಲನೆ ಮಾಡುತ್ತಿದ್ದ ಸಂಬಂಧ ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ನಗರದ ಕೃಷ್ಣರಾಜ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಏಕಲವ್ಯ ವೃತ್ತದ ಬಳಿ ಬೈಕ್‌ನ ನಂಬರ್ ಪ್ಲೇಟ್‌ನಲ್ಲಿ ನೋಂದಣಿ ಸಂಖ್ಯೆ ಅರ್ಧ ಭಾಗವನ್ನು ಮರೆಮಾಚಿ ವಾಹನ ಚಾಲನೆ ಮಾಡುತ್ತಿರುವ ಬಗ್ಗೆ ದೂರು ಬಂದ ಮೇರೆಗೆ ಪರಿಶೀಲನೆ ಮಾಡಿದಾಗ, ಕೆಎ–09, ಜೆವೈ–0275 ಎಂಬ ನೋಂದಣಿ ಸಂಖ್ಯೆಯ ಬೈಕ್ ಎಂಬುದು ಬೆಳಕಿಗೆ ಬಂದಿತು.


ಸಂಚಾರ ನಿಯಮ ಉಲ್ಲಂಘನೆ ಮಾಡಿದಾಗ ಕ್ಯಾಮರಾದಲ್ಲಿ ಅದು ರಿಕಾರ್ಡ್ ಆಗಿ ದಂಡ ಬೀಳುವುದನ್ನು ತಪ್ಪಿಸಿಕೊಳ್ಳಲು ಸದರಿ ವಾಹನದ ಮಾಲೀಕರು ನಂಬರ್ ಪ್ಲೇಟ್‌ಗೆ ಟಿಶ್ಯೂ ಪೇಪರ್ ಮುಚ್ಚಿ ಚಾಲನೆ ಮಾಡುತ್ತಿದ್ದರು. ಅವರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ನ.23, ಮೈಸೂರಲ್ಲಿ ಕೃಷ್ಣ ತಿಪ್ಪೂರರ 'ಅಮೃತ ರಾಮಾಯಣ' ಮಹಾಕಾವ್ಯದ ಎರಡು ಸಂಪುಟಗಳ ಬಿಡುಗಡೆ

ಮೈಸೂರು,ನ.19(ಜಿಎ)–ವಾಸವಿ ಪ್ರಕಾಶನ ಮತ್ತು ತಿಪ್ಪೂರಿನ ಮಿತ್ರ ಕೂಟಗಳ ವತಿಯಿಂದ ನ.23ರಂದು ಬೆಳಗ್ಗೆ 10.30ಕ್ಕೆ ಮಾನಸಗಂಗೋತ್ರಿ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಕವಿ ಕೃಷ್ಣ ತಿಪ್ಪೂರು ಅವರ 'ಅಮೃತ ರಾಮಾಯಣ' ಮಹಾಕಾವ್ಯದ 2 ಸಂಪುಟಗಳ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಈ ವಿಷಯ ತಿಳಿಸಿ, ಕವಿ ಕೃಷ್ಣ ತಿಪ್ಪೂರು ಗ್ರಾಮೀಣ ಪ್ರದೇಶದವರಾಗಿದ್ದು, ಇದುವರೆಗೂ ಹಲವಾರು ಕೃತಿ ರಚಿಸಿದ್ದಾರೆ. ಅಂದು ಇವರ ಮಹಾಕಾವ್ಯ ಸಂಪುಟಗಳು ಬಿಡುಗಡೆಯಾಗಲಿವೆ. ಬೇಬಿ ಮಠದ ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್ ಕೃತಿ ಬಿಡುಗಡೆಗೊಳಿಸುವರು. ಶಾಸಕ ಟಿ.ಎಸ್.ಶ್ರೀವತ್ಸ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಡಿ.ರವಿಶಂಕರ್ ಅಧ್ಯಕ್ಷತೆ ವಹಿಸುವರು. ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಆಶಯ ನುಡಿ ಆಡಲಿದ್ದಾರೆ. ಕೃತಿ ಕುರಿತು ಕರ್ನಾಟಕ ಮುಕ್ತ ವಿವಿಯ ಅಕ್ಕಮಹಾದೇವಿ ಸಂಶೋಧನ–ವಿಸ್ತರಣಾ ಪೀಠದ ನಿರ್ದೇಶಕಿ ಪ್ರೊ.ಕವಿತಾ ರೈ ಮಾತನಾಡುವರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಾಹಿತ್ಯ ಅಕಾಡೆಮಿ ಸದಸ್ಯ ಡಾ.ಚೆಲ್ಕರಾಗಿ, ವಾಸವಿ ಯುವಜನ ಸಂಘದ ಅಧ್ಯಕ್ಷ ಬಿ.ನಾಗೇಶ್ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಕವಿ ಕೃಷ್ಣ ತಿಪ್ಪೂರು, ಮಂಜುನಾಥ ಗುಪ್ತ ಇದ್ದರು.

ಅಂತರ್ಜಾತಿ ವಿವಾಹಕ್ಕೆ ಹಲವರ ಶುಭ ಹಾರೈಕೆ



ಮೈಸೂರಿನ ಬುದ್ಧ ವಿಹಾರದಲ್ಲಿ ಬುಧವಾರ ಅಂತರ್ಜಾತಿ ವಿವಾಹ ನಡೆಸಲಾಯಿತು.

ಮೈಸೂರು, 19(ಎಂಕೆ)– ಮೈಸೂರಿನ ಬಲ್ಲಾಳ ವೃತ್ತದ ಸಮೀಪದಲ್ಲಿರುವ ಬುದ್ಧ ವಿಹಾರದಲ್ಲಿ ಕರ್ನಾಟಕ ಸಂವಿಧಾನ ಸಂರಕ್ಷಣಾ ಸಮಿತಿ ಸಹಯೋಗದೊಂದಿಗೆ ಬುಧವಾರ ಅಂತರ್ಜಾತಿ ವಿವಾಹ ನಡೆಸಲಾಯಿತು.

ನಾಲ್ಕು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದ ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಹೋಬಳಿಯ ಹರದನಹಳ್ಳಿ ಗ್ರಾಮದ ಶಿವಚಂದ್ರ ಮತ್ತು ಸಿಂಚನ ದಾಂಪತ್ಯ ಜೀವನಕ್ಕೆ ಪಾದಾರ್ಪಣೆ ಮಾಡಿದರು. ಮಾಜಿ ಮೇಯರ್ ಪುರುಷೋತ್ತಮ್ ಬೌದ್ಧ ಧರ್ಮದ ಸಂಪ್ರದಾಯದಂತೆ ವಿವಾಹ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಬಳಿಕ ಕರ್ನಾಟಕ ಸಂವಿಧಾನ ಸಂರಕ್ಷಣಾ ಸಮಿತಿ ಅಧ್ಯಕ್ಷ ಎನ್.ಭಾಸ್ಕರ್ ಮಾತನಾಡಿ, ಶಿವಚಂದ್ರ ಮತ್ತು ಸಿಂಚನ ಪರಸ್ಪರ ಮೆಚ್ಚಿ ಸತಿಪತಿಗಳಾಗಿದ್ದಾರೆ. ನವ ದಂಪತಿಗಳಿಬ್ಬರು ಅನ್ಯೋನ್ಯವಾಗಿ ಜೀವನ ನಡೆಸಬೇಕು. ಈ ನಿಟ್ಟಿನಲ್ಲಿ ಸಮಿತಿ ವತಿಯಿಂದ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು. ವರನ ಪೋಷಕರಾದ ಸೋಮೇಶ್ ಮತ್ತು ಜ್ಯೋತಿ, ಮುಖಂಡರಾದ ಅನಂತನಾಗ್, ಎಂ.ಕುಮಾರಸ್ವಾಮಿ, ಇಕ್ಬಾಲ್, ಗಂಗಾಧರ, ಚಂದ್ರ, ಮೂರ್ತಿ, ಶೇಖರ್ ಮತ್ತಿತರರು ವಧು–ವರರಿಗೆ ಶುಭ ಕೋರಿದರು.

ಮೈಸೂರು ಮಿತ್ರ ಗುರುವಾರ 20 ನವೆಂಬರ್ 2025

ಡಿ.4, ಹುತ್ತರಿಹಬ್ಬ ಆಚರಣೆಗೆ ತೀರ್ಮಾನ

ನಾಪೋಕ್ಲು, ನ.19 (ದುಗ್ಗಳ)– ಧಾನ್ಯಲಕ್ಷ್ಮಿಯನ್ನು ಬರಮಾಡಿಕೊಳ್ಳುವ ಕೊಡಗಿನ ಹುತ್ತರಿ ಹಬ್ಬವನ್ನು ಡಿಸೆಂಬರ್ 4 ರಂದು ಆಚರಿಸಲು ನಿರ್ಧರಿಸಲಾಯಿತು. ಸಮೀಪದ ಕಕ್ಕಬೆ ಪಾಡಿ ಶ್ರೀ ಇಗ್ಗುತ್ತಪ್ಪ ಸನ್ನಿಧಿಯಲ್ಲಿ ಬುಧವಾರ ಜ್ಯೋತಿಷ್ಯದ ಪ್ರಕಾರ ದಿನ ನಿಗದಿ ಮಾಡಲಾಯಿತು.

ಕಕ್ಕಬೆ-ಕುಂಜಿಲ ಗ್ರಾಮ ಪಂಚಾಯಿತಿಯ ಪಾಡಿ ಶ್ರೀ ಇಗ್ಗುತ್ತಪ್ಪ ಸನ್ನಿಧಿಯಲ್ಲಿ ದೇವಾಲಯದ ತಕ್ಕ ಮುಖ್ಯಸ್ಥರು, ವ್ಯವಸ್ಥಾಪನಾ ಸಮಿತಿ ಪ್ರಮುಖರ ಹಾಗೂ ಭಕ್ತರ ಸಮ್ಮುಖದಲ್ಲಿ ಅಮ್ಮಂಗೇರಿ ಜ್ಯೋತಿಷಿ ಶಶಿಕುಮಾರ್ ಜ್ಯೋತಿಷ್ಯದ ಪ್ರಕಾರ ರಾಶಿ ಫಲ ಪರಿಶೀಲಿಸಿ ದಿನ ನಿಗಧಿ ಮಾಡಿದರು. ಅದರಂತೆ ಪಾಡಿ ಶ್ರೀ ಇಗ್ಗುತಪ್ಪ ಸನ್ನಿಧಿಯಲ್ಲಿ ಡಿ.4 ರಂದು ಗುರುವಾರ ರೋಹಿಣಿ ನಕ್ಷತ್ರದ ಹುಣ್ಣಿಮೆಯ ದಿನ ಹುತ್ತರಿ ಹಬ್ಬ ಆಚರಣೆ. ರಾತ್ರಿ 8.10 ಗಂಟೆಗೆ ನೆರೆ ಕಟ್ಟುವುದು, ರಾತ್ರಿ 9.10 ಗಂಟೆಗೆ ಕದಿರು ತೆಗೆಯುವುದು. ಅನ್ನಪ್ರಾಸದಕ್ಕೆ 10.10 ಗಂಟೆಗೆ ಮುಹೂರ್ತ ನಿಗಧಿಪಡಿಸಲಾಯಿತು. ಸಾರ್ವಜನಿಕರಿಗೆ ರಾತ್ರಿ 8.40 ಗಂಟೆಗೆ ನೆರೆ ಕಟ್ಟುವುದು, ರಾತ್ರಿ 9.40 ಗಂಟೆಗೆ ಕದಿರು ತೆಗೆಯುವುದು, ಭೋಜನಕ್ಕೆ ರಾತ್ರಿ 10.40 ಗಂಟೆಗೆ ಮುಹೂರ್ತ ನಿಗದಿಪಡಿಸಲಾಯಿತು.



ಕಕ್ಕಬ್ಬೆಯ ಶ್ರೀ ಪಾಡಿ ಇಗ್ಗುತಪ್ಪ ದೇವಾಲಯದಲ್ಲಿ ನಡೆದ ಸಭೆಯಲ್ಲಿ ಹುತ್ತರಿ ಹಬ್ಬಕ್ಕೆ ಮುಹೂರ್ತ ನಿಗದಿಪಡಿಸುತ್ತಿರುವುದು

ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ, ವೇಳಾಪಟ್ಟಿಯನ್ನು ಬಿಡುಗಡೆಗೊಳಿಸಿ ಮಾಹಿತಿ ನೀಡಿ ಪುತ್ತರಿ ಹಬ್ಬದ ಆಚರಣೆ ಹಿರಿಯರ ಕಾಲದಿಂದ ಆಚರಿಸಿಕೊಂಡು ಬಂದ ಆಚರಣೆಯನ್ನು ಯಥಾವತ್ತಾಗಿ ಪಾಲಿಸಿ, ಧಾನ್ಯಲಕ್ಷ್ಮಿಯನ್ನು ಮನೆಗೆ ಕರೆತರುವ ಹಬ್ಬವನ್ನು ಎಲ್ಲರೂ ನಿಗದಿ ಪಡಿಸಿದ ಸಮಯದಲ್ಲೇ ಆಚರಿಸುವಂತಾಗಬೇಕು. ದೇಶಕಟ್ಟನ್ನು ಎಲ್ಲರೂ ಪಾಲಿಸಬೇಕು ಎಂದರು.

ಜ್ಯೋತಿಷ್ಯ ಶಶಿಕುಮಾರ್, ಕಣಿಯರ ನಾಣಯ್ಯ ಕುಟುಂಬದವರು ಜ್ಯೋತಿಷ್ಯದ ಪ್ರಕಾರ ರಾಶಿ ಫಲ ಪರಿಶೀಲಿಸಿ ದಿನ ನಿಗಧಿ ಮಾಡಿದ ಬಳಿಕ ದೇವತಕ್ಕರಾದ ಪರದಂಡ ಸುಬ್ರಮಣಿ ಕಾವೇರಪ್ಪ ದೇವರ ಸನ್ನಿಧಿಯಲ್ಲಿ ಪ್ರಾರ್ಥನೆ ಸಲ್ಲಿಸಿ ಆನಂತರ ದಿನ ನಿಗದಿ ಪಟ್ಟಿಗೆ ವಿಶೇಷ ಪ್ರಾರ್ಥನೆಯ ಮೂಲಕ ಅರ್ಚಕರಿಗೆ ನೀಡಿ ಅರ್ಚಕ ಜಗದೀಶ್ ಅವರು ಪೂಜೆ ನೆರವೇರಿಸಿ ತೀರ್ಥ ಪ್ರಸಾದ ನೀಡುವುದರ ಮೂಲಕ ತಕ್ಕ ಮುಖ್ಯಸ್ಥರಿಗೆ ಹಸ್ತಾಂತರಿಸಿದರು. ದೇವಾಲಯದ ಆಡಳಿತ ಅಧಿಕಾರಿ ರವಿಕುಮಾರ್ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಬಾಚಮಂಡ ರಾಜ ಪುವಣ್ಣ ಸಮಿತಿ ಪದಾಧಿಕಾರಿಗಳು ಹಾಗೂ ಸದಸ್ಯರು, ಸಿಬ್ಬಂದಿಗಳು, ಪ್ರಮುಖರಾದ ಕಲ್ಯಾಟಂಡ ಮುತ್ತಪ್ಪ, ಕಾಂಡ ಜೋಯಪ್ಪ, ಪಾಂಡಂಡ ನರೇಶ್, ತಕ್ಕ ಮುಖ್ಯಸ್ಥರು ಹಾಗೂ ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.


ಇಂದು ನವಜಾತಶಿಶು ಆರೈಕೆ ಸಪ್ತಾಹ

ಮಡಿಕೇರಿ: ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮ ದಡಿಯಲ್ಲಿ ಮಕ್ಕಳ ವಿಭಾಗದಿಂದ ನ.20ರ ಬೆಳಿಗ್ಗೆ 10.30 ಗಂಟೆಗೆ ನವ ಜಾತ ಶಿಶು ಆರೈಕೆ ಸಪ್ತಾಹ ಹಾಗೂ ಸೈನ್ಸ್ (ಎಸ್‌ಎಎಎನ್‌ಎಸ್) ಕಾರ್ಯಕ್ರಮ ನಡೆಯಲಿದೆ. ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧಕ ಆಸ್ಪತ್ರೆಯ ಮಕ್ಕಳ ಹೊರ ರೋಗಿ ವಿಭಾಗದ ಮುಂಭಾಗದಲ್ಲಿ ನಡೆಯಲಿದೆ ಎಂದು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಮಕ್ಕಳ ವಿಭಾಗದ ಪ್ರಾಧ್ಯಾಪಕರು ಮತ್ತು ವಿಭಾಗ ಮುಖ್ಯಸ್ಥರು ತಿಳಿಸಿದ್ದಾರೆ.

ಇಂದು ನಗರಸಭೆ ಸಾಮಾನ್ಯ ಸಭೆ

ಮಡಿಕೇರಿ: ನಗರಸಭೆ ಕೌನ್ಸಿಲ್‌ನ ಸಾಮಾನ್ಯ ಸಭೆಯು ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಅಧ್ಯಕ್ಷತೆಯಲ್ಲಿ ನ.20ರ ಬೆಳಗ್ಗೆ 11ಗಂಟೆಗೆ ನಗರಸಭಾ ಕೌನ್ಸಿಲ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಮಡಿಕೇರಿ ನಗರಸಭೆ ಪೌರಾಯುಕ್ತ ಎಚ್.ಆರ್.ರಮೇಶ್ ತಿಳಿಸಿದ್ದಾರೆ.

ಮಿನಿ ಲಾರಿ ಮಗುಚಿ ಅಗ್ನಿಗೆ ಆಹುತಿ



ಅಗ್ನಿಗೆ ಆಹುತಿಯಾದ ಲಾರಿ

ಮಡಿಕೇರಿ, ನ.19–ಚಾಲಕನ ನಿಯಂತ್ರಣ ಕಳೆದುಕೊಂಡ ಲಾರಿಯೊಂದು ಮಗುಚಿ ಬಿದ್ದು, ಬೆಂಕಿ ಹೊತ್ತಿಕೊಂಡು ಸುಟ್ಟು ಹೋದ ಘಟನೆ ಗ್ರಾಮಾಂತರ ಠಾಣೆಯ ಮದೆನಾಡು ಸಮೀಪದ ಅಬ್ಬಿಕೊಲ್ಲಿ ಬಳಿ ನಡೆದಿದೆ.

ಬೆಂಗಳೂರಿನಿಂದ ಪ್ರತಿಷ್ಠಿತ ಕಂಪೆನಿಯ ತಂಪು ಪಾನೀಯ ತಯಾರಿಕೆಗೆ ಬಳಸುವ ರಾಸಾಯನಿಕ ವಸ್ತುವನ್ನು ಹೊತ್ತ ಮಿನಿ ಲಾರಿ(ಕೆಎ.01–ಎಪಿ.0548) ಮಡಿಕೇರಿ–ಮಾಣಿ ರಾಷ್ಟ್ರೀಯ ಹೆದ್ದಾರಿ 275 ಮೂಲಕ ಮದೆನಾಡು ಮಾರ್ಗವಾಗಿ ಮಂಗಳೂರು ಕಡೆಗೆ ತೆರಳುತ್ತಿತ್ತು. ಮದೆನಾಡು ಸಮೀಪದ ಅಬ್ಬಿಕೊಲ್ಲಿ ತಿರುವಿನಲ್ಲಿ ಲಾರಿ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ಬದಿಗೆ ಮಗುಚಿ ಬಿದ್ದಿದೆ. ಇಂಜಿನ್ ಬಳಿ ಬೆಂಕಿ ಕಾಣಿಸಿಕೊಂಡ ಕೂಡಲೇ ಚಾಲಕ ಹೊರ ಬಂದು ಅಪಾಯದಿಂದ ಪಾರಾಗಿದ್ದಾರೆ.

ಸಾರ್ವಜನಿಕರು ಕೊಲ್ಲಿಯಿಂದ ಪೈಪ್ ಮೂಲಕ ನೀರು ಸುರಿದು ಲಾರಿಯ ಬೆಂಕಿಯನ್ನು ತಹಬದಿಗೆ ತಂದಿದ್ದಾರೆ. ಆದರೆ ಲಾರಿಯ ಮುಂದಿನ ಚಕ್ರ, ಕ್ಯಾಬಿನ್ ಮತ್ತು ಇತರ ಭಾಗಗಳಿಗೆ ಬೆಂಕಿಯಿಂದ ತೀವ್ರ ಹಾನಿಯಾಗಿದೆ. ಘಟನೆ ಅರಿತು ಅಗ್ನಿಶಾಮಕ ದಳ ಸ್ಥಳಕ್ಕೆ ತೆರಳಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿತು. ಗ್ರಾಮಾಮತರ ಪೊಲೀಸರು ದೂರು ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಸರಕಾರಿ ಪ್ರಥಮ ದರ್ಜೆ ಕಾಲೇಜಲ್ಲಿ ಕರುನಾಡ ಸಂಭ್ರಮ



ಕರುನಾಡ ಸಂಭ್ರಮವನ್ನು ಲೇಖಕ ಗಣೇಶ್ ನಿಲವಾಗಿಲು ಉದ್ಘಾಟಿಸಿದರು.

ವಿರಾಜಪೇಟೆ,ನ.19–ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕರುನಾಡ ಸಂಭ್ರಮ ಹಾಗೂ ಲೇಖಕರೊಂದಿಗೆ ಸಂವಾದ ಕಾರ್ಯಕ್ರಮ ನಡೆಸಲಾಯಿತು.

ಉಪಖಜಾನೆಯ ಅಧೀಕ್ಷಕ ಗಣೇಶ್ ನಿಲವಾಗಿಲು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಸಿಹಿ ಮತ್ತು ಕಹಿ ಅನುಭವಗಳನ್ನು ಕತೆ–ಕವನಗಳಲ್ಲಿ ಅಭಿವ್ಯಕ್ತಿಸಿ, ಅಧ್ಯಯನದ ಮೂಲಕ ಅರಿವಿನ ವಿಸ್ತಾರ ಮಾಡಿಕೊಳ್ಳಬೇಕು ಎಂದರು. ಗಣೇಶ್ ರವರ "ಹುಣಸೂರಿನ ಅರಸು" ಎಂಬ ಕೃತಿಯ ಬಗ್ಗೆ ಸುಹೈರಾ ಮಾತನಾಡಿದರೆ, ಕೀರ್ತನ "ನೆಪೋಲಿಯನ್ ಬೋನೊಪಾರ್ಟ್" ಎಂಬ ನಾಟಕ ಕೃತಿಯನ್ನು ವಿಮರ್ಶಿಸಿದರು. ವಿದ್ಯಾರ್ಥಿಗಳಿಂದ ಪುಸ್ತಕದ ಕುರಿತು ಚರ್ಚೆ ಹಾಗೂ ಸಂವಾದ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲೆ ಡಾ. ಕೋರನ ಸರಸ್ವತಿಯವರು ಮಾತನಾಡಿ, ಸಾಹಿತ್ಯವು ಜೀವನದ ಗತಿಬಿಂಬ ಮತ್ತು ಪ್ರತಿಬಿಂಬವನ್ನು ಸೂಚಿಸುತ್ತದೆ. ನಿತ್ಯವೂ ನೂತನ ಅನುಭವಗಳನ್ನು ಆನಂದಿಸುವ ಮನುಷ್ಯ ಅದನ್ನು ಕಟ್ಟುವ ಪ್ರಜ್ಞೆ ಬೆಳೆಸಿಕೊಳ್ಳಬೇಕು ಎಂದರು. ವಿದ್ಯಾರ್ಥಿನಿ ನಿಹಾಲ ನಿರೂಪಣೆ ಮಾಡಿದರು. ನಿಶ್ಬಾ ಬಾನುರಿಂದ ಪ್ರಾರ್ಥನೆ, ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ|| ಕೆ.ಬಸವರಾಜ್ ಸ್ವಾಗತಿಸಿದರು. ಉಪನ್ಯಾಸಕ ಡಾ|| ಪ್ರಭು ವಂದನಾರ್ಪಣೆ ಮಾಡಿದರು

ವಿಶ್ವ ಪರಂಪರೆ ಸಪ್ತಾಹಕ್ಕೆ ಸಂಸದ ಯದುವೀರ್ ಚಾಲನೆ

ಮಡಿಕೇರಿ, ನ.19–ವಿಶ್ವ ಪರಂಪರೆ ಸಪ್ತಾಹ ಹಾಗೂ ಶಾಶ್ವತ ಛಾಯಾಚಿತ್ರ ಪ್ರದರ್ಶನ, ಗ್ಯಾಲರಿ ಸಹಿತ ವ್ಯಾಖ್ಯಾನ ಕೇಂದ್ರವನ್ನು ಸಂಸದ ಯದುವೀರ್ ಬುಧವಾರ ಚಾಲನೆ ನೀಡಿದರು. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಹಾಗೂ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ನಡೆಯುತ್ತಿರುವ ಪ್ರದರ್ಶನ ನ.25 ರವರೆಗೆ ನಡೆಯಲಿದೆ.

1600 ವರ್ಷಗಳ ಹಿಂದೆಯೇ ಕೊಡಗನ್ನು ಹಲವರು ಆಡಳಿತ ಮಾಡಿದ್ದು, ಇಲ್ಲಿನ ಇತಿಹಾಸ, ಪರಂಪರೆ ಮತ್ತು ಸಂಸ್ಕೃತಿ ಬಗ್ಗೆ ಪ್ರತಿಯೊಬ್ಬರೂ ತಿಳಿದುಕೊಳ್ಳುವಂತಾಗಬೇಕು. ನಗರದ ಕೋಟೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ಅನುದಾನ ಒದಗಿಸಲಾಗುವುದು. ಕೋಟೆಯನ್ನು ಶಾಶ್ವತ ಪಾರಂಪರಿಕ ಕೇಂದ್ರವನ್ನಾಗಿ ಮಾಡುವಲ್ಲಿ ಎಲ್ಲಾ ರೀತಿಯ ಪ್ರಯತ್ನ ಮಾಡಲಾಗುವುದು ಎಂದು ಆಶ್ವಾಸನೆ ನೀಡಿದರು.

ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ, ನಗರದ ಕೋಟೆಯು ಬಹಳಷ್ಟು ಸುಧಾರಣೆಯಾಗಿದ್ದು, ಇನ್ನೂ ಸುಧಾರಣೆಯಾಗಬೇಕಿದೆ. ಒಳ ಆವರಣದಲ್ಲಿರುವ ಕಟ್ಟಡವನ್ನು ನಿಯಮಾನುಸಾರ ತೆರವುಗೊಳಿಸಲು ಕ್ರಮವಹಿಸಬೇಕು. ಪಾರಂಪರಿಕ ಕಟ್ಟಡದಲ್ಲಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುವಂತಾಗಬೇಕು. ಕೋಟೆಯನ್ನು ಅಭಿವೃದ್ಧಿ ಪಡಿಸುವಲ್ಲಿ ಎಲ್ಲರ ಸಲಹೆ, ಸಹಕಾರ ಅತ್ಯಗತ್ಯ ಎಂದರು.



ವಿಶ್ವ ಪರಂಪರೆ ಸಪ್ತಾಹ ಹಾಗೂ ಶಾಶ್ವತ ಛಾಯಾಚಿತ್ರ ಪ್ರದರ್ಶನವನ್ನು ಸಂಸದ ಯದುವೀರ್ ಉದ್ಘಾಟಿಸಿ, ವೀಕ್ಷಿಸಿದರು.

ಭಾರತೀಯ ಪುರಾತತ್ವ ಇಲಾಖೆಯ ಅಧೀಕ್ಷಕ ಸುಜಿತ್ ನಯನ್ ಮಾತನಾಡಿ, ರಾಜ್ಯ ಸರ್ಕಾರದಿಂದ 10 ಕೋಟಿ ರೂ. ಬಿಡುಗಡೆಯಾಗಿದ್ದು, ನವೀಕರಣ ಕಾಮಗಾರಿ ಕೈಗೊಳ್ಳಲಾಗಿದೆ, ಇದೊಂದು ಪಾರಂಪರಿಕ ಕಟ್ಟಡವಾಗಿ ಉಳಿಯಲಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಗತ್ಯ ಸಹಕಾರ ನೀಡಿದೆ ಎಂದು ಹೇಳಿದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ರಾಣಿ ಮಾಚಯ್ಯ ಮಾತನಾಡಿದರು. ಕೊಡವ ಸಮಾಜದ ತಂಡದವರಿಂದ ಉಮ್ಮತ್ತಾಟ್ ಕಲಾಪ್ರದರ್ಶನ ನಡೆಯಿತು. ಹಾಗೆಯೇ ಕಚ್ಚಿಮುಡಿ ಕೂಟದವರಿಂದ ಬಾಳೋಪಾಟ್, ಬೊಳಕಾಟ್ ಮತ್ತು ಕೋಲಾಟ ಕಲಾ ಪ್ರದರ್ಶನ ನಡೆಯಿತು. ಪುರಾತತ್ವ ಇಲಾಖೆ ಅಧೀಕ್ಷಕ ಡಾ.ಆರ್.ಎನ್.ಕುಮಾರನ್, ಸರ್ಕಾರಿ ವಸ್ತುಸಂಗ್ರಹಾಲಯದ ಕ್ಯೂರೇಟರ್ ಬಿ.ಪಿ.ರೇಖಾ, ನಗರಸಭೆ ಉಪಾಧ್ಯಕ್ಷ ಮಹೇಶ್ ಜೈನಿ, ಇತರರು ಇದ್ದರು.

ಡಿಐಸಿಗೆ ಮಾಜಿ ಅಧ್ಯಕ್ಷರ ನೇತೃತ್ವದ ಬಣ ಆಯ್ಕೆ



ಜಿಲ್ಲಾ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘಕ್ಕೆ ಆಯ್ಕೆಯಾದವರನ್ನು ಅಭಿನಂದಿಸಲಾಯಿತು.

ಮಡಿಕೇರಿ, ನ.19–ಜಿಲ್ಲಾ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘಕ್ಕೆ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಳಿಗೆ ಸಂಘದ ಮಾಜಿ ಅಧ್ಯಕ್ಷ ಸಿ.ವಿ.ನಾಗೇಶ್ ನೇತೃತ್ವದ 9 ನಿರ್ದೇಶಕರು ಆಯ್ಕೆಯಾಗಿದ್ದಾರೆ.

ಸಾಮಾನ್ಯ ಸ್ಥಾನದಿಂದ ಸಿ.ವಿ.ನಾಗೇಶ್, ಎ.ಜೇಕಬ್, ಬಿ.ಹೆಚ್. ಪ್ರದೀಪ್ ಕುಮಾರ್, ಮಹಿಳಾ ಮೀಸಲು ಸ್ಥಾನದಿಂದ ಪಿ.ಎನ್. ಅಶ್ವಿನಿ, ಲತಾಮಣಿ ಆರ್.ಸಿ. ಹಿಂದುಳಿದ ಪ್ರವರ್ಗ 'ಎ' ಸ್ಥಾನದಿಂದ ಜಿ.ಸಿ.ಜಗದೀಶ್, ಹಿಂದುಳಿದ ಪ್ರವರ್ಗ 'ಬಿ' ಸ್ಥಾನದಿಂದ ಬಿ.ಸಿ.ಜಾನಕಿ ಹಾಗೂ ಸದಸ್ಯ ಸಹಕಾರ ಸಂಘದಿಂದ ಆಶಾ ಚಿಣ್ಣಪ್ಪ, ಎಸ್.ವಿ.ಲೋಕಪ್ರಕಾಶ್ ಆಯ್ಕೆಯಾಗಿದ್ದಾರೆ ಎಂದು ಸಹಕಾರ ಸಂಘದ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಕೆ.ಎನ್.ರಶ್ಮಿರಾಣಿ ತಿಳಿಸಿದ್ದಾರೆ.

ಬಂದೂಕು ಹಕ್ಕುಗಳ ರಕ್ಷಣೆಗೆ ಬದ್ಧ : ಸಂಸದ



ಮಡಿಕೇರಿ: ಕೊಡವ ಸಮುದಾಯ ಹೊಂದಿರುವ ಬಂದೂಕು ಹಕ್ಕುಗಳ ರಕ್ಷಣೆಗೆ ತಾವು ಬದ್ಧವಾಗಿರುವುದಾಗಿ ಸಂಸದ ಯದುವೀರ್ ಸ್ಪಷ್ಟಪಡಿಸಿದ್ದಾರೆ.

ಕೊಡಗಿನ ಸಂಸ್ಕೃತಿ, ಪರಂಪರೆಗಳ ರಕ್ಷಣೆ ಶೇ.100ರಷ್ಟು ಮುಂದುವರೆಯುತ್ತದೆ. ಅದರ ಬಗ್ಗೆ ಯಾರಿಗೂ ಅನುಮಾನಬೇಡ ಎಂದು ಸುದ್ಧಿಗಾರರಿಗೆ ಹೇಳಿದರು.

ಕೊಡಗಿನ ಇತಿಹಾಸ ಮತ್ತು ಸ್ಥಳೀಯ ಜನರ ಪಾರಂಪರಿಕ ಹಕ್ಕುಗಳು ಮುಂದುವರೆಯುತ್ತಿದ್ದು, ಬಂದೂಕೂ ಹಕ್ಕು ಕೂಡ ಇದರ ಒಂದು ಭಾಗವಾಗಿದೆ. ಇದರ ರಕ್ಷಣೆ ಮಾಡುವ ವಿಚಾರದಲ್ಲಿ ತಾವುಗಳು ಸ್ಥಳೀಯರ ಜೊತೆಯಲ್ಲಿ ಇರುವುದಾಗಿ ಆಶ್ವಾಸನೆ ನೀಡಿದರು.

ಬಂದೂಕು ಹಕ್ಕುಗಳ ಕುರಿತು ಗೃಹ ಇಲಾಖೆ ತೀರ್ಮಾನ ತೆಗೆದುಕೊಳ್ಳುತ್ತದೆ. ಪರಂಪರೆಯ ರಕ್ಷಣೆಯ ಭಾಗವಾಗಿ ಉತ್ತಮ ಪರಿಹಾರ ಒದಗಿ ಸಲು ಎಲ್ಲಾ ಪ್ರಯತ್ನ ಮಾಡಲಾಗುವುದು. ಈ ಕುರಿತು ಗೃಹ ಇಲಾಖೆಯು ಮುಂದೆಯೂ ವಿಚಾರ ಮಂಡಿಸಲಾಗುತ್ತದೆ ಎಂದು ಭರವಸೆ ನೀಡಿದರು.

ಚಾ.ನಗರಕ್ಕೆ ಹೆಚ್ಚು ಬಾರಿ ಭೇಟಿ ನೀಡಿದ ಹೆಗ್ಗಳಿಕೆ

ಮೌಢ್ಯಕ್ಕೆ ತಿಲಾಂಜಲಿ ಹಾಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ





ಚಾಮರಾಜನಗರ, ನ.19–ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ (ಗುರುವಾರ) ಭೇಟಿ ನೀಡುತ್ತಿದ್ದು, ಅತಿಹೆಚ್ಚು ಬಾರಿ ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಸಿದ್ದರಾಮಯ್ಯ ಪಾತ್ರರಾಗುತ್ತಿದ್ದಾರೆ.

ಜಿಲ್ಲೆಗೆ ಭೇಟಿ ನೀಡಿದರೆ ಅಧಿಕಾರ ಕಳೆದು ಕೊಳ್ಳುತ್ತಾರೆ ಎಂಬ ಮೌಢ್ಯಕ್ಕೆ ತಿಲಾಂಜಲಿಯನ್ನು ಹಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಮೊದಲು 2013–18ನೇ ಸಾಲಿನಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಜಿಲ್ಲಾ ಕೇಂದ್ರಕ್ಕೆ ಒಟ್ಟು 17 ಬಾರಿ ಹಾಗೂ ಜಿಲ್ಲೆಗೆ ಒಟ್ಟು 25ಕ್ಕೂ ಹೆಚ್ಚು ಬಾರಿ ಭೇಟಿ ನೀಡಿದ್ದರು.

ಪ್ರಸ್ತುತ ಎರಡನೇ ಬಾರಿಗೆ ಅಧಿಕಾರಕ್ಕೆ ಬಂದ ಎರಡು ವರ್ಷದ ಅವಧಿಯಲ್ಲಿ ಜಿಲ್ಲಾ ಕೇಂದ್ರಕ್ಕೆ 4 ಬಾರಿ, ಜಿಲ್ಲೆಯ ವಿವಿಧೆಡೆಗೆ 4 ಬಾರಿ ಭೇಟಿ ನೀಡಿದ್ದು, ಇದು ಅವರ 9ನೇ ಭೇಟಿಯಾಗಿದೆ. ಜಿಲ್ಲೆಗೆ ಮತ್ತೊಮ್ಮೆ ಸಿಎಂ ಭೇಟಿ ನೀಡುತ್ತಿರುವುದರಿಂದ ಜನತೆಯ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದ ಮೂರು ತಿಂಗಳಿಗೇ ನಗರಕ್ಕೆ ಭೇಟಿ ನೀಡಿ ಕೆಡಿಪಿ ಸಭೆ ನಡೆಸಿದ್ದರು. ಬಳಿಕ ಎರಡನೇ ಬಾರಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಗ್ಯಾರಂಟಿ ಫಲಾನುಭವಿಗಳ ಸಮಾವೇಶ ನಡೆಸಿದ್ದರು. ತದನಂತರ ಲೋಕಸಭಾ ಕ್ಷೇತ್ರದ ಚುನಾವಣೆಯ ನಾಮಪತ್ರ ಸಲ್ಲಿಕೆ ವೇಳೆ ರೋಡ್ ಶೋ ನಡೆಸಿ ಮತದಾರರ ಮನ ಗೆದ್ದಿದ್ದರು.

ಸಹಕಾರ ಸಪ್ತಾಹ ಸಮಾರೋಪಕ್ಕೆ 9ನೇ ಬಾರಿಗೆ ನಗರಕ್ಕೆ ಇಂದು ಭೇಟಿ

ಬಳಿಕ ಚುನಾವಣಾ ಪ್ರಚಾರದ ವೇಳೆ ಕೊಳ್ಳೇಗಾಲಕ್ಕೆ ನಾಲ್ಕನೇ ಬಾರಿ ಹಾಗೂ ಸಂಸದರ ಕೃತಜ್ಞತಾ ಸಮಾರಂಭಕ್ಕೆ ಐದನೇ ಬಾರಿ ಭೇಟಿ ನೀಡಿದ್ದರು.

2024ರ ಆ.10ರಂದು ಬಿ.ರಾಚಯ್ಯ ಸ್ಮಾರಕ ಉದ್ಘಾಟನೆಗಾಗಿ ಆರನೇ ಬಾರಿಗೆ ಜಿಲ್ಲೆಗೆ ಭೇಟಿ ನೀಡಿದ್ದರು, ನಂತರ ಕೊಳ್ಳೇಗಾಲ ಹಾಗೂ ಯಳಂದೂರಿನ ನೂತನ ಆಸ್ಪತ್ರೆ ಉದ್ಘಾಟನೆಗಾಗಿ 2025ರ ಡಿ.7ರಂದು ಏಳನೇ ಬಾರಿ ಭೇಟಿ ನೀಡಿದ್ದರು. ಏ.24ರಂದು ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಪಾಲ್ಗೊಂಡಿದ್ದರು. ಪ್ರಸ್ತುತ ಸಹಕಾರ ಸಪ್ತಾಹ ಸಮಾರೋಪಕ್ಕಾಗಿ 9ನೇ ಬಾರಿಗೆ ಜಿಲ್ಲೆಗೆ ಭೇಟಿ ನೀಡುತ್ತಿದ್ದಾರೆ.

ಕೈ ಪಾಳಯದಲ್ಲಿ ಜೋಶ್: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾ ಕೇಂದ್ರಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಸಹಜವಾಗಿಯೇ ಕಾಂಗ್ರೆಸ್ ಪಾಳಯದಲ್ಲಿ ಹೊಸ ಉತ್ಸಾಹ ಮನೆ ಮಾಡಿದೆ.

ಬಡವರನ್ನು ಆರ್ಥಿಕವಾಗಿ ಮೇಲೆತ್ತುವ ಕೆಲಸ ಮಾಡಿದ ಇಂದಿರಾಗಾಂಧಿ



ದಿ.ಇಂದಿರಾಗಾಂಧಿ ಭಾವಚಿತ್ರಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಪುಷ್ಪಾರ್ಚನೆ ನೆರವೇರಿಸಿದರು.

ಚಾಮರಾಜನಗರ, ನ.19–ಮಾಜಿಪ್ರಧಾನಿ ಇಂದಿರಾಗಾಂಧಿ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ದೀನದಲಿತರು ಹಿಂದುಳಿದ ವರ್ಗಗಳ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೊಳಿಸಿದ್ದರು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಬಣ್ಣಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಮಾಜಿ ಪ್ರಧಾನಿ ಇಂದಿರಾಗಾಂಧಿ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಇಂದಿರಾಗಾಂಧಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಉಕ್ಕಿನ ಮಹಿಳೆ ಎಂದೇ ಖ್ಯಾತಿ ಪಡೆದಿದ್ದ ಇಂದಿರಾಗಾಂಧಿ ಜನಪರ ಕಾರ್ಯಕ್ರಮಗಳು ಇಂದಿಗೂ ಜನಮಾನಸದಲ್ಲಿ ಉಳಿದಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ ಮಾತನಾಡಿ, ಮಾಜಿ ಪ್ರಧಾನಿ ಇಂದಿರಾ ಗಾಂಧಿ ದೇಶ ಕಂಡ ಸಮರ್ಥ ಪ್ರಧಾನಿಗಳಲ್ಲಿ ಒಬ್ಬರಾಗಿದ್ದರು, ದೇಶವನ್ನು ಮುನ್ನಡೆಸುವ ಜೊತೆಗೆ ನೆರೆ ದೇಶಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿ, ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದರು ಎಂದರು,

ಚುಡಾ ಅಧ್ಯಕ್ಷ ಮಹಮದ್ ಅಸ್ಗರ್‌ಮುನ್ನಾ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ನಾಗರತ್ನ, ನಗರಸಭೆ ಮಾಜಿ ಸದಸ್ಯ ಸ್ವಾಮಿ, ಪ್ರಾಧಿಕಾರದ ಸದಸ್ಯ ಪುಟ್ಟಸ್ವಾಮಿ, ಜಿಪಂ ಸದಸ್ಯೆ ಮಾಜಿ ಸದಸ್ಯೆ ಕಾವೇರಿ ಶಿವಕುಮಾರ್, ಮಾದಾಪುರ ಗ್ರಾಪಂ ಅಧ್ಯಕ್ಷ ರೂಪೇಶ್, ಎಸ್ಸಿಎಸ್ಟಿ ಜಾಗೃತಿ ಉಸ್ತುವಾರಿ ಸಮಿತಿ ಸದಸ್ಯ ಪಿ.ಸಿದ್ದರಾಜು, ಶಕುಂತಲಾ, ನಾಗಶ್ರೀ, ಭಾಗ್ಯಮ್ಮ, ನಸ್ರುಲಾಖಾನ್, ಮರಿಯಾಲಹುಂಡಿ ಕುಮಾರ್, ಅಕ್ಷಯ್ ಕುಮಾರ್, ಜಿ.ಡಿಪ್ರಕಾಶ್, ಎಪಿಎಂಸಿ ಮಾಜಿ ಅಧ್ಯಕ್ಷ ನಾಗೇಂದ್ರ, ಅಪ್ಸರ್ ಅಹಮದ್, ಇಮ್ರಾನ್ ಅಹಮದ್, ಕುಮಾರ್, ರವಿಗೌಡ, ಜಬೀವುಲ್ಲ, ನಾಗಯ್ಯ ನಾಗವಳ್ಳಿ, ಮಹದೇವಯ್ಯ, ಪಾವನ್, ರಾಮಸಮುದ್ರ ಶಿವಮೂರ್ತಿ, ಪಕ್ಷದ ಕಾರ್ಯಕರ್ತರು ಮುಖಂಡರು ಹಾಜರಿದ್ದರು.

ವಿಶ್ವವಿದ್ಯಾನಿಲಯದಲ್ಲಿ ಇಂದು ಕನ್ನಡ ರಾಜ್ಯೋತ್ಸವ

ಚಾಮರಾಜನಗರ: ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಿಂದ ಕನ್ನಡ ರಾಜ್ಯೋತ್ಸವವನ್ನು ನ.20ರ ಬೆಳಿಗ್ಗೆ 11 ಗಂಟೆಗೆ ವಿ.ವಿ. ಯ ನಿಜಗುಣ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಅಧ್ಯಕ್ಷತೆ ವಹಿಸಿ ಧ್ವಜಾರೋಹಣ ನೆರವೇರಿಸುವರು. ನಿವೃತ್ತ ಪ್ರಾಧ್ಯಾಪಕ ಮೈಸೂರು ಕೃಷ್ಣಮೂರ್ತಿ ಉದ್ಘಾಟಿಸುವರು.

ಜ್ಯೋತಿಗೌಡನಪುರ ಪ್ರಕರಣದ ನಿಷ್ಪಕ್ಷಪಾತ ತನಿಖೆಗೆ ಒತ್ತಾಯ

ಚಾಮರಾಜನಗರ,ನ.19–ತಾಲೂಕಿನ ಜ್ಯೋತಿಗೌಡನಪುರ ಪ್ರಕರಣದಲ್ಲಿ ನಿಷ್ಪಕ್ಷಪಾತ ತನಿಖೆ ನಡೆಸಿ ನಿಜವಾದ ಅಪರಾಧಿಗಳನ್ನು ಬಂಧಿಸುವಂತೆ ದಲಿತ ಸಂಘಟನೆಗಳ ಒಕ್ಕೂಟದ ಅಯ್ಯನಪುರ ಶಿವಕುಮಾರ್ ಆಗ್ರಹಿಸಿದ್ದಾರೆ.

ಪ್ರಕರಣ ಸಂಬಂಧ ನಿರಪರಾಧಿಗಳನ್ನು ಯಾವುದೇ ಕಾರಣಕ್ಕೂ ಬಂಧಿಸಬಾರದು. ನಿಜವಾದ ಅಪರಾಧಿಗಳನ್ನು ಬಂಧಿಸಿ ಅವರಿಗೆ ಕಠಿಣ ಶಿಕ್ಷೆಯಾದರೆ ಮುಂದಿನ ದಿನಗಳಲ್ಲಿ ಈ ರೀತಿಯ ತಪ್ಪುಗಳನ್ನು ಮಾಡುವುದಿಲ್ಲ ಎಂದು ಸುದ್ಧಿಗೋಷ್ಠಿಯಲ್ಲಿ ತಿಳಿಸಿದರು.

ಪರಿಶಿಷ್ಟ ಜನಾಂಗದವರೇ ಕೃತ್ಯ ಮಾಡಿರುವುದು ಎಂದು ಹೇಳಿಕೆ ನೀಡಿರುವವರನ್ನು ಕೂಡಲೇ ಬಂಧಿಸಬೇಕು. ಇಂತಹ ಹೇಳಿಕೆ ನೀಡಲು ಅವರಿಗೆ ಯಾವ ಅಧಿಕಾರವಿದೆ ಎಂದು ಪ್ರಶ್ನಿಸಿದ ಅವರು, ನಮಗೂ ಲಕ್ಷ ಲಕ್ಷ ಜನರನ್ನು ಸೇರಿಸಿ ಪ್ರತಿಭಟನೆ ಮಾಡಿಸುವ ತಾಕತ್ ಇದೆ ಎಂದು ಸವಾಲೊಡ್ಡಿದರು

ಈ ಪ್ರಕರಣದಲ್ಲಿ ಈವರೆಗೆ ಓರ್ವನನ್ನು ಮಾತ್ರ ಬಂಧಿಸಿದ್ದು ಇನ್ನೂ ಅನೇಕರು ಇದ್ದಾರೆ. ಕೂಡಲೇ ಪೊಲೀಸ್ ಇಲಾಖೆ ನಿಷ್ಪಕ್ಷಪಾತ ತನಿಖೆ ನಡೆಸಿ ಅಪರಾಧಿಗಳನ್ನು ಬಂಧಿಸಬೇಕು. ಇಲ್ಲದಿದ್ದರೆ ನ.22ರ ನಂತರ ಜಿಲ್ಲಾಡಳಿತ ಭವನದ ಮುಂಭಾಗ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು ಎಂದರು.

ರೈಫಲ್ ಸ್ಪರ್ಧೆಯಲ್ಲಿ ಸರ್ಕಾರಿ ಆದರ್ಶ ಶಾಲೆ ವಿದ್ಯಾರ್ಥಿ ರಾಷ್ಟ್ರಮಟ್ಟಕ್ಕೆ ಆಯ್ಕೆ



ರಾಜ್ಯ ಹಾಗೂ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿಗಳನ್ನು ಶಾಲಾಭಿವೃದ್ಧಿ ಸಮಿತಿ ಅಭಿನಂದಿಸಿತು.

ಕೊಳ್ಳೇಗಾಲ: ರಾಜ್ಯಮಟ್ಟದ ಏರ್ ರೈಫಲ್ ವಿಭಾಗದ ಓಪನ್ ಸೈಟ್ ಶೂಟಿಂಗ್ ಸ್ಪರ್ಧೆಯಲ್ಲಿ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿ ಯುಕ್ತಚೇತನ ತೃತೀಯ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಅದೇ ರೀತಿಯಲ್ಲಿ ಇದೇ ವಿದ್ಯಾಲಯದ ವಿದ್ಯಾರ್ಥಿ ನಾಗಗೌತಮ್ ರೈಫಲ್ ಸ್ಪರ್ಧೆಯಲ್ಲಿ 6ನೇ ಸ್ಥಾನ ಪಡೆದು ಸಾಧನೆಗೈದಿದ್ದಾರೆ.

ನಗರದ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿಗಳು ಕ್ರೀಡೆ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ರಾಜ್ಯ ಹಾಗೂ ರಾಷ್ಟ್ರಮಟ್ಟಕ್ಕೂ ಆಯ್ಕೆಯಾಗುವ ಮೂಲಕ ಗಮನ ಸೆಳೆದಿದ್ದಾರೆ. ಜಿಲ್ಲಾ ಮಟ್ಟದ 100 ಮತ್ತು 200 ಮೀ. ಓಟದಲ್ಲಿ ವೈಷ್ಣವಿ ಶಂಕರ್, ಡಿಸ್ಕಸ್ ಥ್ರೋನಲ್ಲಿ ಸಂಜಯ್ ಪ್ರಥಮ ಸ್ಥಾನಗಳಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದರೆ, ಉಳಿದಂತೆ ಮಕ್ಕಳ ಹಕ್ಕುಗಳ ಸಂಸತ್‌ನಲ್ಲಿ ನಿತಿನ್ ಶೇಖರ್ ಪ್ರಥಮಸ್ಥಾನ ಗಳಿಸುವ ಜೊತೆಗೆ ಯುವ ಸಂಸತ್‌ನಲ್ಲಿ ಧನ್ಯಶ್ರೀ ಎಸ್. ಮತ್ತು ಸಾಹಿತ್ಯ ದ್ವಿತೀಯ ಸ್ಥಾನ ಗಳಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಉಳಿದಂತೆ ರಾಜ್ಯ ಮಟ್ಟದ ಕರಾಟೆ ವಿಭಾಗದ ಕುಮಿಟೆ ವಿಭಾಗದಲ್ಲಿ ನಿಹಾರಿಕಾ ಎಂ.ಪಾವನಿ, ಕೆ.ಎಸ್. ಪರಿಣಿತ, ಕೆ.ಎಸ್. ಜೀವಿತ ಹಾಗೂ ಚೆಸ್‌ನಲ್ಲಿ ಹರ್ಷವರ್ಧನ ಎಸ್. ಕೊಂಡಕ ಪ್ರದ್ಯೂಷ್ ಸಾಯಿನಾಗ್ ಸ್ಪರ್ಧಿಸಿ ಹಲವು ಬಹುಮಾನಗಳಿಸುವ ಜೊತೆಗೆ ಗಮನ ಸೆಳೆದಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಲಿಂಗರಾಜು, ಮುಖ್ಯಶಿಕ್ಷಕಿ ಪ್ರಿಯದರ್ಶಿನಿ, ದೈಹಿಕ ಶಿಕ್ಷಣ ಶಿಕ್ಷಕ ಮಹೇಶ ಹಾಗೂ ಸಹಶಿಕ್ಷಕರು ಅಭಿನಂದಿಸಿದ್ದಾರೆ

ಜಿಂಕೆ ಮಾಂಸ ಹಂಚಿಕೊಳ್ಳುತ್ತಿದ್ದ ಇಬ್ಬರ ಬಂಧನ; ಮತ್ತಿಬ್ಬರು ಪರಾರಿ



ಜಿಂಕೆ ಮಾಂಸ ಮಾರುತ್ತಿದ್ದ ಬಂಧಿತ ಆರೋಪಿಗಳ ಜೊತೆ ಅರಣ್ಯ ಸಿಬ್ಬಂದಿ.

ಕೊಳ್ಳೇಗಾಲ, ನ.19– ಜಿಂಕೆಯನ್ನು ಬೇಟೆಯಾಡಿ ಅದರ ಮಾಂಸ ಪಾಲು ಮಾಡಿಕೊಳ್ಳುತ್ತಿದ್ದ ನಾಲ್ಕು ಮಂದಿ ಆರೋಪಿಗಳ ಪೈಕಿ ಇಬ್ಬರನ್ನು ಬಂಧಿಸುವಲ್ಲಿ ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಯಶಸ್ವಿಯಾಗಿದ್ದಾರೆ.

ತಾಲೂಕಿನ ದೊಡ್ಡಿಂದುವಾಡಿ ಗ್ರಾಮದ ಮಹದೇವ ಬಿನ್ ಲೇಟ್ ಪುಟ್ಟನಾಯಕ(25), ಕಿರಣ್ ಬಿನ್ ಸಿದ್ದಶೆಟ್ಟಿ(30) ಬಂಧಿತ ಆರೋಪಿಗಳು. ದೊಡ್ಡಿಂದುವಾಡಿ ಅರಣ್ಯ ಪ್ರದೇಶವನ್ನು ಹೊಕ್ಕು ಕಬಿನಿ ಚಾನೆಲ್ ಬಳಿ ಜಿಂಕೆಯನ್ನು ಕೊಂದು ತುಂಡು ತುಂಡು ಮಾಡಿ ಪಾಲು ಮಾಡಿಕೊಳ್ಳುತ್ತಿದ್ದರು. ವಿಚಾರ ತಿಳಿಯುತ್ತಿದ್ದಂತೆ ಎಸ್ಪಿ ಸುದರ್ಶನ್ ಮಾರ್ಗದರ್ಶನದೊಂದಿಗೆ ಸಬ್‌ಇನ್ಸ್‌ಪೆಕ್ಟರ್ ವಿಜಯರಾಜ್, ಮುಖ್ಯ ಪೇದೆಗಳಾದ ರಾಮಚಂದ್ರ, ಸ್ವಾಮಿ, ಬಸವರಾಜು, ಜಮೀಲ್, ಪ್ರಭಾಕರ್, ಲತಾ ಇನ್ನಿತರರು ದಾಳಿ ನಡೆಸುತ್ತಿದ್ದಂತೆ ಇಬ್ಬರು ಆರೋಪಿಗಳು ಪರಾರಿಯಾದರು. ಸುತ್ತುವರಿದು ಉಳಿದಿಬ್ಬರು ಆರೋಪಿಗಳನ್ನು ಬಂಧಿಸಿ, ಬಂಧಿತರಿಂದ 43 ಕೆಜಿ ಜಿಂಕೆ ಮಾಂಸ, ಜಿಂಕೆಯ 5 ಕಾಲುಗಳು ಒಂದು ತಲೆ, ಜಿಂಕೆ ಕತ್ತರಿಸಲು ಬಳಸಲಾಗಿದ್ದ 4ಚೂರಿ, 1ಮಚ್ಚು, ಮೂರು ಮೋಟಾರ್ ಬೈಕ್‌ಗಳನ್ನು ವಶಕ್ಕೆ ಪಡೆದುಕೊಂಡರು.

ಬಂಧಿತ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಪರಾರಿಯಾಗಿರುವ ಮತ್ತಿಬ್ಬರು ಆರೋಪಿಗಳ ಪತ್ತೆಗೂ ಮುಂದಿನ ಕ್ರಮಕೈಗೊಂಡಿದ್ದಾರೆ.

ಜೀವನದಲ್ಲಿ ಜಿಗುಪ್ಸೆ: ನದಿಗೆ ಹಾರಿ ಆತ್ಮಹತ್ಯೆ



ಮೃತ ಶಿವು

ಕೊಳ್ಳೇಗಾಲ, ನ.19– ಜೀವನದಲ್ಲಿ ಜಿಗುಪ್ಸೆಗೊಂಡು ದಾಸನಪುರ ಬಳಿ ಕಾವೇರಿ ನದಿಗೆ ಹಾರಿ ಯುವಕ ಆತ್ಮಹತ್ಯೆ ಮಾಡಿಕೊಂಡಿದ್ದು ಶವ ಪತ್ತೆಗಾಗಿ ಅಗ್ನಿ ಶಾಮಕ ಸಿಬ್ಬಂದಿ ಹಾಗೂ ಪೊಲೀಸ್ ಅಧಿಕಾರಿಗಳು ಬುಧವಾರ ಹುಡುಕಾಟ ಆರಂಭಿಸಿದ್ದಾರೆ

ನರಸೀಪುರ ತಾಲೂಕಿನ ತಲಕಾಡು ಹೋಬಳಿಯ ಕಾಳಬಸವನ ಹುಂಡಿ (ಕಾಳಿಹುಂಡಿ) ಗ್ರಾಮದ ಮಾದೇವ ಅವರ ಪುತ್ರ ಶಿವು(17) ಕಾವೇರಿ ನದಿಗೆ ಹಾರಿದ ಯವಕ. ಈತನಿಗೆ ಆರೋಗ್ಯ ಸಮಸ್ಯೆ ಇತ್ತು. ಹಾಗಾಗಿ ಕಾವೇರಿ ನದಿಗೆ ಹಾರಿದ್ದ ಎನ್ನಲಾಗಿದೆ.

ಪೊಲೀಸರು ಪ್ರಕರಣ ದಾಖಲಿಸಿಕೊಂಡು ಯುವಕನ ಶವ ಪತ್ತೆಗಾಗಿ ಅಗ್ನಿ ಶಾಮಕ ಠಾಣಾಧಿಕಾರಿಗಳ ಸಹಕಾರದೊಂದಿಗೆ ಹುಡುಕಾಟ ಪ್ರಾರಂಭಿಸಿದ್ದಾರೆ ಬುಧವಾರ ಸಂಜೆವರೆಗೂ ಶವ ಸಿಕ್ಕಿಲ್ಲ. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ.

ಸರ್ಕಾರಿ ಶಾಲೆಯಲ್ಲಿ ಗೇಟ್ ಕಳವು

ಕೊಳ್ಳೇಗಾಲ: ತಾಲೂಕಿನ ತಿಮ್ಮರಾಜೀಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದುಷ್ಕರ್ಮಿಗಳು ಕೊಠಡಿ ಬಾಗಿಲು ಮುರಿದು ಕಬ್ಬಿಣದ ಗೇಟ್‌ನ್ನು ಕಳವು ಮಾಡಿದ್ದಾರೆ. ಶಾಲೆಯಲ್ಲಿ ಕಾಂಪೌಂಡ್ ಕೆಲಸ ಮಾಡುತ್ತಿದ್ದ ರಿಂದ ಹಳೇ ಗೇಟ್‌ನ್ನು ತೆಗೆದು ಶಾಲೆಯ ಕೊಠಡಿಯಲ್ಲಿ ಇಡಲಾಗಿತ್ತು. ಎಂದಿನಂತೆ ಇಂದು ಶಾಲೆಗೆ ಹೋದ ಮುಖ್ಯ ಶಿಕ್ಷಕಿ ಶಾಲೆಯಲ್ಲಿ ರೂಮ್ ಬಾಗಿಲು ಹೊಡೆದಿರುವುದನ್ನು ಗಮನಿಸಿ ಒಳಹೋಗಿ ನೋಡಿದಾಗ ಕಬ್ಬಿಣದ ಗೇಟ್ ಕಳುವಾಗಿರುವುದು ತಿಳಿದು ಬಂದಿದೆ. ಈ ಸಂಬಂಧ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಶಿಕ್ಷಕರು ಲಿಖಿತ ದೂರು ನೀಡಿದ್ದಾರೆ. ಪೊಲೀಸರು ದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಬಸ್ ನಿಲ್ದಾಣದಲ್ಲಿ ವೃದ್ದನ ಸಾವು

ಕೊಳ್ಳೇಗಾಲ: ಪಟ್ಟಣದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ವೃದ್ಧನೋರ್ವ ಸಾವನ್ನಪ್ಪಿರುವ ಘಟನೆ ಇಂದು ಜರುಗಿದೆ. ತಾಲೂಕಿನ ಮಧುವನಹಳ್ಳಿ ಗ್ರಾಮದ ತಾಂಡವಶೆಟ್ಟಿ(93) ಮೃತ ದುರ್ದೈವಿ. ಈತ ಪಿಂಚಣಿ ಹಣ ತೆಗೆದುಕೊಂಡು ಬರುವುದಾಗಿ ಮನೆಯಲ್ಲಿ ಹೇಳಿ ಬಂದವನು ಬಸ್ ನಿಲ್ದಾಣದಲ್ಲಿ ಸಾವನ್ನಪ್ಪಿದ್ದಾನೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಜರುಗಿಸಿದ್ದಾರೆ.

ರಾಷ್ಟ್ರೀಯ ಐಕ್ಯತಾ ಸಪ್ತಾಹ ಕಾರ್ಯಕ್ರಮ



ನಾದಬ್ರಹ್ಮ ಹಂಸಲೇಖ ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಮೈಸೂರು, ನ.19(ವಿವಿಹೆಚ್)– ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಬುಧವಾರ ರಾಷ್ಟ್ರೀಯ ಐಕ್ಯತಾ ಸಪ್ತಾಹ ಕಾರ್ಯಕ್ರಮ ನಡೆಯಿತು.

ನಾಡನಹಳ್ಳಿಯ ಸರ್ದಾರ್ ವಲ್ಲಭಬಾಯಿ ಪಟೇಲ್‌ನಗರದಲ್ಲಿರುವ ವಿವಿಯ ನೂತನ ಕ್ಯಾಂಪಸ್ ಆವರಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮವನ್ನು ನಾದಬ್ರಹ್ಮ ಹಂಸಲೇಖ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಕಲೆಯೆಂದರೆ ಕಲಿಯುವುದು, ಕಲಿಯುವುದೆಂದರೆ ಎಲ್ಲರೂ ಪರಸ್ಪರ ಬೆರೆಯುವುದು, ಕಲಿಕೆಯಲ್ಲಿ ಜಾತಿ, ಮತ, ಲಿಂಗ, ಭೇದ, ಧರ್ಮ ಎಂಬ ಅನೇಕ ಸಾಮಾಜಿಕ ಕಟ್ಟುಪಾಡುಗಳಿಂದ ಮುಕ್ತರಾಗಿ ಕಲಿಕೆಯನ್ನು ಆಹ್ವಾನಿಸಬೇಕಾಗುತ್ತದೆ ಎಂದರು.

ಇಂದು ಎಲ್ಲರಿಗೂ ಎಲ್ಲಾ ಸವಲತ್ತುಗಳನ್ನು ದೇಶ ಒದಗಿಸಿಕೊಟ್ಟಿದೆ. ಸವಲತ್ತುಗಳನ್ನು ಪಡೆದುಕೊಂಡ ನಾವು ವಿಮುಖರಾಗದೆ ಎಲ್ಲರೂ ಒಂದಾಗಿ ಕಲೆಯುವ/ಬೆರೆಯುವ ಮೂಲಕ ಈ ದೇಶದ ಐಕ್ಯತೆಯನ್ನು ಕಾಪಾಡುವುದು ನಮ್ಮೆಲ್ಲರ ಸಾಂಸ್ಕೃತಿಕ ಜವಾಬ್ದಾರಿಯಾಗಿದೆ ಎಂದು ಸಲಹೆ ನೀಡಿದರು.

ಮಹಿಳೆಯರು ಇಂದು ಎಲ್ಲಾ ರಂಗದಲ್ಲಿಯೂ ನಿರ್ಭೀತಿಯಿಂದ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಸಂತಸದ ವಿಷಯವಾಗಿದೆ ವಿದ್ಯಾವಂತರಾದ ನಾವೆಲ್ಲರೂ ಐಕ್ಯತೆಯ ಅರ್ಥವನ್ನು ಗ್ರಹಿಸಿಕೊಂಡು ಐಕ್ಯತಾ ಭಾವನೆಯು ಒಂದು ದಿನಕ್ಕೆ ಸೀಮಿತವಾಗಿರದೆ ಪ್ರತೀ ದಿನ ಆಚರಿಸುವಂತಾಗಬೇಕು ಎಂದು ತಿಳಿಸಿದರು.

ಕಲಿಕಾ ವಿದ್ಯಾರ್ಥಿಗಳಲ್ಲಿ ಸೌಹಾರ್ದತೆ ಇದ್ದಾಗಲೇ ಯಶಸ್ಸು ಸಾಧ್ಯ. ದೇಶದಲ್ಲಿ ಹಿಂಸಾಚಾರ ಮತ್ತು ಕೋಮು ದ್ವೇಷವನ್ನು ತಡೆಗಟ್ಟುವ ನಿಟ್ಟಿನಲ್ಲಿ ಐಕ್ಯತಾ ದಿನದ ಪ್ರಮಾಣವಚನವನ್ನು ನಾವು ಇದ್ದಲ್ಲಿ ಒಗ್ಗಟ್ಟಾಗಿ, ಪ್ರತಿ ನಿತ್ಯ ಪಾಲಿಸುವುದು ಆದ್ಯ ಕರ್ತವ್ಯವೆಂದು ಹೇಳಿದರು. ಕಾರ್ಯಕ್ರಮದಲ್ಲಿ ಕುಲಪತಿಗಳಾದ ಪ್ರೊ ನಾಗೇಶ್ ವಿ ಬೆಟ್ಟಕೋಟೆ ನಿರ್ದೇಶಕ ಸಿ.ಬಸವಲಿಂಗಯ್ಯ, ಮೌಲ್ಯಮಾಪನ ಕುಲಸಚಿವರಾದ ಪ್ರೊ ಎಂ.ಜಿ.ಮಂಜುನಾಥ್ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED airtel
Sim sales Executive
salary 15,000
Incentive up to 10,000
9591501305

RAI ESTATES RERA APPROVED · MUDA APPROVED · E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ದಾಖಲಾತಿ ಕಳೆದುಹೋಗಿದೆ
ಸಂಜಯ್ ಧರೀವಾಲ್ ರವರಿಗೆ ಸೇರಿದ ಚಾಮರಾಜನಗರ ಜಿಲ್ಲೆಯ ಸಂತೇ ಮರಳ್ಳಿ ಹೋಬಳಿ ಗ್ರಾಮದ ಡಾ|| ಶ್ರೀ ಶಿವಕುಮಾರಸ್ವಾಮಿ ಬಡಾವಣೆ ನಿವೇಶನ ಸಂಖ್ಯೆ 27, 28 ಮತ್ತು 29ರ ನಿವೇಶನಗಳ ವಿಸ್ತೀರ್ಣ ಪೂರ್ವ ಪಶ್ಚಿಮ 8.9916 ಮೀಟರ್ ದಕ್ಷಿಣೋತ್ತರ 11.99388 ಸ್ವತ್ತಿನ ನೊಂದಾಯಿತ ಶುದ್ಧ ಕ್ರಯಪತ್ರವು ದಿನಾಂಕ: 24.10.2025ರಂದು ಮನೆ ಬದಲಾಯಿಸುವ ಸಂದರ್ಭದಲ್ಲಿ ಕಳೆದುಹೋಗಿರುತ್ತದೆ. ಸಿಕ್ಕಿದವರು ದಯವಿಟ್ಟು ಈ ಕೆಳಗಿನ ಮೊಬೈಲ್ ಸಂಖ್ಯೆಗೆ ಕರೆ ಮಾಡಬೇಕೆಂದು ಮನವಿ.
Mob: 8880999002

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT
Pharma Assistant	PUC / Degree

0821-2499188, 9880186386

PEST CONTROL SERVICES
ಸೊಳ್ಳೆ, ಜಿರಳೆ, ಇಲಿ, ಜೇಡ, ಗೆದ್ದಲು ಹುಳು, ತಿಗಣೆಗಳನ್ನು ನಿಮ್ಮ ಮನೆ, ಆಫೀಸ್, ಅಪಾರ್ಟ್‌ಮೆಂಟ್, ಶಾಲೆ ಕಾಲೇಜುಗಳಿಂದ ತಡೆಗಟ್ಟಿ.
ಸಂಪರ್ಕಿಸಿ: 9886899944

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ: 7406375196, 9880548596

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನಾಭರಣ ಬಿಡಿಸಿ ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ– Rs. 11,300 (24 CT)
9108146123

FOR SALE
1. 40x120 Site @ 80 Feet Road in Dattagalli
2. 40x60@JP Ngr, Shardha Lyt
3. 2&3 BHK Apartments @ RK Ngr
4. 30x40 Sites Near RT Nagar BSNL Layout @ Just 22 Lakhs
5. 23x35 Old House / 20x30 New House @ Srirampura
6. 20x30 New Duplex House @ Utthanahalli & Dattagalli

PRAKRUTHI PROPERTIES
95386 90359, 90359 90359

REQUIRED IMMEDIATELY
WEB DESIGNER
DIGITAL MARKETING
SALES EXECUTIVE
9141835175
6366610175
Ilwala, Near Belawadi Check Post, Mysore.

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

V-GUARD Solar Water Heater SALES & SERVICE
10 ವರ್ಷಗಳ ವ್ಯಾರಂಟಿ · BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಮೈಸೂರಿನ ಕುವೆಂಪುನಗರದಲ್ಲಿ ವಾಸವಾಗಿರುವ ವೃದ್ಧ ದಂಪತಿಗಳಿಗೆ ನುರಿತ ಅಡುಗೆ ಮಾಡುವ ಬ್ರಾಹ್ಮಣ ಮಹಿಳೆ ಬೇಕಾಗಿದ್ದಾರೆ. ಬೆಳಿಗ್ಗೆ 8.30 ರಿಂದ 12.30 ಗಂಟೆ ತನಕ ಕೂಡಲೇ ಸಂಪರ್ಕಿಸಿ
9845131318, 9880643198

Housing Board, ಹೂಟಗಳ್ಳಿ, ಮೈಸೂರು
Near Krishna Bekary 20x42- North Facing, ಮನೆ ಮಾರಾಟಕ್ಕಿದೆ.
G Floor, 1st Flower, 65 Lakh - Negotiable,
20x30 ಸೈಟ್ ಮಾರಾಟಕ್ಕಿದೆ.
ವಿಜಯನಗರ '4' Stage ಮೈಸೂರು, South Facing, Near S.V.E.I, 45 Lakh, Negotiable, Call
9880918269

ಬೇಕಾಗಿದ್ದಾರೆ
ಪುರುಷರು ಮಾತ್ರ ಬೇಕಾಗಿದ್ದಾರೆ. ಹೆಲ್ಪರ್ ಕೆಲಸಕ್ಕೆ ಯಾವುದೇ ವಿದ್ಯಾಭ್ಯಾಸ ಬೇಕಿಲ್ಲ. ಸಂಬಳ 17,500 + ESI, PF ವಯಸ್ಸು 18 ರಿಂದ 45, 8 Hrs Duty, 3 shifts. ಹೆಚ್ಚಿನ ಮಾಹಿತಿಗಾಗಿ ಸ್ಥಳಕ್ಕೆ ಭೇಟಿ ನೀಡಿ. ಸ್ಥಳ : CIPET College ಹತ್ತಿರ, ರಿಂಗ್ ರೋಡ್ ಮೇಟಗಳ್ಳಿ, ಮೈಸೂರು
ಮೊ: 9986874574

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಮತ್ತು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (SSLC & ITI Any trade) Age Limit - 18 ರಿಂದ 45 ವರ್ಷ Salary : 18,000/- ಸೌಲಭ್ಯತೆ : ESI, PF & Canteen ಸೌಲಭ್ಯವಿರುತ್ತದೆ.
ಮೊಬೈಲ್: 7019380847, 7019822622, 6362491336

HOUSE FOR SALE
33x40, Corner House, GF- 2 BHK, 1st Floor-Duplex, Chamundeshwari Railway Layout, KRS Road, Mysore.
9844725858 / 8050022212

AFFIDAVIT
I, Chandrashekhar K.N, S/o. L. Narasimharao Pawar aged 32 yrs, residing at Kuppahalli village,, Meluru Post Krishnaraja nagara Tq, Mysore Dt. 571604 hereby state on oath that my correct name is Chandrashekhar K.N. as per Adhar card No 512532336391) in my SSLC certificate andin my DL only the English letter H and intial N is missing in the said name. therefore as per all my documents , my name is Chandrashekar K.N & Chandrashekhar N, both names belong to my name vide afidavit sworn before Notary S. Pavithra, Mysore on
Sd/- Chandrashekhar K.N

ಹೆಸರು ಬದಲಾವಣೆ
ಲಕ್ಷ್ಮಿ ಅರಸ್, ನಂ 17ರಲ್ಲಿ ವಾಸವಾಗಿರುವ. ಬಿ.ಟಿ.ಜಿ. ಲೇಔಟ್, ರೂಪನಗರ ಹತ್ತಿರ 2ನೇ ಕ್ರಾಸ್, ಬೋಗಾದಿ, ಮೈಸೂರು ನಗರ. ಇಲ್ಲಿ ವಾಸವಿದ್ದು, ನನ್ನ ಹೆಸರನ್ನು ಇ.ಪಿ.ಎಫ್.ಓ ಕಛೇರಿಯಲ್ಲಿ, ಕುಮಾರಿ ಎಂದು ನಮೂದು ಮಾಡಿರುತ್ತಾರೆ. ಆದುದರಿಂದ ಕುಮಾರಿ ಎಂಬುದರ ಬದಲು ನನ್ನ ಆಧಾರ್ ಕಾರ್ಡ್ ನಂತೆ ಲಕ್ಷ್ಮಿ ಅರಸ್ ಎಂದು ಬದಲಾಯಿಸಿ ನೋಟರಿ ವಾಸುದೇವ್ ಇವರ ಸಮ್ಮುಖದಲ್ಲಿ ಪ್ರಮಾಣೀಕರಿಸುತ್ತೇನೆ.
ಸಹಿ/– ಲಕ್ಷ್ಮಿ ಅರಸ್

ಕಳೆದಿದೆ
B.ನಾಗರಾಜ್ ರವರ ಸ್ವತ್ತು, ಸೈಟ್ ನಂ 1540 ಶ್ರೀರಾಂಪುರ 2ನೇ ಹಂತ, ಮೈಸೂರು, ಇದಕ್ಕೆ ಸಂಬಂಧಿಸಿದ ಮುಡಾದಿಂದ ನೀಡಿದ ಮೂಲ ದಾಖಲಾತಿ ಪತ್ರ No. ST/3187/ 90-91 PID. No 230622 ಕಳೆದು ಹೋಗಿರುತ್ತದೆ. ಸಿಕ್ಕವರು ಸಂಪರ್ಕಿಸಿ
9113942911

ಉಚಿತ
ಬ್ಯೂಟಿಷಿಯನ್ ಮತ್ತು ಟೈಲರಿಂಗ್ ತರಬೇತಿ ಹೇಳಿಕೊಡಲಾಗುವುದು
ಮೊ.ನಂ 9844153848
ಶ್ರೀರಾಂಪುರ 2ನೇ ಸ್ಟೇಜ್, ಗೋಕುಲ್ ಕೆಫೆ ಎದುರು, ಮೈಸೂರು

ತಕ್ಷಣ ಬೇಕಾಗಿದ್ದಾರೆ
ಬನ್ನಿಮಂಟಪ ಮತ್ತು ಯಾದವಗಿರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯಸ್ಸು : 50 ವರ್ಷದೊಳಗೆ, ಸಂಬಳ : 17000+ ESI, PF ಸೌಲಭ್ಯವಿರುತ್ತದೆ.
9880727819, 9620667819

ಬಾಡಿಗೆಗೆ
ಆಫೀಸ್, PG, ಬ್ಯೂಟಿಪಾರ್ಲರ್, I ಫ್ಲೋರ್, II ಫ್ಲೋರ್ ಖಾಲಿ ಇದೆ. ಡಾ. ರಾಜ್‌ಕುಮಾರ್ ರಸ್ತೆ ಶ್ರೀ ಕೃಷ್ಣಬೇಕರಿ ಹತ್ತಿರ, ಮೈಸೂರು
8105821992

ಬೇಕಾಗಿದ್ದಾರೆ
ಮೈಸೂರಿನ ಹೋಟೆಲ್‌ಗೆ ಅನುಭವ ಇರುವ ಪಾರ್ಸೆಲ್ ಕಟ್ಟುವ ಹುಡುಗರು ಬೇಕಾಗಿದ್ದಾರೆ ಬಲ್ಲಾಳ್ ವೃತ್ತ, ಫೋನ್ ನಂ
9900661620

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು ಪಂ || ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob : 9663466548

ವಾಣಿಜ್ಯ ಸ್ಥಳ ಬಾಡಿಗೆಗೆ
ವಿಜಯನಗರ, 4ನೇ ಸ್ಟೇಜ್, ಬೋಗಾದಿ ರಿಂಗ್ ರಸ್ತೆಯ ಪೂರ್ವ ದಿಕ್ಕು, 30x60, ಹಾರ್ಡ್‌ವೇರ್ ಮತ್ತು ಪ್ಲಂಬಿಂಗ್ ಮಳಿಯ ಶೆಡ್ with ಇಂಟೀರಿಯರ್ ರೆಡಿ ಇರುವ ಶಾಪ್ ಮಾರಾಟಕ್ಕೆ/ ಬಾಡಿಗೆಗೆ ದೊರೆಯುತ್ತದೆ.
9343458535, 7892996961

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ ಮತ್ತು ಕುವೆಂಪುನಗರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು, ಸಂಬಳ : 22000+W/o (8 hrs & 12 hrs) ಊಟ, ತಿಂಡಿ, ಸೌಲಭ್ಯವಿರುತ್ತದೆ.
9620777819, 9880727819

ಬಾಡಿಗೆಗೆ
ರಾಮಕೃಷ್ಣನಗರ E & F ಬ್ಲಾಕ್, ಸಾಯಿಬಾಬಾ ದೇವಸ್ಥಾನ ಹತ್ತಿರ 2 BHK with ಸೋಲಾರ್
9880956285

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಶೋರೂಮ್‌ಗಳಾದ, ಟಾಟಾ ಮೋಟರ್ಸ್, ರೇನಾಲ್ಟ್, ಟೊಯೋಟಾ, ಮಾರುತಿ ಸುಜುಕೀ ಅರೇನ ಹಾಗೂ ಬೈಕ್ ಶೋರೂಮ್‌ಗಳಾದ ಹೋಂಡಾ, ಟೀವಿಎಸ್, ರೋಯೋಲ್ ಎನ್‌ಫೀಲ್ಡ್, ಶೋರೂಮ್‌ಗಳಿಗೆ CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ, (22k -36k), SSLC, PUC, DEGREE
9739121355, 6366718368

ಬೇಕಾಗಿದ್ದಾರೆ
1. Front office executive
2. Room Boy
3. Security guard
ನಗರದ ಹೃದಯ ಭಾಗದಲ್ಲಿರುವ ಪ್ರತಿಷ್ಠಿತ ಹೋಟೆಲ್‌ಗೆ. ಊಟ ಮತ್ತು ವಸತಿಯೊಂದಿಗೆ ಆಕರ್ಷಕ ಸಂಬಳವನ್ನು ನೀಡಲಾಗುವುದು.
ಸಂಪರ್ಕಿಸಿ: 8618647910, 7204933402, 8861922752

ಸದ್ಗುರು ಮ್ಯಾರೇಜಸ್
ವೀರಶೈವ ಲಿಂಗಾಯಿತ, ಬ್ರಾಹ್ಮಣ, ಒಕ್ಕಲಿಗ, ಕುರುಬ, ಆದಿಕರ್ನಾಟಕ ನಾಯಕ, ಅಂತರ್ಜಾತಿ ಮತ್ತು ಎಲ್ಲಾ ಜಾತಿಯ ವಧುವರರಿಗೆ ನೇರ ಸಂಪರ್ಕಿಸಿ
9448229184, 7899625268

ಸೈಟು ಮಾರಾಟಕ್ಕಿದೆ
40x32 ಶ್ರೀ ಸಾಯಿ ಚಾಮುಂಡೇಶ್ವರಿ ಲೇಔಟ್, ರಾಘವೇಂದ್ರಸ್ವಾಮಿ ಮಠದ ರಸ್ತೆ, ಟಿ.ನರಸೀಪುರ ಮೇನ್ ರೋಡ್, ಚಿಕ್ಕಹಳ್ಳಿ, ಮೈಸೂರು
9845035818

WANTED
ಫರ್ನಿಷಿಂಗ್ ಅಂಗಡಿಯಲ್ಲಿ TELECALLER WORK ಕನ್ನಡ ಹಿಂದಿ ಇಂಗ್ಲಿಷ್ ಭಾಷೆ ಮಾತಾಡಬೇಕು 1 Year Experience ಇರುವವರು ಬೇಕಾಗಿದ್ದಾರೆ Near Ashoka Road
9916514950

ಸಸ್ಯಹಾರಿ ಹೋಟೆಲ್‌ಗೆ ಬೇಕಾಗಿದ್ದಾರೆ
ಅಡುಗೆ ಭಟ್ಟರು – 25 ಸಾವಿರ ತಿಂಗಳಿಗೆ, ಚಾಟ್ – 25 ಸಾವಿರ ತಿಂಗಳಿಗೆ, (ಪಾನಿಪುರಿ, ಗೋಬಿ, ಬಜ್ಜಿ ಪಕೋಡ), ಸಪ್ಲೇಯರ್/ ತರಕಾರಿ ಕಟ್ಟಿಂಗ್ 15 ಸಾವಿರ ತಿಂಗಳಿಗೆ, (ಹುಡುಗರು ಮಾತ್ರ)
9141584958

ಸೈಟು ಮಾರಾಟಕ್ಕಿದೆ
40x60 ಕಮರ್ಷಿಯಲ್ ಸೈಟ್ ದಿ ಹೆರಿಟೇಜ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಉತ್ತನಹಳ್ಳಿ, ಹೆರಿಟೇಜ್‌ನಗರ 35x65 K.T. Streat Commercial Building Sale
9972493647

ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಡ್ರೈವರುಗಳು, ಸೆಕ್ಯೂರಿಟಿ ಗಾರ್ಡುಗಳು, ಟೈಲರ್, ಹೆಲ್ಪರ್ ಹಾಗೂ ಡ್ರೈವರ್ Com ಮಾರ್ಕೆಟಿಂಗ್, ವೆಲ್ಡರ್ ಮತ್ತು ಅಕೌಂಟೆಂಟ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ
9900293676, 7795285485

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ವಯಸ್ಸು : 25 ರಿಂದ 50 ಇಲವಾಲ–ಹೂಟಗಳ್ಳಿ ಸುತ್ತಮುತ್ತ, ಫೋನ್ ನಂ
9900749104

ಶಾಲೆಗೆ ಆಯ/ಹೆಲ್ಪರ್
ಶಾಲೆಯಲ್ಲಿ ಕಸಗುಡಿಸಲು ಮತ್ತು ಅಡಿಗೆ ಕೆಲಸ ಹೆಲ್ಪರ್, 40 ವಯಸ್ಸು ಮೀರದ ಮಹಿಳೆ ಇಬ್ಬರು ಬೇಕಾಗಿದ್ದಾರೆ. ಸಂಬಳ 9000/– ಬೆಳಿಗ್ಗೆ 9 ರಿಂದ ಸಂಜೆ 5.30, ಆಧಾರ್ ಕಾರ್ಡ್ ಸಹಿತ ಬಂದು ವಿಚಾರಿಸಿ ಜ್ಞಾನ ಗಂಗೋತ್ರಿ ಕಾನ್ವೆಂಟ್ ರಾಜೇಂದ್ರ ನಗರ, ಮೈಸೂರು
9113980741

ತಕ್ಷಣ ಬೇಕಾಗಿದ್ದಾರೆ
ಮೈಸೂರು ಮತ್ತು ಬೆಂಗಳೂರಿನಲ್ಲಿರುವ ಕಂಪನಿ ಮತ್ತು ಆಫೀಸ್‌ಗಳಿಗೆ 7ನೇ, 10ನೇ, ಪಿಯುಸಿ, ಡಿಗ್ರಿ ಪಾಸ್/ಫೇಲ್ ಆದಂತಹ ಯುವಕರು ಯುವತಿಯರಿಗೆ 20,000 ದಿಂದ 45,000+ ಓಟಿ (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. ಸಂಪರ್ಕಿಸಿ:
9916744622 / 9916788422

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್/ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI, PF ನೊಂದಿಗೆ ಊಟ ವಸತಿಯಿರುತ್ತದೆ ಸಂಬಳ+ಓಟಿ. 15200 – 86000
7892046990

ಕ್ರಯ ಪತ್ರ ಕಳೆದಿದೆ
ಸುಶೀಲ್ ರವರ ಸ್ವತ್ತು ಮನೆ ನಂ. 152/33, ಬೆಳವತ್ತ ಗ್ರಾಮ, R.B.I. Post , ಮೈಸೂರು–03 ಇದಕ್ಕೆ ಸಂಬಂಧಿಸಿದ ಕ್ರಯಪತ್ರ ಸಂಖ್ಯೆ 2203 ಕಳೆದಿದೆ. ಸಿಕ್ಕವರು ಸಂಪರ್ಕಿಸಿ
7406944804

ಬೇಕಾಗಿದ್ದಾರೆ
ಕ್ಷೇತ್ರ ಪರಿವೀಕ್ಷಣೆ (SERVE) ಕೆಲಸ ಮಾಡಲು, SSLC ಹಾಗೂ ಮೇಲ್ಪಟ್ಟ ಮಹಿಳೆಯರು ಬೇಕಾಗಿದ್ದಾರೆ. ಸಂಬಳ 10K ದಿಂದ 15K ವರೆಗೆ ಆಸಕ್ತರು ಸಂಪರ್ಕಿಸಿ
7899643427

ಬೇಕಾಗಿದ್ದಾರೆ
ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ ಇರುವ ಕಾಲೇಜ್‌ಗೆ ಹೌಸ್‌ಕೀಪಿಂಗ್ ಮಹಿಳೆ ಬೇಕಾಗಿದ್ದಾರೆ. ವಾರದ ರಜೆ ಮತ್ತು ಗೌರ್ನಮೆಂಟ್ ರಜೆಗಳು ಇರುತ್ತದೆ. ಕೂಡಲೇ ಸಂಪರ್ಕಿಸಿ
9353646312

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ MNC ಕಂಪನಿ ಮತ್ತು ಆಫೀಸ್ ಶೋರೂಂಗಳಿಗೆ 7th, 8th, 9th, 10th, PUC, ITI, Diploma, Any Degree Pass /Fail ಆದವರಿಗೆ Helper, Packing, Driving, Data entry, Admin, HR ಮುಂತಾದ ಕಂಪನಿಗಳಿಗೆ ಬೇಕಾಗಿದ್ದಾರೆ. ಯುವಕ – ಯುವತಿಯರು (ESI+ PF + OT ಸೇರಿ ಸಂಬಳ 18,500/58,000 ಸಂಪರ್ಕಿಸಿ
9035143190, 9740969782

WANTED
40x60 North/East Facing Site in Vijayanagar 3rd Stage
7899214181

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

Sri Sapthagiri Builders & Developers Mysore Hebbal 1st Stage
- Personal Assistant
- Qualification - Degree (computer Knowledge)
- Language- Kannada, English
- Gender - Female
- Basic Salary - 20K

9591828444
9731667555

SITE FOR SALE
MUDA APPROVED
40x40, 40x60 -2Sites
Sukadayi Layout
Sardar Vallabai Patel Nagar Mysore
Note : Buyers Only Please
9900280218

SITE FOR SALE
Near MIT College, Govt Approved, Ready to Register
7353876555

HOUSE REQUIRED FOR RENT
3BHK With Attached Bathrooms. Areas: Somanathanagara, R.R. Nagara, Dattagalli, Ramakrishanagara (Brokers Excuse)
8050323773
(Between 6.00pm to 8.00pm)

HOUSE FOR SALE
20X35 Vidyaranyapuram Bata Showroom Opposite Road, Mysore
9986592352

CHANGE OF NAME
I UNDERSIGNED NEMICHAND, FATHER OF DAKSH N SANKALA RESIDING AT 642 BASAVESHWARA ROAD, FORT MOHALLA, MYSORE HAVE CHANGED MY SON'S NAME FROM DAKSH SANKALA TO DAKSH N SANKALA VIDE AFFIDAVIT SWORN BEFORE NOTARY S.V. NAGENDRA, DATED 19/11/2025
Sd/- NEMICHAND

FOR RENT
1st Floor, 7th Main H Block, Ramakrishnanagar 2 BHK / Attached
Mob: 9448976485 9886604002

DOCUMENT LOST
Property Blongs to Shamhed Begum .A. H.No: 4, MIG, 1 Akshya Bhandar, Kalyangiri Nagar, Mysru-19, MUDA Allotment Copy, Possession Letter, Registration Documents, Title Deed Etc, Document Hanebeen Lost, at Mysore. Finders Please Contact
9945345651

ಛತ್ರ ಖಾಲಿ ಇದೆ
ವೈಷ್ಣವಿ Convention Hall, Industrial Suburb, Mysuru-570008
Date: 10-12-2025 & 11-12-2025
8310625481

COMMERCIAL SITE FOR SALE
South Face Total 1380 Sq Feet 60 Feet Road Tripuramba Railway Layout Nagartha Halli Mysore. 2Km From Ring Road Price 50Lacks
9036083987

WANTED
01. Education: BE/DIPLOMA CIVIL GRADUATES
02. ACCOUNTANT: B Com, 02 Year Experience in Billing, Salary, ESI/PF
9449820243

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್–14,000 ಮತ್ತು ಸೂಪರ್ ವೈಸರ್–15,000. ESI & PF ಹಾಗೂ HELPER ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸಿನ ಮಿತಿ–50ವರ್ಷ
9035367083
6361548626

CHANGE OF NAME
I, Sadiya Khanam, W/o. Abdul Wajid, residing at No. MIG-1, Badamakan Extension, Tippu Circle, N.R. Mohalla, Mysore-570007 have changed my name from Sadiya Khanam to Sadiya Khanum vide afidavit sworn before Notary C.R. Seetharam, Mysore dated 14.11.2025. Sd/-Sadiya Khanum

CHANGE OF NAME
By virtue of an affidavit sworn before Asadulla Khan, Notary, Mysore on 03-11-2025, 1, SUMAYA SULTANA W/o Saifuddin, residing at No 128, B Block, DTS Rai Nagar, Sathagalli, Mysore 570019 have changed my minor son name from SAFIN FAIZAN to FAIZAN SAIF. Henceforth, my son shall be known as FAIZAN SAIF for all purposes.
Sd/- SUMAYA SULTANA

PROPERTIES FOR SALE
@Jayanagar, J.L. Puram, Gokulam, Vijayanagara
93421 25252

SITES WANTED
@ Nagawala, Yelwala, Acharya Vidya Kula, Central St.Joseph School & Mys-Surroundings
Quick Regn.
95388 39926

FOR SALE
30x40 AND 40x60 Site in Vijayanagar 4th Stage
8884133677

FEMALE WARDENS REQUIRED
Qualification: Any Degree/PUC
Good communication skills (English) Full time job
Location : Mysore
Age criteria ; 30 and above
Number : 7428240044

CHANGE OF NAME
I, Pradeep N, S/o. L. Narasimha aged 45yrs, residing at # 1005, 9th Main, 9th Cross, behind Government School, Bogadi, Mysuru-570026 have changed my minor son, aged 14 yrs name from Preetham P to Mayank P vide afidavit sworn before Notary K. Borappa, Mysore on 18.11.2025.
Sd/- Pradeep N

HOUSE FOR RENT
40x60 House for rent in Saraswathipuram & Kuvempunagar.
Call: 7353430309

HOUSE FOR SALE
Measuring - 21' x 48' (1,008 Sqft), West Facing, G/F-2 Shops & House, F/F- House, Opposite to Lakshmi Theatre, K.R. Mohalla, Walkable Distance to Mysore Palace, Mysuru.
Genuine Buyers may contact:
9035588489

URGENTLY REQUIRED ACCOUNTANT
For working in Sapthagiri enterprises (Kuvempunagara)
Age Below 35 years
Salary - 25,000/-
Tally & 5 years experience compulsory.
For stock in & out billing
Contact - 9880151303
Name - Bharath

ಬೇಕಾಗಿದ್ದಾರೆ
ಮೈಸೂರಿನ ಜೇನಿ ಕಂಪನಿಯಲ್ಲಿ ಮಾರ್ಕೆಟಿಂಗ್ ಕೆಲಸವನ್ನು ಮಾಡಲು ಹುಡುಗರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 30ರ ವರೆಗೆ ವಿದ್ಯಾರ್ಹತೆ: ಪಿಯುಸಿ ಅಥವಾ ಯಾವುದೇ ಪದವಿ. ಸಂಪರ್ಕಿಸಿ:
63648 88415 / 79753 55816

ಬೇಕಾಗಿದ್ದಾರೆ
ಪತ್ರಬರಹಗಾರರ ಕಛೇರಿಗೆ ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಅನುಭವವುಳ್ಳ ಮಹಿಳಾ ಡಿ.ಟಿ.ಪಿ ಆಪರೇಟರ್ ಬೇಕಾಗಿದ್ದಾರೆ
ವಿಳಾಸ: ಕಾಳಿದಾಸ ಎಂಟರ್‌ಪ್ರೈಸಸ್, ತ್ರಿವೇಣಿ ಸರ್ಕಲ್, ಡಾ. ರಾಜ್‌ಕುಮಾರ್ ರಸ್ತೆ, ಕಲ್ಯಾಣಗಿರಿನಗರ, ಮೈಸೂರು
9880999105

SITE FOR SALE
MUDA APPROVED 30x40 Near Sri Rampura Ring Road, Mysore
8050345574

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸಹಕಾರ ಸಂಘಗಳು ಬಲಿಷ್ಠವಾದಲ್ಲಿ ರೈತರಿಗೆ ಹೆಚ್ಚು ಅನುಕೂಲ

ಹುಣಸೂರಿನ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಪ್ರತಿಪಾದನೆ

ಹುಣಸೂರು, ನ.19– ಸಹಕಾರಿ ಸಂಘಗಳು ಬಲಿಷ್ಠವಾದಲ್ಲಿ ರೈತರಿಗೆ ಹೆಚ್ಚು ಸಹಕಾರಿಯಾಗಲಿದ್ದು, ಸಹಕಾರಿ ಸಂಘಗಳನ್ನು ಪಕ್ಷಾತೀತವಾಗಿ ರಾಜಕೀಯವನ್ನು ಬದಿಗಿಟ್ಟು ಶ್ರಮಿಸಿದಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಜನತೆಗೆ ಅನುಕೂಲವಾಗುತ್ತದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಪ್ರಾಯಪಟ್ಟರು.

ನಗರದ ಶ್ರೀ ಮುನೇಶ್ವರ ಕಾವಲ್ ಮೈದಾನದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಒಕ್ಕೂಟ ಹಾಗೂ ನಾನಾ ಸಹಕಾರ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಹುಣಸೂರು ಕ್ಷೇತ್ರದ ಜನತೆಯ ಆಶೀರ್ವಾದದಿಂದ ಪ್ರಥಮ ಬಾರಿಗೆ ಎಂಡಿಸಿಸಿ ಬ್ಯಾಂಕ್ ನಿರ್ದೇಶಕನಾಗಿ ಆಯ್ಕೆಯಾಗಿದ್ದು ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಸಾಲ ಸೌಲಭ್ಯಗಳನ್ನು ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಭಾರತ ದೇಶದಲ್ಲಿ ಸಹಕಾರ ಸಂಘವನ್ನು ಮೊಟ್ಟ ಮೊದಲು ಪ್ರಾರಂಭ ಮಾಡುವುದರ ಮುಖಾಂತರ ಸಹಕಾರಿ ಕ್ಷೇತ್ರಕ್ಕೆ ಸಿದ್ದಗೆರೆ ಸಣ್ಣ ರಾಮನಗೌಡ ಪಾಟೀಲ್ ತಮ್ಮದೇ ಆದ ಕೊಡುಗೆಯನ್ನು ನೀಡಿದಂತಹ ಮಹಾನ್ ವ್ಯಕ್ತಿ. ಅವರನ್ನು ಈ ದಿನ ಸಹಕಾರಿಗಳೆಲ್ಲ ಸ್ಮರಿಸಬೇಕು ಎಂದರು.

ತಾಲೂಕಿನ ಪ್ರತಿ ಗ್ರಾಮಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘವಿದ್ದು ಸಂಘದ ಕಟ್ಟಡಗಳಿಗೆ ಶಾಸಕರ ಅನುದಾನದಿಂದ 50 ಲಕ್ಷ ರೂ. ಅನುದಾನ ಕೊಟ್ಟಿದ್ದೇನೆ. ಅಲ್ಲದೆ ಕೃಷಿ ಪತ್ತಿನ ಸಹಕಾರ ಸಂಘಗಳು ಕೃಷಿಗೆ 10,000 ದಿಂದ 3, ಲಕ್ಷ ಸಾಲವನ್ನು ನೀಡುತ್ತಿದ್ದು ಬಿತ್ತನೆ ಬೀಜ, ವ್ಯವಸಾಯ ಮಾಡಲು ಸಹಕಾರಿಯಾಗಿವೆ.



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಒಕ್ಕೂಟ ಹಾಗೂ ಸಹಕಾರ ಇಲಾಖೆ ಸಹಯೋಗದಲ್ಲಿ ಹುಣಸೂರಿನ ಮುನೇಶ್ವರ ಮೈದಾನದಲ್ಲಿ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರೂ ಆದ ಶಾಸಕ ಜಿ.ಡಿ.ಹರೀಶ್‌ಗೌಡ ಮತ್ತಿತರರು ಪಾಲ್ಗೊಂಡಿದ್ದರು. ಈ ವೇಳೆ ಮೈಸೂರು ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘಕ್ಕೆ 2025ರ 'ಅತ್ಯುತ್ತಮ ಸಹಕಾರ ಸಂಘ' ಪ್ರಶಸ್ತಿ ಬಂದಿರುವ ಹಿನ್ನೆಲೆಯಲ್ಲಿ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

ಈ ವ್ಯವಸ್ಥೆ ಇಲ್ಲದಿದ್ದರೆ ರೈತ ಬಾಂಧವರು ದುಡ್ಡು ಇರುವವರ ಬಳಿ ಶೇ.3ರಷ್ಟು ಬಡ್ಡಿ ದರದಲ್ಲಿ ಸಾಲ ಪಡೆಯಬೇಕಾಗಿತ್ತು. ಇದರಿಂದ ಸಹಕಾರಿ ಸಂಘಗಳು ರೈತರಿಗೆ ಮರೆಯಾಗುತ್ತಿತ್ತು. ಇದರಿಂದ ಕೃಷಿ ಕ್ಷೇತ್ರ ಹಿನ್ನಡೆಯಾಗುತ್ತಿತ್ತು ಮುಂದೆ ಸಹಕಾರ ಕ್ಷೇತ್ರಕ್ಕೆ ಹೊಸ ಸದಸ್ಯರನ್ನು ಸೇರ್ಪಡೆ ಮಾಡಿ ಸಹಕಾರ ಕ್ಷೇತ್ರವನ್ನು ಬೆಳೆಸಲು ಪ್ರತಿಯೊಬ್ಬರು ಪಣ ತೊಡಬೇಕೆಂದರು.

ಮೈಮುಲ್ ನೂತನ ಅಧ್ಯಕ್ಷ ಕೆ.ಹಿರೇಗೌಡ ಮಾತನಾಡಿ, ಹಿಂದೆ ತಾಲೂಕಿನಲ್ಲಿ 42 ಸಹಕಾರಿ ಸಂಘಗಳು ಇದ್ದವು. ಪ್ರಸ್ತುತ ದಿನಗಳಲ್ಲಿ ಸುಮಾರು 215 ಸಹಕಾರಿ ಸಂಘಗಳು ಸ್ಥಾಪನೆ ಆಗಿವೆ. ಇದು ಎಲ್ಲರ ಪರಿಶ್ರಮದಿಂದ ಆಗಿರುವ ಕೆಲಸ ಸಹಕಾರ ಸಂಘದ ಸ್ಥಾಪನೆಯಲ್ಲಿ ಹುಣಸೂರು ಪ್ರಥಮ ಸ್ಥಾನದಲ್ಲಿದೆ. ಹಾಲು ಉತ್ಪಾದನೆ ಹಾಲಿನ ಗುಣಮಟ್ಟದಲ್ಲಿಯು ಸಹ ಮೈಸೂರು ಡೈರಿ ಮುಂದೆ ಇದೆ. ಪ್ರಸ್ತುತ ಹಾಲು ಒಂದು ಲಕ್ಷದ ಎಂಬತ್ತು ಸಾವಿರ ಲೀಟರ್ ಉತ್ಪಾದನೆ ದಾಟಿದೆ. ಸಹಕಾರ ಸಂಘ ಉಳಿಯುವುದಕ್ಕೆ ಬೆಳೆಯುವುದಕ್ಕೆ ಮೂಲ ಸಹಕಾರಿಗಳೇ ಕಾರಣ ಅಲ್ಲದೇ, ರೈತರಿಗೆ ಮುಂದಿನ ದಿನಗಳಲ್ಲಿ ಸಹಕಾರ ಸಂಘದಿಂದ ರೈತರಿಗೆ ಅನುಕೂಲವಾಗುವಂತಹ ಕೆಲಸಗಳನ್ನು ಮಾಡಿಕೊಡುತ್ತೇವೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷ ಬಿ.ಎನ್.ಸದಾನಂದ, ನಿರ್ದೇಶಕರಾದ ಎ.ಟಿ.ಸೋಮಶೇಖರ್, ಕೆ.ಉಮಾಶಂಕರ್ ಶ್ರೀಮತಿ ಶಿವಗಾಮಿ, ಕೆ.ಜಿ.ಮಹೇಶ್ ಕುರುಹಟ್ಟಿ, ಬಿ ಮಹದೇವಸ್ವಾಮಿ, ರಾಮಕೃಷ್ಣೇಗೌಡ, ಎಸ್. ಸ್ವರೂಪ್ ಕುಮಾರ್, ತಾಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷರು ಹೆಚ್.ಪ್ರೇಮ್ ಕುಮಾರ್, ಉಪಾಧ್ಯಕ್ಷ ಹೊನ್ನಪ್ಪ ರಾವ್ ಕಾಳಿಂಗೆ, ಎಚ್. ಉದಯಕುಮಾರ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷರಾದ ಬಸವಲಿಂಗಯ್ಯ, ಅಶ್ವಾಳ್ ಕೆಂಪೇಗೌಡ, ಹೆಚ್.ಟಿ.ಬಾಬು, ಜಿ.ಎನ್. ವೆಂಕಟೇಶ್ ಸಸ್ಯರಾದ ಗೋವಿಂದೇಗೌಡ, ಸೇರಿದಂತೆ ಇತರರು ಹಾಜರಿದ್ದರು. ಇದೇ ಸಂದರ್ಭದಲ್ಲಿ ಸಹಕಾರಿ ಪುರಸ್ಕೃತರನ್ನು ಸನ್ಮಾನಿಸಲಾಯಿತು.

ಸಾರ್ವಜನಿಕರಿಂದ ಬಂದ ಉಪಟಳ ದೂರಿನ ಹಿನ್ನೆಲೆಯಲ್ಲಿ

ತಿ.ನರಸೀಪುರ ರೌಡಿ ಶೀಟರ್ ರಾಯಚೂರು ಜಿಲ್ಲೆಗೆ ಗಡಿಪಾರು

ತಿ.ನರಸೀಪುರ, ನ.19– ಪಟ್ಟಣದ ಪೊಲೀಸ್ ಠಾಣೆಯ ರೌಡಿ ಶೀಟರ್ ಮಣಿಕಂಠ ರಾಜ್ ಗೌಡ ಎಂಬಾತನನ್ನು ತಿ.ನರಸೀಪುರ ಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯಿಂದ ರಾಯಚೂರು ಜಿಲ್ಲೆಯ ಸಿಂಧನೂರು ಬಳಗಾನೂರು ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ ಎಂದು ಪಟ್ಟಣ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಧನಂಜಯ ತಿಳಿಸಿದ್ದಾರೆ.

ಪಟ್ಟಣ ಪೊಲೀಸ್ ಠಾಣೆಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಗಡಿಪಾರು ಆದೇಶವನ್ನು ಅಧಿಕೃತವಾಗಿ ಪ್ರಕಟಿಸಿ ಮಾತನಾಡಿದ ಅವರು ಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯ ರೌಡಿ ಶೀಟರ್ ಮಣಿಕಂಠರಾಜ್ ಗೌಡ ಎಂಬಾತನ ಮೇಲೆ ಸಾರ್ವಜನಿಕರಿಂದ ಹಲವಾರು ದೂರುಗಳು ಕೇಳಿ ಬಂದಿದ್ದವು. ಮನಸೋ ಇಚ್ಛೆ ವಸೂಲಿ ದಂಧೆ ಗಿಳಿದು ಬೀದಿ ಬದಿ ವ್ಯಾಪಾರಿಗಳಿಗೆ ತೊಂದರೆ ನೀಡುವ ಜೊತೆಗೆ ತಾನು ವಸೂಲಿ ಮಾಡದೇ ತನ್ನ ಸಹಚರರನ್ನು ಮುಂದಿಟ್ಟುಕೊಂಡು ಹೆಚ್ಚಿನ ಹಣಕ್ಕಾಗಿ ಪೀಡಿಸಿ, ಹಣ ಕೊಡದಿದ್ದರೆ ಬೆದರಿಕೆಯೊಡ್ಡುತ್ತಿದ್ದನೆಂಬ ದೂರು ಕೇಳಿ ಬಂದಿದ್ದಲ್ಲದೇ, ಇನ್ನೂ ಹೆಚ್ಚಿನ ಸಮಾಜ ಘಾತಕ ಕೆಲಸಗಳಲ್ಲಿ ಭಾಗಿಯಾಗಿದ್ದನೆಂಬ ದೂರಿನ ಹಿನ್ನೆಲೆಯಲ್ಲಿ ತಿ.ನರಸೀಪುರ ಪೊಲೀಸ್ ಠಾಣಾ ವ್ಯಾಪ್ತಿಯಿಂದ ಬೇರೆ ಜಿಲ್ಲೆಗೆ ಈತನನ್ನು ಗಡಿಪಾರು ಮಾಡಬೇಕೆಂದು ಇಲಾಖೆ ಮೇಲಧಿಕಾರಿಗಳ ಮುಖಾಂತರ ಮೈಸೂರು ಉಪ ವಿಭಾಗಾಧಿಕಾರಿಗಳಿಗೆ ದೂರು ಸಲ್ಲಿಸಲಾಗಿತ್ತು ಎಂದು ವಿವರಿಸಿದರು.



ಮಣಿಕಂಠರಾಜ್‌ಗೌಡನನ್ನು ಪೊಲೀಸರು ರಾಯಚೂರು ಜಿಲ್ಲೆಗೆ ಗಡಿಪಾರು ಮಾಡಲು ಕರೆದೊಯ್ಯುತ್ತಿರುವುದು.

ಈತನಿಂದ ತಿ.ನರಸೀಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಯಾವುದೇ ಅನಾಹುತಗಳು ಆಗದಂತೆ ಕಾನೂನು ವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಉಪ ವಿಭಾಗಾಧಿಕಾರಿಗಳು ವಿಚಾರಣೆ ನಡೆಸಿ ಗಡಿಪಾರು ಮಾಡುವ ಆದೇಶ ನೀಡಿದ್ದಾರೆ ಎಂದು ತಿಳಿಸಿದರು. ಹಾಗಾಗಿ ರೌಡಿ ಶೀಟರ್ ಮಣಿಕಂಠರಾಜ್‌ಗೌಡ ನನ್ನ ಮುಂದಿನ 6 ತಿಂಗಳುಗಳ ಕಾಲ ತಿ.ನರಸೀಪುರ ಪೊಲೀಸ್ ಠಾಣೆ ವ್ಯಾಪ್ತಿಯಿಂದ ರಾಯಚೂರು ಜಿಲ್ಲೆ ಸಿಂಧನೂರು ವ್ಯಾಪ್ತಿಯ ಬಳಗಾನೂರು ಪೊಲೀಸ್ ಠಾಣೆ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದ್ದು ಪಟ್ಟಣದ ಇರಿಗೇಷನ್ ಐಬಿಯಲ್ಲಿ ಅವಿತು ಕುಳಿತಿದ್ದ ಮಣಿಕಂಠರಾಜ್ ಗೌಡನನ್ನು ಇಂದು ಬೆಳಿಗ್ಗೆ ವಶಕ್ಕೆ ಪಡೆದು ಪೊಲೀಸರ ಬೆಂಗಾವಲಿನಲ್ಲಿ ಗಡಿಪಾರಾಗಿರುವ ರಾಯಚೂರು ಜಿಲ್ಲೆಗೆ ಕಳುಹಿಸಿಕೊಡಲಾಗುತ್ತಿದೆ ಎಂದು ತಿಳಿಸಿದರು.

ಐಬಿ ಬಿಟ್ಟರೆ ಒಳ್ಳೆಯದು....! ಮಣಿಕಂಠರಾಜ್ ಗೌಡನ ರೌಡಿ ಚಟು ವಟಿಕೆಯಿಂದ ಭಾದಿತರಾಗಿದ್ದವರು ಯಾವುದೇ ಅಂಜಿಕೆ, ಅಳುಕಿಲ್ಲದೇ ನಿರ್ಭೀತಿಯಿಂದ ಇರುವಂತೆ ಕೋರಲಾಗಿದ್ದು, ಐಬಿಯಲ್ಲಿ ಕುಳಿತು ರೌಡಿ ಶೀಟರ್‌ಗಳನ್ನು ಮುಂದಿಟ್ಟುಕೊಂಡು ಇನ್ನಿತರೆ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದವರು, ಪೊಲೀಸ್ ಠಾಣೆಗೆ ಬಂದು ಪೊಲೀಸರ ಕಾರ್ಯವನ್ನೂ ಮೀರಿ ಮಧ್ಯೆ ಪ್ರವೇಶ ಮಾಡಿ ರಾಜೀ ಪಂಚಾಯ್ತಿ ಮಾಡಿ, ಐಬಿಯಲ್ಲಿ ಕುಳಿತು ನ್ಯಾಯ ಪಂಚಾಯ್ತಿ ಮಾಡಿ ವಸೂಲಿ ದಂಧೆ ಮಾಡುತ್ತಿದ್ದವರಿಗೆ ಗಡಿಪಾರು ಆದೇಶ ಎಚ್ಚರಿಕೆ ಪಾಠವಾಗಿದೆ.

ಹಾಗಾಗಿ ಐಬಿ ಗಿರಾಕಿಗಳು ಐಬಿ ಬಿಟ್ಟರೆ ಒಳ್ಳೆಯದು, ಪೊಲೀಸ್ ಇಲಾಖೆ ಕಾನೂನು ಬದ್ಧವಾಗಿ ಗಟ್ಟಿಯಾಗಿ ಕೆಲಸ ಮಾಡುತ್ತಿದೆ. ಯಾವುದೇ ರೀತಿಯ ರೌಡಿ ಚಟುವಟಿಕೆಗಳಿಗೆ ಠಾಣಾ ವ್ಯಾಪ್ತಿಯಲ್ಲಿ ಅವಕಾಶವಿಲ್ಲ. ಪುಡಿ ರೌಡಿಗಳಿಗೆ ಪೊಲೀಸರು ಹೆದರಿಕೊಳ್ಳುವಂತವರು ಯಾರೂ ಇಲ್ಲ. ಹಾಗಾಗಿ ರೌಡಿ ಚಟುವಟಿಕೆಯಲ್ಲಿ ತೊಡಗಿ ಸಮಾಜಘಾತುಕ ಕೆಲಸದಲ್ಲಿ ತೊಡಗಿಕೊಂಡರೆ ಕಾನೂನು ಮೀರಿ ನಡೆದರೆ ಅಂತಹವರ ಮೇಲೆ ಇಲಾಖೆ ಕಠಿಣ ಕ್ರಮ ಕೈಗೊಳ್ಳಲಿದೆ ಎಂದರು.

ಬನ್ನೂರು ನಗರಸಭೆ, ನರಸೀಪುರ ಪುರಸಭೆಗೆ ಆಡಳಿತಾಧಿಕಾರಿ ನೇಮಕ

ತಿ.ನರಸೀಪುರ: ರಾಜ್ಯ ಸರ್ಕಾರವು ಇತ್ತೀಚೆಗೆ ಮಹತ್ವದ ಆದೇಶ ಹೊರಡಿಸಿದ್ದು, ಮೈಸೂರು ಜಿಲ್ಲೆಯ ಬನ್ನೂರು ನಗರಸಭೆ ಮತ್ತು ನರಸೀಪುರ ಪುರಸಭೆಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿ ಆದೇಶ ನೀಡಿದೆ. ಈ ಆದೇಶದೊಂದಿಗೆ ಈ ಸಂಸ್ಥೆಗಳಲ್ಲಿ ಸುಮಾರು ಏಳೂವರೆ ವರ್ಷಗಳ ಕಾಲ ಜನಪ್ರತಿನಿಧಿಗಳಿಂದ ನಡೆದಿದ್ದ ಆಡಳಿತವು ಅಂತ್ಯಗೊಂಡಿದೆ.

ಆಡಳಿತಾಧಿಕಾರಿ ನೇಮಕಕ್ಕೆ ಕಾರಣ ಕಳೆದ 7.5 ವರ್ಷಗಳಿಂದ ಅಧಿಕಾರದಲ್ಲಿದ್ದ ಈ ಎರಡು ಸ್ಥಳೀಯ ಸಂಸ್ಥೆಗಳ (ಬನ್ನೂರು ನಗರಸಭೆ ಮತ್ತು ನರಸೀಪುರ ಪುರಸಭೆ) ಆಡಳಿತ ಮಂಡಳಿಯ ಅವಧಿ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಈ ಕುರಿತು ನ.10, 2025 ರಂದು ಅಧಿಕೃತ ಆದೇಶ ಹೊರಬಿದ್ದಿದೆ.

ಸಾರ್ವತ್ರಿಕ ಚುನಾವಣೆಗಳು ನಡೆದು ಹೊಸ ಆಡಳಿತ ಮಂಡಳಿ ರಚನೆಯಾಗುವವರೆಗೂ ಪಟ್ಟಣಗಳ ದೈನಂದಿನ ಕಾರ್ಯ ಚಟುವಟಿಕೆಗಳು ಹಾಗೂ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗದಂತೆ ನೋಡಿಕೊಳ್ಳಲು ಈ ಆಡಳಿತಾಧಿಕಾರಿಗಳ ನೇಮಕವು ಸಹಾಯಕವಾಗಲಿದೆ.

ತಿದ್ದುಪಡಿ ಆದೇಶದ ನಿರೀಕ್ಷೆ: ಬನ್ನೂರು ಮತ್ತು ನರಸೀಪುರ ಮಾತ್ರವಲ್ಲದೆ, ಅವಧಿ ಮುಕ್ತಾಯಗೊಂಡಿರುವ ಉಳಿದ ನಗರ ಸ್ಥಳೀಯ ಸಂಸ್ಥೆಗಳಿಗೂ ಆಡಳಿತಾಧಿಕಾರಿಗಳನ್ನು ನೇಮಿಸುವ ಕುರಿತು ಸರ್ಕಾರ ಗಂಭೀರ ಚಿಂತನೆ ನಡೆಸಿದೆ. ಈ ಬಗ್ಗೆ ಶೀಘ್ರದಲ್ಲಿಯೇ ಮತ್ತೊಂದು ಆದೇಶ ಹೊರಬೀಳುವ ಸಾಧ್ಯತೆ ಇದೆ.

ಸಂಬಂಧಪಟ್ಟ ಇಲಾಖೆಯಿಂದ ಶೀಘ್ರದಲ್ಲೇ ಈ ಕುರಿತು ತಿದ್ದುಪಡಿ ಆದೇಶವೊಂದನ್ನು ಹೊರಡಿಸುವ ನಿರೀಕ್ಷೆಯಿದ್ದು, ರಾಜ್ಯದಾದ್ಯಂತ ಅವಧಿ ಮುಗಿದಿರುವ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಡಳಿತಾಧಿಕಾರಿಗಳ ನೇಮಕ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

ಕೋಟೆಯಲ್ಲಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಭೂಮಿ ಪೂಜೆ

ಹೆಚ್.ಡಿ.ಕೋಟೆ: ನಾಡಿನ ಶಕ್ತಿ ದೇವತೆ ಶ್ರೀ ಚಾಮುಂಡೇಶ್ವರಿ ತಾಯಿಗೆ ತಾಲೂಕಿನಲ್ಲಿ ಅಸಂಖ್ಯಾತ ಭಕ್ತರಿದ್ದು ನೂತನ ದೇವಸ್ಥಾನ ನಿರ್ಮಾಣ ಮಾಡುತ್ತಿದ್ದು ಇದಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಹೌಸಿಂಗ್ ಬೋರ್ಡ್ ಸಮೀಪ 45 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಶ್ರೀ ಚಾಮುಂಡೇಶ್ವರಿ ನೂತನ ದೇವಸ್ಥಾನಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಚಾಮುಂಡೇಶ್ವರಿ ದೇವಸ್ಥಾನ ಮತ್ತು ಶ್ರೀ ಲಕ್ಷ್ಮಿ ವರದರಾಜಸ್ವಾಮಿ ದೇವಸ್ಥಾನಗಳಲ್ಲಿ ಪ್ರತಿ ವರ್ಷ ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವ ಹಾಗೂ ಬ್ರಹ್ಮ ರಥೋತ್ಸವ ಹಾಗೂ ನಾಡ ಹಬ್ಬ ದಸರಾ ವಿಜಯದಶಮಿ ಉತ್ಸವ ಕಾರ್ಯಕ್ರಮಗಳನ್ನು ವಿಜೃಂಭಣೆಯಿಂದ ನಡೆಸುತ್ತ ಬಂದಿರುವುದು ಸಂತಸದ ವಿಷಯವಾಗಿದೆ ಎಂದರು.



ಹೆಚ್.ಡಿ.ಕೋಟೆ ಪಟ್ಟಣದ ಹೌಸಿಂಗ್ ಬೋರ್ಡ್ ಸಮೀಪ 45 ಲಕ್ಷ ರೂ. ವೆಚ್ಚದಲ್ಲಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನವನ್ನು ನಿರ್ಮಾಣಕ್ಕೆ ಶಾಸಕ ಅನಿಲ್ ಚಿಕ್ಕಮಾದು ಭೂಮಿಪೂಜೆ ನೆರವೇರಿಸಿದರು.

ದೇವಸ್ಥಾನದ ನಿವೇಶನಕ್ಕೆ ಸಂಬಂಧಿಸಿದಂತೆ ಇದ್ದ ಸಮಸ್ಯೆಯನ್ನು ಪುರಸಭೆ ಸದಸ್ಯರೊಂದಿಗೆ ಚರ್ಚಿಸಿ ಬಗೆಹರಿಸಲಾಗಿದೆ. ದೇವಸ್ಥಾನ ನಿರ್ಮಾಣ ಮಾಡಲು ಹಲವಾರು ದಾನಿಗಳು ಸಹಕಾರ ನೀಡುತ್ತಿದ್ದು, ಶಾಸಕರ ನಿಧಿಯಿಂದ ಹಾಗೂ ವೈಯಕ್ತಿಕವಾಗಿ ಸಹಕಾರ ನೀಡುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ದೇವಸ್ಥಾನ ಸಮಿತಿ ಅಧ್ಯಕ್ಷ ನಟರಾಜು, ಗೌರವಾಧ್ಯಕ್ಷ ಎಂ.ಸಿ. ದೊಡ್ಡನಾಯಕ, ಖಜಾಂಚಿ ಸಿ.ಎನ್.ನಾಗಣ್ಣ ಸಮಿತಿ ಸದಸ್ಯರಾದ ವೀರಪ್ಪ, ರಾಮಯ್ಯ, ಡೈರಿ ಶ್ರೀಕಾಂತ್, ಲಕ್ಷ್ಮಿ ನರಸಿಂಹ, ನಾರಾಯಣಗೌಡ, ಹೆಚ್.ಸಿ.ಮಂಜುನಾಥ್, ಹೆಚ್.ಕೆ.ಪ್ರಕಾಶ್, ರಮೇಶ್, ನಾಗೇಗೌಡ ಮುಖಂಡರಾದ ಗಿರಿಗೌಡ, ಗುಂಡಣ್ಣ, ಪಟೇಲ್ ನಾಗರಾಜಶೆಟ್ಟಿ, ರಾಮಸ್ವಾಮಿ, ಕನ್ನಡ ಪ್ರಮೋದ, ವಿನಯ್ ಭಜರಂಗಿ, ಏಜಾಜ್ ಪಾಷ, ಇಬ್ರಾಹಿಂ, ಪರಶಿವಮೂರ್ತಿ, ಹೆಚ್.ಎನ್.ನಾಗರಾಜ್, ಮಧುಕುಮಾರ್, ಆಸಿಫ್, ನರಸಿಂಹಮೂರ್ತಿ, ಅನಿಲ್, ಚಾಕಹಳ್ಳಿ ಕೃಷ್ಣ ರಾಜು ಬಿಡಗಲು, ಮಹದೇವಪ್ಪ ಸುಧಾಕರ್, ದಿನೇಶ್, ಶಂಕರ್, ಸೋಮು, ಗಣೇಶ್, ನಿಜಗುಣ, ಪಳನಿ ಸ್ವಾಮಿ, ದೇವರಾಜು, ಸ್ವಾಮಿ, ಮಂಜುನಾಥ್, ಗೋವಿಂದ ಇದ್ದರು.

ಸಿದ್ದಾಪುರ ಪಿಎಸಿಸಿಎಸ್‌ಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಸಿದ್ದಾಪುರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಲಾಯಿತು.

ಕೆ.ಆರ್.ನಗರ: ತಾಲೂಕಿನ ಸಿದ್ದಾಪುರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಶ್ರೀರಾಮಪುರದ ಕೃಷ್ಣೇಗೌಡ ಮತ್ತು ಉಪಾಧ್ಯಕ್ಷರಾಗಿ ಎ.ಆರ್.ಮಹದೇವ್ ಅವಿರೋಧವಾಗಿ ಆಯ್ಕೆಯಾದರು.

ಈ ವರೆಗೆ ಅಧ್ಯಕ್ಷರಾಗಿದ್ದ ಎಂ.ಎಸ್.ಹರಿ ಚಿದಂಬರ ಮತ್ತು ಉಪಾಧ್ಯಕ್ಷೆಯಾಗಿದ್ದ ಎನ್.ಡಿ.ದೇವಮ್ಮ ಅವರ ರಾಜೀನಾಮೆಯಿಂದ ತೆರನಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಇವರಿಬ್ಬರನ್ನು ಹೊರತುಪಡಿಸಿ ಬೇರಾರು ನಾಮಪತ್ರ ಸಲ್ಲಿಸದ್ದರಿಂದ ಚುನಾವಣಾಧಿಕಾರಿಯಾಗಿದ್ದ ಸಹಕಾರ ಇಲಾಖೆಯ ಅಭಿವೃದ್ಧಿ ಅಧಿಕಾರಿ ಎಸ್.ರವಿ ಅವಿರೋಧ ಆಯ್ಕೆ ಪ್ರಕಟಿಸಿದರು.

ಚುನಾವಣಾ ಸಭೆಯಲ್ಲಿ ನಿರ್ದೇಶಕರಾದ ರಂಗೇಶ್ ಕುಮಾರ್, ಅನಿಲ್‌ರಾಜ್, ಕೆ. ಗೋಪಾಲಚಂದ್ರ, ಚಿಕ್ಕೀರೇಗೌಡ, ಕೆ.ವಿ. ಕೃಷ್ಣೇಗೌಡ, ಮಂಜಮ್ಮ, ಮೋಹನ್ ಕುಮಾರ್, ಜಿಲ್ಲಾ ಬ್ಯಾಂಕ್ ಪ್ರತಿನಿಧಿಗಳಾದ ಎನ್. ದಿನೇಶ್, ಟಿ.ಉಮೇಶ್, ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಂ.ಆರ್.ಪ್ರೇಮ ಕುಮಾರ್, ಕಾರ್ಯದರ್ಶಿ ಎಸ್.ಪಿ.ತ್ಯಾಗರಾಜು ಸಹಕಾರ ನೀಡಿದರು

ಅವಿರೋಧ ಆಯ್ಕೆಗೆ ಸಹಕರಿಸಿದ ಸಂಘದ ಎಲ್ಲಾ ನಿರ್ದೇಶಕರುಗಳಿಗೆ ಧನ್ಯವಾದಗಳನ್ನು ಸಲ್ಲಿಸಿದರು. ಲಕ್ಷ್ಮಿನಾರಾಯಣ, ಎಸ್. ದೊಡ್ಡೇಗೌಡ ಎಸ್.ಆರ್.ಆನಂದ್, ಗೌಡಯ್ಯ, ಕೆ.ಪಿ.ಚಂದ್ರೇಗೌಡ, ಜಯರಾಮ, ಕೆ.ಎಸ್. ಬಾಲು, ಎಸ್.ಎಂ.ಚಂದ್ರು ಅವರುಗಳು ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಬೆಟ್ಟದಪುರ ಶಾಲೆಯಲ್ಲಿ ಪ್ರತಿಭಾ ಕಾರಂಜಿ



ಬೆಟ್ಟದಪುರ: ಗ್ರಾಮದ ಡಿಟಿಎಂಎನ್ ಶಾಲೆಯಲ್ಲಿ ಮಂಗಳವಾರ ವಲಯ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಬಿಇಒ ರವಿಪ್ರಸನ್ನ ಉದ್ಘಾಟಿಸಿದರು. ವೇದಿಕೆ ಕಾರ್ಯಕ್ರಮದಲ್ಲಿ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸುಮಾರು 18 ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಜನಪದ ನೃತ್ಯ, ಪ್ರಬಂಧ ಸ್ಪರ್ಧೆ, ದೇಶಭಕ್ತಿ ಗೀತೆ, ರಸಪ್ರಶ್ನೆ ಕಾರ್ಯಕ್ರಮ, ಚಿತ್ರಕಲೆ, ಕ್ಲೇ ಮಾಡಲಿಂಗ್ ಸೇರಿದಂತೆ ಹಲವು ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಸ್ಪರ್ಧೆಗಳ ಬಳಿಕ ವಿಜೇತ ಮಕ್ಕಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರವನ್ನು ವಿತರಣೆ ಮಾಡಲಾಯಿತು.

ಶಿಕ್ಷಣ ಇಲಾಖೆಯ ಇಸಿಒ ಕೆ.ಎಂ ಸ್ವಾಮಿ, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಚಂದ್ರಶೇಖರ್, ಬಡ್ತಿ ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷ ಎ.ಬಿ ವೆಂಕಟೇಶ್, ಸಂಸ್ಥೆಯ ಅಧ್ಯಕ್ಷ ಚಂದ್ರಶೇಖರ್, ಆಡಳಿತಾಧಿಕಾರಿ ನಟರಾಜ್ ಜೆ.ಸಿ, ಖಜಾಂಚಿ ರವಿ ಪಿ, ನಿರ್ದೇಶಕರಾದ ಗುರುದತ್, ವಿಜಯ ಕುಮಾರ್, ಪ್ರಾಂಶುಪಾಲ ಸತೀಶ್, ಮುಖ್ಯ ಶಿಕ್ಷಕರಾದ ಮುರುಳಿ, ರಾಮಶೆಟ್ಟಿ, ಜಯಂತಿ, ಪುಟ್ಟರಾಜು ಸೇರಿದಂತೆ ವಿವಿಧ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪಾಲಕರು ಭಾಗವಹಿಸಿದ್ದರು.

ನಾಯಕ ಸಮಾಜ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಹೆಚ್.ಡಿ.ಕೋಟೆ: ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆ ಬರೆದು, ದೊಡ್ಡ ಮಟ್ಟದ ಗುರಿಯೊಂದಿಗೆ ವಿದ್ಯಾಭ್ಯಾಸ ಮಾಡಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ರಾಜು ತಿಳಿಸಿದರು.

ತಾಲೂಕಿನ ಹ್ಯಾಂಡ್ ಪೋಸ್ಟ್‌ನಲ್ಲಿರುವ ಕಪಿಲ ಫಂಕ್ಷನ್ ಹಾಲ್‌ನಲ್ಲಿ ಕೋಟೆ, ಸರಗೂರು ತಾಲೂಕು ನಾಯಕ ನೌಕರರ ಸಂಘದ 2025–26 ಸಾಲಿನ ವಾರ್ಷಿಕ ಮಹಾಸಭೆ, ಹಾಗೂ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ತಾಲೂಕಿನಲ್ಲಿ ಸಮುದಾಯದ ಮಕ್ಕಳನ್ನು ಗುರುತಿಸಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ 90ರಷ್ಟು, ಪದವಿ, ಸ್ನಾತಕೋತ್ತರ ಪದವಿಯಲ್ಲಿ ಶೇ 85ರಷ್ಟು ಪಡೆದ 36 ಮಕ್ಕಳನ್ನು ಗುರುತಿಸಿ ಪುರಸ್ಕರಿಸಿರುವುದು ಹೆಮ್ಮೆಯ ವಿಚಾರ, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಅಂಕಗಳನ್ನು ಪಡೆದು ತಾಲೂಕಿಗೆ ಕೀರ್ತಿ ತರುವ ಕೆಲಸ ಮಾಡಬೇಕು ಎಂದು ಮಕ್ಕಳಿಗೆ ತಿಳಿಸಿದರು.

ತಾಲೂಕು ನೌಕರ ಸಂಘದ ಅಧ್ಯಕ್ಷ ಸಿದ್ದರಾಜು ಮಾತನಾಡಿ ಸಮುದಾಯದ ಮಕ್ಕಳು ನೌಕರಿ ಪಡೆದು ಉನ್ನತ ಹುದ್ದೆಗೆ ಹೋದಾಗ ಜನಾಂಗದ ಮಕ್ಕಳು, ಅವಿದ್ಯಾವಂತ ಜನರ ಏಳಿಗೆಗೆ ಗಮನ ಹರಿಸಿ, ಸಮಾಜವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಶ್ರಮಿಸಿ ಎಂದರು.



ತಾಲೂಕು ನಾಯಕ ನೌಕರರ ಸಂಘದ 2025–26ರ ಸಾಲಿನ ವಾರ್ಷಿಕ ಮಹಾಸಭೆ, ಹಾಗೂ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು.

ಇದೇ ಸಂದರ್ಭದಲ್ಲಿ ಪಿಎಚ್‌ಡಿ ಪಡೆದ ಯೋಗೀಶ್, ನಿವೃತ್ತ ನೌಕರರು, ಸಹಕಾರ ಸಂಘದ ನಿರ್ದೇಶಕರುಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ಚಿಕ್ಕನಾಯ್ಕ, ಎಸ್.ಸಿ.ಮಹದೇವಪ್ಪ, ರಮೇಶ್, ಆರ್.ಸಿ.ಶ್ರೀನಿವಾಸ, ಕೆಂಪನಾಯ್ಕ, ಎಚ್.ಬಿ.ಕೃಷ್ಣನಾಯ್ಕ, ಜ್ಯೋತಿ, ಜಯಪ್ರಕಾಶ್, ನಾಗನಾಯ್ಕ, ಚನ್ನನಾಯ್ಕ, ಮುದ್ದನಾಯ್ಕ, ಮಂಜುನಾಥ, ರವಿ, ಪ್ರತಿಭಾವಂತ ಮಕ್ಕಳು, ಪೋಷಕರು, ಸಂಘದ ಸದಸ್ಯರು ಭಾಗವಹಿಸಿದ್ದರು.

ಕಡೇ ಕಾರ್ತಿಕ ಸೋಮವಾರದ ವಿಶೇಷ ಪೂಜೆ



ಕಂಪಲಾಪುರದ ಶ್ರೀಕರಕಂಟೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಕಡೇ ಸೋಮವಾರ ವಿಶೇಷ ಪೂಜೆ ಏರ್ಪಡಿಸಲಾಗಿತ್ತು. ಭಕ್ತಾದಿಗಳು ದೇವರ ದರ್ಶನ ಪಡೆದು ಪುನೀತರಾದರು.



ಗೋಣಹಳ್ಳಿ ಮಾರಮ್ಮ ಉತ್ಸವ

ಕಾರ್ತಿಕ ಮಾಸದ ಕಡೇ ಸೋಮವಾರದ ಅಂಗವಾಗಿ ಪಿರಿಯಾಪಟ್ಟಣ ತಾಲೂಕು ಕಂಪಲಾಪುರದಲ್ಲಿ ಗೋಣಹಳ್ಳಿ ಮಾರಮ್ಮ ಉತ್ಸವ ವಿಜೃಂಭಣೆಯಿಂದ ನೆರವೇರಿತು.

ಅಪಾಯಕ್ಕೆ ಕಾದಿರುವ ಮ್ಯಾನ್‌ಹೋಲ್



ಹುಣಸೂರು, ನ.19– ನಗರದ ಐ.ಕೆ.ಕಲ್ಯಾಣ ಮಂಟಪದ ರಸ್ತೆಯಲ್ಲಿ ಬಲಿಗಾಗಿ ಮ್ಯಾನ್‌ಹೋಲ್ ಬಾಯಿ ತೆರೆದಿದ್ದು, ನಗರಸಭಾ ಅಧಿಕಾರಿಗಳ ನಿರ್ಲಕ್ಷತೆಗಾಗಿ, ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹುಣಸೂರು ನಗರದ ಐಕೆ ಕಲ್ಯಾಣ ಮಂಟಪ–ಎಂಡಿಸಿಸಿ ಬ್ಯಾಂಕ್ ರಸ್ತೆಯಲ್ಲಿ ಮ್ಯಾನ್ ಹೋಲ್ ಒಡೆದು ಹೋಗಿ ಒಳ ಭಾಗಕ್ಕೆ ಕುಸಿದು ಹೋಗಿದೆ. ಈ ಮ್ಯಾನ್ ಹೋಲ್ ಗುಂಡಿಗೆ ತೆಂಗಿನ ಗರಿಯನ್ನು ಇಟ್ಟು ಮುಚ್ಚಲಾಗಿದೆ.


ಇದು ಬಹಳ ಅಪಾಯಕಾರಿಯಾಗಿದ್ದು ವಾಹನಗಳು ಓಡಾಡುವ ಸಮಯದಲ್ಲಿ ಅಪಘಾತವಾಗುವ ಸಂಭವವಿರುತ್ತದೆ. ಇದು ರಸ್ತೆ ಮಧ್ಯಭಾಗದಲ್ಲಿ ಇರುವುದರಿಂದ ಇಷ್ಟು ದಿನವಾದರೂ ನಗರಸಭೆಯ ಅಧಿಕಾರಿಗಳ ಗಮನಕ್ಕೆ ಬಂದಿದ್ದರೂ ನಿರ್ಲಕ್ಷೆ ವಹಿಸಿದ್ದಾರೆ.

ಇಲ್ಲಿ ಅಕ್ಕಪಕ್ಕದಲ್ಲಿ ಎರಡು ವಿದ್ಯುತ್ ದೀಪಗಳಿದ್ದು ಕೆಟ್ಟು ಹೋಗಿವೆ. ಈ ರೀತಿ ಒಡೆದು ಹೋಗಿರುವ ಮ್ಯಾನ್ ಹೋಲ್ ಬಳಿ ಬಹಳ ಕತ್ತಲೆ ಇದ್ದು ವಾಹನ ಸವಾರರಿಗೆ ತಕ್ಷಣಕ್ಕೆ ಇದು ಕಾಣಿಸದೆ ಅಪಾಯವಾಗುವ ಸಾಧ್ಯತೆ ಇದೆ. ಸಂಬಂಧಪಟ್ಟ ಇಲಾಖೆಯವರು ತಕ್ಷಣ ಗಮನಹರಿಸಿ ಅಪಾಯ ತಪ್ಪಿಸುವಂತೆ ಕೋರಲಾಗಿದೆ.

ಭತ್ತ ಖರೀದಿ ಕೇಂದ್ರ ತೆರೆದು ಹೆಚ್ಚುವರಿ 500 ರೂ. ಪ್ರೋತ್ಸಾಹ ಧನಕ್ಕೆ ರೈತರ ಆಗ್ರಹ

ತಿ.ನರಸೀಪುರ, ನ.19– ಭತ್ತಕ್ಕೆ ಬೆಂಬಲ ಬೆಲೆಯೊಂದಿಗೆ ಹೆಚ್ಚುವರಿಯಾಗಿ 500 ರೂ. ಪ್ರೋತ್ಸಾಹ ಧನ ಘೋಷಣೆ ಮಾಡುವ ಮೂಲಕ ರಾಜ್ಯ ಸರ್ಕಾರ ತುರ್ತಾಗಿ ಭತ್ತ ಖರೀದಿ ಕೇಂದ್ರಗಳನ್ನು ತೆರೆಯಬೇಕೆಂದು ರಾಜ್ಯಾಧ್ಯಕ್ಷರಾದ ಕುರುಬೂರು ಶಾಂತಕುಮಾರ್ ನೇತೃತ್ವದ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘ ಸರ್ಕಾರವನ್ನು ಒತ್ತಾಯಿಸಿದೆ.

ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್ ಮಾತನಾಡಿ ಪ್ರಸಕ್ತ ಸಾಲಿನಲ್ಲಿ ಉತ್ತಮ ಮಳೆ ಆಗಿರುವುದರಿಂದ ಜಿಲ್ಲೆಯಾದ್ಯಂತ ಹೆಚ್ಚಿನ ರೈತರು ಭತ್ತ ಬೆಳೆದಿದ್ದಾರೆ, ಕೇಂದ್ರ ಸರ್ಕಾರ ಕ್ವಿಂಟಾಲ್ ಭತ್ತಕ್ಕೆ 2362 ರೂ. ಬೆಂಬಲ ಬೆಲೆ ಘೋಷಿಸಿದೆ. ಆದರೆ ಈ ಬೆಲೆ ರೈತ ವ್ಯವಸಾಯ ಮಾಡಿದ ಖರ್ಚಿಗೂ ಕೂಡ ಸಾಲದು ಹೀಗಾಗಿ ರೈತರು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಈಗಾಗಲೇ ಕೇರಳ, ಒಡಿಸ್ಸಾ ಹಾಗೂ ತೆಲಂಗಾಣ ರಾಜ್ಯಗಳಲ್ಲಿ ನೀಡುತ್ತಿರುವಂತೆ ಕ್ವಿಂಟಾಲ್ ಭತ್ತಕ್ಕೆ ಪ್ರೋತ್ಸಾಹ ಧನವಾಗಿ 500 ರೂ. ಬೆಂಬಲ ಬೆಲೆ ಘೋಷಣೆ ಮಾಡಲು ರಾಜ್ಯ ಸರ್ಕಾರ ಮುಂದಾಗಬೇಕೆಂದು ಒತ್ತಾಯಿಸಿದ್ದರು. ರೈತರು ಬೆಳೆದ ಬೆಳೆಗಳನ್ನು ಬೆಂಬಲ ಬೆಲೆಗೆ ಮಾರಾಟ ಮಾಡಲು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಬೇಕು. ಹೋಬಳಿ ಮಟ್ಟದಲ್ಲಿ ಖರೀದಿ ಕೇಂದ್ರಗಳಿವೆಯಾದರೂ ಅವು ತೆರೆಯುವ ಮೊದಲೇ ರೈತರು ಸಾಲದ ಕಿರುಕುಳ ತಾಳಲಾರದೇ ಸ್ವಾಭಿಮಾನಕ್ಕೆ ಅಂಜಿ ಭತ್ತವನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ ಮತ್ತೆ ಸಾಲದ ಸುಳಿಗೆ ಸಿಲುಕುತ್ತಿದ್ದಾರೆ, ಆದ್ದರಿಂದ ಭತ್ತದ ಖಟಾವು ಆರಂಭವಾಗುವ 20 ದಿನಗಳ ಮೊದಲೇ ಖರೀದಿ ಕೇಂದ್ರಗಳನ್ನು ತೆರೆದು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಅವರು ಮನವಿ ಮಾಡಿದರು.



ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್ ಮಾತನಾಡಿದರು.

ರೈತರು ಸರ್ಕಾರ ಘೋಷಿಸಿರುವ ಕ್ವಿಂಟಾಲ್ ಭತ್ತವನ್ನು 2369 ರೂ. ಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಬಾರದು ಹಾಗೂ ಬಂಡವಾಳ ಶಾಹಿಗಳು, ದಲ್ಲಾಳಿಗಳು ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ರೈತರಿಂದ ಭತ್ತ ಖರೀದಿಸಿರುವುದು ಕಂಡು ಬಂದರೆ ಅಂತವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ತಾಲೂಕು ಉಪಾಧ್ಯಕ್ಷ ಹೆಗ್ಗೂರು ರಂಗರಾಜು, ಬನ್ನೂರು ಗ್ರಾಮಾಂತರ ಘಟಕದ ಮುಖಂಡರಾದ ಅತ್ತಹಳ್ಳಿ ಲಿಂಗಣ್ಣ, ಅರುಣ್, ಕುಮಾರ್, ಮಧು, ಕೇತುಪುರ ಗಿರಿರಾಜ್, ಕುಂತನಹಳ್ಳಿ ಸ್ವಾಮಿ, ಕುಳ್ಳೆಗೌಡ, ಮೆಗಳಕೊಪ್ಪಲು ಕುಮಾರ್, ಬಸವನಹಳ್ಳಿ ಮಹೇಂದ್ರ, ಬನ್ನೂರು ಶ್ರೀನಿವಾಸ್ ಇದ್ದರು.

ಜೆಡಿಎಸ್ ಪಕ್ಷಕ್ಕೆ ಬೆಳ್ಳಿ ಹಬ್ಬದ ಸಂಭ್ರಮ

ನ.21, 22 ರಂದು ಮೈಸೂರಿನಲ್ಲಿ ಅರ್ಥಪೂರ್ಣ ಕಾರ್ಯಕ್ರಮ

ಮೈಸೂರಿನಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಮಾಹಿತಿ

ಮೈಸೂರು, ನ.19(ಬಿಎಲ್‌ಯು)– ಜ್ಯಾತ್ಯಾತೀತ ಜನತಾ ದಳ (ಜೆಡಿಎಸ್) 25 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ನವೆಂಬರ್ 21 ಮತ್ತು 22 ರಂದು ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಹಲವು ವಿಶಿಷ್ಟ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದ್ದಾರೆ.

ಮೈಸೂರಿನ ಕಿಂಗ್ಸ್ ಕೋರ್ಟ್ ಹೋಟೆಲ್‌ನಲ್ಲಿ ಇಂದು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ದಿನದ ಕಾರ್ಯಕ್ರಮದಲ್ಲಿ ಜೆಡಿಎಸ್ ಪಕ್ಷದ 25 ವರ್ಷದ ಇತಿಹಾಸ, ಸಾಧನೆ, ಸರ್ಕಾರ ನೀಡಿದ ಜನಪರ ಯೋಜನೆಗಳ ಬಗ್ಗೆ ಪಕ್ಷದ ಕಾರ್ಯಕರ್ತರು ಜನರಿಗೆ ಮನವರಿಕೆ ಮಾಡಿಕೊಡಲಿದ್ದಾರೆ ಎಂದು ಹೇಳಿದರು.

ಹಿರಿಯರನ್ನು ಭೇಟಿ ಮಾಡಿ ಪಕ್ಷದ ಬಗ್ಗೆ ಮಾಹಿತಿ ನೀಡಲಾಗುವುದು. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಮಾಡಲಾಗುವುದು. ಈ ಮೂಲಕ ಜೆಡಿಎಸ್ ಪಕ್ಷದ ಬೆಳ್ಳಿ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲಾಗುವುದು ಎಂದು ಸಾ.ರಾ.ಮಹೇಶ್ ತಿಳಿಸಿದರು.

ಮೊದಲು ಮೈಸೂರಲ್ಲಿ ಕಾರ್ಯಕ್ರಮ ಮಾಡಲಾಗುವುದು. ತರುವಾಯ ಪಕ್ಷದ ಹಿರಿಯ ನಾಯಕರು ಬೆಂಗಳೂರಿನಲ್ಲಿ ಏರ್ಪಡಿಸಿರುವ ಬೆಳ್ಳಿಹಬ್ಬ ಸಮಾರಂಭದಲ್ಲಿ ಭಾಗಿಯಾಗುತ್ತೇವೆ. ಸ್ಥಳೀಯ ಕಾರ್ಯಕರ್ತರು ಬೆಳಿಗ್ಗೆಯಿಂದ ರಾತ್ರಿವರೆಗೆ ಹಲವು ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ ಎಂದು ಮಾಹಿತಿ ನೀಡಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು 92 ವರ್ಷದ ಇಳಿ ವಯಸ್ಸಿನಲ್ಲೂ ಜನಪರ ಹೋರಾಟ ಮಾಡುತ್ತಿದ್ದಾರೆ. ರಾಜ್ಯದೆಲ್ಲೆಡೆ ಪ್ರವಾಸ ಮಾಡಿ ಸಮರ್ಥವಾಗಿ ಪಕ್ಷ ಸಂಘಟನೆ ಮಾಡುತ್ತಿದ್ದಾರೆ. ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಕೂಡ ಸಮಾಜಮುಖಿ ಕೆಲಸ ಮಾಡುತ್ತಿದ್ದಾರೆ ಎಂದು ಸಾ.ರಾ.ಮಹೇಶ್ ಹೇಳಿದರು.

ಜೆಡಿಎಸ್ ಬಲಾಢ್ಯವಾಗಿರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪಕ್ಷಗಳ ಜೊತೆ ಹೋರಾಟ ಮಾಡುತ್ತಿದೆ. ಅಲ್ಲದೆ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಜನೋಪಯೋಗಿ ಕೆಲಸ ಮಾಡಿ ಪ್ರಾದೇಶಿಕ ಪಕ್ಷದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಸಾರಿ ಹೇಳಿದೆ ಎಂದರು. ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆ ಎದುರಿಸಲು ತಯಾರಿ ಮಾಡಿಕೊಂಡಿದ್ದೇವೆ. ರಾಜ್ಯದಲ್ಲಿ ಪಕ್ಷವನ್ನು ಮತ್ತಷ್ಟು ಗಟ್ಟಿಯಾಗಿ ಸಂಘಟನೆ ಮಾಡಲು ಪದಾಧಿಕಾರಿಗಳ ಬದಲಾವಣೆ ಮಾಡಲಾಗುವುದು ಎಂದು ಸಾ.ರಾ.ಮಹೇಶ್ ತಿಳಿಸಿದರು.

ಸಫಾರಿ ರದ್ದು ಸರಿಯಲ್ಲ: ಕಾಡಿನಿಂದ ನಾಡಿಗೆ ಪ್ರಾಣಿಗಳು ಬರುತ್ತವೆ ಎಂಬ ಕಾರಣ ನೀಡಿ ಸಫಾರಿಯನ್ನು ರದ್ದು ಮಾಡಲಾಗಿದೆ. ಇದರಿಂದ ಈ ಭಾಗದಲ್ಲಿ ಗೈಡ್‌ಗಳು, ಅಧಿಕೃತ ಹೋಟೆಲ್, ವಸತಿ ಗೃಹ ಸೇರಿದಂತೆ ಇತರೆ ವ್ಯಾಪಾರ ವಹಿವಾಟು ನಡೆಸುವವರು ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ. ಇದರಿಂದ ಪ್ರವಾಸೋದ್ಯಮಕ್ಕೆ ಧಕ್ಕೆಯಾಗಿದೆ. ಕಾಡಿನಿಂದ ಪ್ರಾಣಿಗಳು ಹೊರಗೆ ಬರದಂತೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಅದು ಬಿಟ್ಟು ಸಫಾರಿ ರದ್ದು ಮಾಡುವುದಲ್ಲ ಎಂದು ಹೇಳಿದರು.

ಅಕ್ರಮ ರೆಸಾರ್ಟ್ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಹೇಳುತ್ತದೆಯೇ ಹೊರತು ನುಡಿದಂತೆ ನಡೆದಿಲ್ಲ ಎಂದು ಸಾ.ರಾ. ಮಹೇಶ್ ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ಮಾಜಿ ಶಾಸಕ ಅಶ್ವಿನ್ ಕುಮಾರ್, ಮಾಜಿ ಮೇಯರ್ ಎಂ.ಜೆ. ರವಿಕುಮಾರ್, ಜೆಡಿಎಸ್ ಮುಖಂಡ ಸೋಮಶೇಖರ್, ಎಸ್‌ಬಿಎಂ ಮಂಜು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಕಿಂಗ್ಸ್ ಕೋರ್ಟ್ ಹೋಟೆಲ್‌ನಲ್ಲಿ ಬುಧವಾರ ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಸಾಧ್ಯವಾದ ಸಮಯದಲ್ಲಿ ಜಿಟಿಡಿ ಪಕ್ಷ ಸಂಘಟನೆಯಲ್ಲಿ ಭಾಗಿ

ಶಾಸಕ ಜಿ.ಟಿ.ದೇವೇಗೌಡರು ಸಾಧ್ಯವಾದ ಸಮಯದಲ್ಲಿ ಪಕ್ಷ ಸಂಘಟನೆ ಹಾಗೂ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾರೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದರು. ಪಕ್ಷದ ಯಾವುದೇ ಕಾರ್ಯಕ್ರಮ ನಡೆದರೂ ಅವರಿಗೆ ಆಹ್ವಾನ ನೀಡಲಾಗುವುದು. ಅದರಂತೆ ಬೆಳ್ಳಿಹಬ್ಬ ಕಾರ್ಯಕ್ರಮದಲ್ಲೂ ಭಾಗಿಯಾಗುವಂತೆ ಮನವಿ ಮಾಡಲಾಗುವುದು ಎಂದು ಹೇಳಿದರು. ಸಹಕಾರಿ ಕ್ಷೇತ್ರದಲ್ಲಿ ಬಿಡುವಿಲ್ಲದ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿರುವ ಕಾರಣ ಒತ್ತಡದಲ್ಲಿದ್ದಾರೆ. ಇನ್ನು ಮುಂದೆ ಬಿಡುವು ಮಾಡಿಕೊಂಡು ಪಕ್ಷ ಸಂಘಟನೆಯಲ್ಲಿ ಭಾಗಿಯಾಗುತ್ತಾರೆ ಎಂದರು. ಜಿ.ಟಿ.ದೇವೇಗೌಡರ ಪುತ್ರ ಜಿ.ಡಿ.ಹರೀಶ್‌ಗೌಡ ಅವರು ಪಕ್ಷದ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ ಎಂದು ಸಾ.ರಾ.ಮಹೇಶ್ ತಿಳಿಸಿದರು.

ಮೈಸೂರು ನಗರದ ಪ್ರತಿ ವಾರ್ಡ್, ಹಳ್ಳಿಗಳಲ್ಲಿ ಕಾರ್ಯಕ್ರಮ

ಜೆಡಿಎಸ್ ಪಕ್ಷದ ಬೆಳ್ಳಿ ಹಬ್ಬದ ಹಿನ್ನೆಲೆಯಲ್ಲಿ ಪ್ರತಿ ಹಳ್ಳಿ ಹಾಗೂ ನಗರದ ವಾರ್ಡ್‌ಗಳಲ್ಲಿ ಕಾರ್ಯಕ್ರಮ ರೂಪಿಸಲಾಗುವುದು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ಪಕ್ಷ 25 ವರ್ಷ ಪೂರೈಸಿರುವ ಹಿನ್ನೆಲೆ ಹೆಚ್.ಡಿ.ದೇವೇಗೌಡರು ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಅರ್ಥಪೂರ್ಣ ಕಾರ್ಯಕ್ರಮ ಆಯೋಜನೆ ಮಾಡಲಾಗುವುದು ಎಂದರು. ನವೆಂಬರ್ 21 ಮತ್ತು 22 ರಂದು ನಡೆಯುವ ಸಮಾರಂಭದಲ್ಲಿ ಜೆಡಿಎಸ್ ಪಕ್ಷದ ಸಾಧನೆ, ಬೆಳೆದು ಬಂದ ದಾರಿ, ಸರ್ಕಾರ ಅಧಿಕಾರದಲ್ಲಿದ್ದಾಗ ಮಾಡಿರುವ ಜನಪರ ಕಾರ್ಯಗಳನ್ನು ಜನರಿಗೆ ಮನವರಿಕೆ ಮಾಡಿಕೊಡಲಾಗುವುದು ಎಂದು ಹರೀಶ್ ಗೌಡ ತಿಳಿಸಿದರು.

ಅರಮನೆ ಮುಂದೆ ಅವಲಕ್ಷಣದ ಪೊಲೀಸ್ ಮಾಹಿತಿ ಕೇಂದ್ರ ತೆರವು

ಪಾರಂಪರಿಕ ತಜ್ಞರ ಸ್ವಾಗತ



ಕಳೆದ ವಾರ ನಿರ್ಮಿಸಲಾಗಿದ್ದ ಪೊಲೀಸ್ ಮಾಹಿತಿ ಕೇಂದ್ರ.

ಮೈಸೂರು, ನ.19(ಎಂಟಿವೈ)– ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂದೆ, ಚಾಮರಾಜ ವೃತ್ತದಲ್ಲಿ ದೇವರಾಜ ಪೊಲೀಸರು ನಿರ್ಮಿಸಿದ್ದ ಅವೈಜ್ಞಾನಿಕ ವಿನ್ಯಾಸದ ಪೊಲೀಸ್ ಮಾಹಿತಿ ಕೇಂದ್ರ ನಿರ್ಮಾಣವನ್ನು ತೆರವುಗೊಳಿಸಲಾಗಿದೆ.

ಮೈಸೂರು ಅರಮನೆಗೆ ಬರುವ ಪ್ರವಾಸಿಗರು, ಸಾರ್ವಜನಿಕರಿಗೆ ನೆರವಾಗುವ ಉದ್ದೇಶದಿಂದ ಖಾಸಗಿ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ಪೊಲೀಸ್ ಮಾಹಿತಿ ಕೇಂದ್ರ ನಿರ್ಮಿಸಲಾಗಿತ್ತು. ನೀಲಿ ಮತ್ತು ಕೆಂಪು ಬಣ್ಣದಿಂದ ಕೂಡಿದ್ದ ಈ ಪೊಲೀಸ್ ಮಾಹಿತಿ ಕೇಂದ್ರ ಅರಮನೆಯ ಪಾರಂಪರಿಕತೆಗೆ ಧಕ್ಕೆಯಾಗುತ್ತದೆ ಎಂಬ ಆರೋಪ ಕೇಳಿ ಬಂದಿತ್ತು. ಅದನ್ನು ತೆರವುಗೊಳಿಸಿ, ಅಗತ್ಯವಿದ್ದರೆ ಪಾರಂಪರಿಕ ಶೈಲಿಯಲ್ಲಿ ಈ ಶೆಲ್ಟರ್ ನಿರ್ಮಿಸುವಂತೆ ಪಾರಂಪರಿಕ ತಜ್ಞರು ಆಗ್ರಹಿಸಿದ್ದರು.

ಸಾರ್ವಜನಿಕ ವಲಯದಿಂದ ವ್ಯಾಪಕ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಇದೀಗ ಸದ್ದಿಲ್ಲದೆ ಈ ನಿರ್ಮಾಣವನ್ನು ನೆಲಸಮ ಮಾಡಲಾಗಿದೆ. ಈ ನಿರ್ಧಾರವನ್ನು ಪಾರಂಪರಿಕ ತಜ್ಞರು ಹಾಗೂ ಮೈಸೂರಿನ ಪ್ರಜ್ಞಾವಂತ ನಾಗರಿಕರು ಸ್ವಾಗತಿಸಿದ್ದಾರೆ.

ನಿರ್ಮಾಣದ ಉದ್ದೇಶ: ಅರಮನೆಗೆ ಬರುವ ಪ್ರವಾಸಿಗರು ಹಾಗೂ ಸಾರ್ವಜನಿಕರಿಗೆ ಮಾಹಿತಿ ನೀಡುವುದರ ಜೊತೆಗೆ ವಾಹನ ಸಂಚಾರದ ಮೇಲೆ ನಿಗಾ, ಅವರ ಸುರಕ್ಷತೆ ದೃಷ್ಟಿಯಿಂದ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಲರಾಮ ದ್ವಾರದ ಮುಂಭಾಗ ಕರ್ಜನ್ ಪಾರ್ಕ್‌ಗೆ ಹೊಂದಿಕೊಂಡಂತೆ ದೇವರಾಜ ಪೊಲೀಸ್ ಠಾಣಾ ವತಿಯಿಂದ ಪೊಲೀಸ್ ಮಾಹಿತಿ ಕೇಂದ್ರ ಸ್ಥಾಪಿಸಲಾಗಿತ್ತು. ಸಿಮೆಂಟ್ ಅಡಿಪಾಯ ಹಾಕಿ ನಿರ್ಮಿಸಲಾಗಿತ್ತು.

ಇಲ್ಲಿಗೆ ಇಬ್ಬರು ಸಿಬ್ಬಂದಿ ನಿಯೋಜಿಸಿ, ಪ್ರತಿದಿನ ಬೆಳಗ್ಗೆ 8ರಿಂದ ರಾತ್ರಿ 11 ಗಂಟೆವರೆಗೂ ಸಾರ್ವಜನಿಕರಿಗೆ ಮಾಹಿತಿ ನೀಡುವುದರೊಂದಿಗೆ ಸಾರ್ವಜನಿಕರಿಂದ ದೂರು ಸ್ವೀಕರಿಸುವ ವ್ಯವಸ್ಥೆಯನ್ನು ಮುಂದಿನ ವಾರದಿಂದ ಜಾರಿಗೊಳಿಸಲು ಉದ್ದೇಶಿಸಲಾಗಿತ್ತು. ಈ ಕೇಂದ್ರದಲ್ಲಿ ಧ್ವನಿ ವರ್ಧಕ ಸಹ ಅಳವಡಿಸಿ, ಆ ಮೂಲಕ ವಾಹನ ಸವಾರರು, ಸಾರ್ವಜನಿಕರಿಗೆ ಜಾಗೃತಿ ಸಂದೇಶ ಬಿತ್ತರಿಸಲು ಉದ್ದೇಶಿಸಲಾಗಿತ್ತು.



ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯ ಮುಂಭಾಗ ಚಾಮರಾಜ ವೃತ್ತದ ಬಳಿ ನಿರ್ಮಿಸಿದ್ದ ಪೊಲೀಸ್ ಮಾಹಿತಿ ಕೇಂದ್ರ ತೆರವುಗೊಳಿಸಿರುವುದು.

ಪ್ರದರ್ಶಕ ಕಲೆಗಳ ರಾಷ್ಟ್ರೀಯ ಸಮ್ಮೇಳನ; ಶಾಸ್ತ್ರೀಯ ನೃತ್ಯೋತ್ಸವ

ಮೈಸೂರು, ನ. 19 – ಭರತ ನೃತ್ಯ ಸಂಗೀತ ಅಕಾಡೆಮಿ, ಬೆಂಗಳೂರು, ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಮೈಸೂರು, ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ನ. 27 ಮತ್ತು 28 ರಂದು ಸಂಗೀತ ವಿವಿ ಆವರಣದಲ್ಲಿ ಪ್ರದರ್ಶಕ ಕಲೆಗಳ ರಾಷ್ಟ್ರೀಯ ಸಮ್ಮೇಳನ, ಶಾಸ್ತ್ರೀಯ ನೃತ್ಯೋತ್ಸವ ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿದೆ. ನ. 27 ರಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರು ಭರತ ನೃತ್ಯ ಅಕಾಡೆಮಿಯಿಂದ ಸ್ವಾಗತ ನೃತ್ಯ ನಡೆಯಲಿದೆ. ಸಾನ್ನಿಧ್ಯವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದಾರೆ. ಅಂತರರಾಷ್ಟ್ರೀಯ ನೃತ್ಯ ಕಲಾವಿದರಾದ ಡಾ. ವಸುಂಧರಾ ದೊರೆಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಗೀತ ವಿವಿ ಕುಲಪತಿ ಡಾ. ನಾಗೇಶ್ ಬೆಟ್ಟಕೋಟೆ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಪ್ರೊ. ಕೆ. ರಾಮಮೂರ್ತಿ ರಾವ್ ಮತ್ತು ಡಾ. ತುಳಸೀ ರಾಮಚಂದ್ರ ಭಾಗವಹಿಸಲಿದ್ದಾರೆ.

ಕುವೆಂಪುನಗರ ಗ್ರಂಥಾಲಯದ ಮುಂದೆ ಎಐಡಿವೈಒ, ಓದುಗರ ಬಳಗದಿಂದ ಪ್ರತಿಭಟನೆ



ಮೈಸೂರಿನ ಕುವೆಂಪುನಗರದ ಕೇಂದ್ರಗ್ರಂಥಾಲಯದ ಎದುರು ಎಐಡಿವೈಒ ಮತ್ತು ಸಾರ್ವಜನಿಕ ಗ್ರಂಥಾಲಯದ ಓದುಗರ ಬಳಗದ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,19(ಎಂಕೆ)– ಮೈಸೂರಿನ ಕುವೆಂಪುನಗರದಲ್ಲಿರುವ ಕೇಂದ್ರ ಗ್ರಂಥಾಲಯದಲ್ಲಿ ಓದುಗರಿಗೆ ಅಗತ್ಯ ಸೌಲಭ್ಯ ಒದಗಿಸುವಂತೆ ಆಗ್ರಹಿಸಿ ಎಐಡಿವೈಒ ಮತ್ತು ಸಾರ್ವಜನಿಕ ಗ್ರಂಥಾಲಯದ ಓದುಗರ ಬಳಗದ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಗ್ರಂಥಾಲಯದ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು ಗ್ರಂಥಾಲಯದಲ್ಲಿ ಓದುಗರಿಗೆ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿ, ಸರಿಯಾಗಿ ನಿರ್ವಹಣೆ ಮಾಡಬೇಕು. ಶೌಚಾಲಯಗಳ ದುರಸ್ಥಿಗೆ ಕ್ರಮ ಕೈಗೊಳ್ಳಬೇಕು. ಸ್ವಚ್ಛತೆ ನಿರ್ವಹಣೆ ಮಾಡಬೇಕು. ಪಾರ್ಕಿಂಗ್ ವ್ಯವಸ್ಥೆ ಮತ್ತು ಸಂಚಾರಿ ಗ್ರಂಥಾಲಯ ಬಸ್ ರಿಪೇರಿ ಮಾಡಬೇಕು. ಗ್ರಂಥಾಲಯದ ಹೊರಗಡೆ ಕುಳಿತುಕೊಂಡು ಓದಲು ಕುಟೀರಗಳನ್ನು ನಿರ್ಮಿಸಬೇಕು ಹಾಗೂ ದಿನ ಪೂರ್ತಿ ಗ್ರಂಥಾಲಯ ತೆರೆಯುವಂತೆ ಒತ್ತಾಯಿಸಿದರು.

ಬಳಿಕ ಗ್ರಂಥಾಲಯ ಉಪ ನಿರ್ದೇಶಕ ಹಾಗೂ ಗ್ರಂಥಪಾಲಕರಿಗೆ ಮನವಿ ಸಲ್ಲಿಸಲಾಯಿತು. ಎಐಡಿವೈಒ ಜಿಲ್ಲಾ ಅಧ್ಯಕ್ಷ ಟಿ.ಆರ್.ಸುನಿಲ್, ಕಾರ್ಯದರ್ಶಿ ಎಸ್.ಸುಮ, ನೀತುಶ್ರೀ, ಪೂರ್ಣಿಮಾ, ರಣಜಿತ್, ಓದುಗರಾದ ಅನುಪ್, ಮೌನೇಶ್, ರವಿ, ವೀರೇಶ್, ಮೇಘ, ಮಾಲ, ಮಮತಾ ಮತ್ತಿತರರಿದ್ದರು.

ಶಿಕ್ಷಕರು ವಿದ್ಯಾರ್ಥಿಗಳ ಪ್ರತಿಭೆ ಬೆಳಗಬೇಕು

ಎಂಎಲ್‌ಸಿ ಸಿ.ಎನ್.ಮಂಜೇಗೌಡ ಕಿವಿಮಾತು

ಮೈಸೂರು, ನ.19– ಶಿಕ್ಷಕರು ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಹೊರತೆಗೆಯುವುದರ ಜೊತೆಗೆ ಗುಣ ಮಟ್ಟದ ಶಿಕ್ಷಣವನ್ನು ನೀಡಿ ಮಕ್ಕಳ ಭವಿಷ್ಯವನ್ನು ರೂಪಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರು.

ಮೈಸೂರು ತಾಲೂಕು ಮಹಾದೇವಪುರದ ರಾಹುಲ್ ಪ್ರೌಢಶಾಲೆಯಲ್ಲಿ ನಡೆದ ಶ್ರೀರಾಂಪುರ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ. ಬಾಬಾ ಸಾಹೇಬ್ ಅಂಬೇಡ್ಕರ್, ಅಬ್ದುಲ್ ಕಲಾಂ, ಸರ್.ಎಂ.ವಿಶ್ವೇಶ್ವರಯ್ಯರವರು ಕಡು ಬಡತನದಿಂದ ಬಂದು ಚೆನ್ನಾಗಿ ಓದಿ ಜ್ಞಾನವಂತರಾಗಿ ನಾಡಿಗೆ ಕೊಡುಗೆ ನೀಡಿದ್ದರಿಂದ ಇಂದು ನಾವು ಅವರನ್ನು ಸ್ಮರಿಸುತ್ತಿದ್ದೇವೆ ಎಂದರು.

ಮಕ್ಕಳು ಟಿ.ವಿ, ಮೊಬೈಲ್‌ಗಳನ್ನು ಬಿಟ್ಟು ಚೆನ್ನಾಗಿ ಓದಬೇಕು. ನಿಮಗೆ ನಿಮ್ಮ ತಂದೆ, ತಾಯಿಯರು ನಿಮಗೆ ಎಲ್ಲಾ ಸೌಲಭ್ಯಗಳನ್ನು ನೀಡುತ್ತಿದ್ದಾರೆ. ಸರ್ಕಾರ ಮಕ್ಕಳಿಗೆ ಬಿಸಿಯೂಟ, ಹಾಲು, ಮೊಟ್ಟೆ, ಬಟ್ಟೆ ಎಲ್ಲವನ್ನು ಉಚಿತವಾಗಿ ನೀಡುತ್ತಿದೆ. ಸರ್ಕಾರದ ಸವಲತ್ತುಗಳನ್ನು ಸದುಪಯೋಗಪಡಿಸಿಕೊಂಡು ಬುದ್ಧಿವಂತರಾಗಿ ತಂದೆ ತಾಯಿಗೆ ಕೀರ್ತಿ ತರುವಂತಹ ಮಕ್ಕಳಾಗಬೇಕು. ತಮ್ಮ ಹೆಜ್ಜೆ ಗುರುತುಗಳನ್ನು ಭೂಮಿ ಮೇಲೆ ಬಿಟ್ಟು ಹೋಗಬೇಕು. ಸರ್ಕಾರದ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು. ತಂದೆ–ತಾಯಿಯನ್ನು ಗೌರವಿಸಬೇಕು. ವಿದ್ಯಾರ್ಥಿಗಳು ವಿದ್ಯೆಯ ಜೊತೆಗೆ ವಿನಯವನ್ನು ಕಲಿಯಬೇಕು ಎಂದರು.

ವಿದ್ಯಾರ್ಥಿಗಳು ಶಿಕ್ಷಕರನ್ನು ಅನುಕರಣೆ ಮಾಡುತ್ತಾರೆ. ಆದ್ದರಿಂದ ಈ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಮಕ್ಕಳು ಅವರ ಪ್ರತಿಭೆಯನ್ನು ಪ್ರದರ್ಶಿಸಿ ಜಿಲ್ಲಾಮಟ್ಟ, ರಾಜ್ಯಮಟ್ಟಕ್ಕೆ ಆಯ್ಕೆಯಾಗಲಿ ಎಂದು ಹಾರೈಸಿದರು.

ಸಮಾರಂಭದಲ್ಲಿ ಸಂಸ್ಥೆಯ ಅಧ್ಯಕ್ಷ ಮ. ವೆಂಕಟರಾಮು, ಸಂಪನ್ಮೂಲ ವ್ಯಕ್ತಿ ಅನಿಲ್‌ಕುಮಾರ್, ಎ.ಆರ್. ಗೀತಾ, ಡಿ.ಎಸ್. ಮಾಲೇಗೌಡ, ಸುಮತಿ, ಸತೀಶ್, ನಟರಾಜು, ಮಹಾದೇವಸ್ವಾಮಿ, ಮೂರ್ತಿ ನಾಯಕ್, ಶ್ಯಾಮಲ, ಪಿ.ಎನ್. ಖಂಡೇಶ್ ಕಾಳೆ, ಮಂಜುಶ್ರೀ ಉಪಸ್ಥಿತರಿದ್ದರು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮದ ಸ್ಪರ್ಧೆಗಳು ನಡೆದವು.



ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಎಂಎಲ್‌ಸಿ ಮಂಜೇಗೌಡ ಉದ್ಘಾಟಿಸಿದರು.

ಅಂಚೆ ಪ್ರಶಿಕ್ಷಣಾರ್ಥಿಗಳಿಂದ ಮೈಸೂರಲ್ಲಿ ಪಾರಂಪರಿಕ ನಡಿಗೆ

ಮೈಸೂರಿನ ಇತಿಹಾಸ, ಪಾರಂಪರಿಕ ಕಟ್ಟಡಗಳ ಮಾಹಿತಿ ಸಂಗ್ರಹ

ಮೈಸೂರು, ನ.19(ಜಿಎ)–ಅಂಚೆ ತರಬೇತಿ ಕೇಂದ್ರದ ಪ್ರಶಿಕ್ಷಣಾರ್ಥಿಗಳು ಪಾರಂಪರಿಕ ನಡಿಗೆ ಮೂಲಕ ಮೈಸೂರಿನ ಪಾರಂಪರಿಕ ಕಟ್ಟಡಗಳ ಮಾಹಿತಿ ಪಡೆದುಕೊಂಡರು.

ವಿಶ್ವ ಪರಂಪರೆ ಸಪ್ತಾಹದ ಅಂಗವಾಗಿ ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ವತಿಯಿಂದ ಅಂಚೆ ತರಬೇತಿ ಕೇಂದ್ರದ ಪ್ರಶಿಕ್ಷಣಾರ್ಥಿಗಳಿಗೆ ಮೈಸೂರಿನ ಇತಿಹಾಸ, ಪಾರಂಪರಿಕ ಕಟ್ಟಡಗಳನ್ನು ಪರಿಚಯಿಸುವ ಉದ್ದೇಶದಿಂದ ಪಾರಂಪರಿಕ ನಡಿಗೆ ಆಯೋಜಿಸಲಾಗಿತ್ತು. ಇತಿಹಾಸ ತಜ್ಞ ಪ್ರೊ.ಎನ್. ರಂಗರಾಜು ಅವರು ಮೈಸೂರಿನ ಟೌನ್‌ಹಾಲ್ ಮುಂಭಾಗದಿಂದ ನಡಿಗೆ ಆರಂಭಿಸಿ, ದೊಡ್ಡ ಗಡಿಯಾರ, ಚಾಮರಾಜೇಂದ್ರ ಒಡೆಯರ್ ವೃತ್ತ, ಅಂಬಾ ವಿಲಾಸ ಅರಮನೆ, ಕೆ.ಆರ್.ವೃತ್ತ, ಚಿಕ್ಕ ಗಡಿಯಾರದ ಕುರಿತ ಇತಿಹಾಸ ಮತ್ತು ಪಾರಂಪರಿಕ ಕಟ್ಟಡಗಳ ಬಗ್ಗೆ ವಿವರಿಸಿ, ಮೈಸೂರಿನ ಮಹಾರಾಜರು ಮತ್ತು ಮಹಾರಾಣಿಯರ ಸಾಧನೆಯನ್ನು ತಿಳಿಸಿದರು.

ಕುತೂಹಲದಿಂದ ಮೈಸೂರಿನ ಪಾರಂಪರಿಕ ಕಟ್ಟಡಗಳ ಇತಿಹಾಸ ತಿಳಿದುಕೊಂಡ ನೂರಕ್ಕೂ ಹೆಚ್ಚು ಅಂಚೆ ತರಬೇತಿ ಕೇಂದ್ರದ ಪ್ರಶಿಕ್ಷಣಾರ್ಥಿಗಳು ವೀಡಿಯೊ ಮಾಡಿಕೊಂಡು ಫೋಟೋ ಕ್ಲಿಕಿಸಿಕೊಂಡರು.

ನಂತರ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿರುವ ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಸಭಾಂಗಣದಲ್ಲಿ ಮಾಸಿಕ ಸರಣಿಯ ಅಂಗವಾಗಿ 'ಭುವನೇಶ್ವರಿ, ವಿದ್ಯಾರಣ್ಯ ಮತ್ತು ವಿಜಯನಗರ ಏನೀ.. ಇತಿಹಾಸ' ಕುರಿತು ಖ್ಯಾತ ಇತಿಹಾಸ ತಜ್ಞೆ ವಸುಂಧರ ಫಿಲಿಯೋಜ ಅವರು ವಿಶೇಷ ಉಪನ್ಯಾಸ ನೀಡಿದರು.

ಈ ವೇಳೆ ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಉಪ ನಿರ್ದೇಶಕ ದೇವರಾಜು, ಸಹಾಯಕ ನಿರ್ದೇಶಕಿ ಮಂಜುಳಾ, ಎಸ್. ಶಶಿಧರ್ ಮತ್ತಿತರರು ಉಪಸ್ಥಿತರಿದ್ದರು.



ವಿಶ್ವ ಪರಂಪರೆ ಸಪ್ತಾಹ ಅಂಗವಾಗಿ ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ವತಿಯಿಂದ ಅಂಚೆ ತರಬೇತಿ ಕೇಂದ್ರದ ಪ್ರಶಿಕ್ಷಣಾರ್ಥಿಗಳಿಗೆ ಪಾರಂಪರಿಕ ನಡಿಗೆ ಮೂಲಕ ಮೈಸೂರಿನ ಇತಿಹಾಸ, ಪಾರಂಪರಿಕ ಕಟ್ಟಡಗಳನ್ನು ಪರಿಚಯಿಸಲಾಯಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದಾವೂದ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ದೇ ದೇ ಪ್ಯಾರ್ ದೇ–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬ್ರ್ಯಾಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಅದರ್ಸ್ (ತ)	4 ಪ್ರದರ್ಶನಗಳು
ಸಂಗಂ	
ಗತವೈಭವ (ಕ)	4 ಪ್ರದರ್ಶನಗಳು
ಲಿಡೋ	
ಬ್ರ್ಯಾಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಯಜಮಾನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಮ.1.25ಕ್ಕೆ, ಸಂ.4.45ಕ್ಕೆ
	ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ.11.00ಕ್ಕೆ, ರಾ.8.05, ರಾ.10.25ಕ್ಕೆ
ಸ್ಕ್ರೀನ್ 2	ಡೈಸ್ ಇರೇ (ಮ): ಬೆ.10.40ಕ್ಕೆ, ಆರೋಮಲೆ (ತ): ಮ.1.25ಕ್ಕೆ, ಬ್ರ್ಯಾಟ್(ಕ): ಸಂ.4.05ಕ್ಕೆ, ಸಂ.7.15ಕ್ಕೆ ಜಟಾಧರ (ತೆ): ರಾ.10.20ಕ್ಕೆ
ಸ್ಕ್ರೀನ್ 3	ಹಕ್ (ಹಿ): ಬೆ.10.35ಕ್ಕೆ, ಮ. 1.25ಕ್ಕೆ, ಸಂ. 7.15ಕ್ಕೆ ಲವ್ ಯು ಮುದ್ದು(ಕ): ಸಂ. 4.20ಕ್ಕೆ, ಇನ್ನೊಸೆಂಟ್ (ಮ): ರಾ.10.10ಕ್ಕೆ,
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಸಂ. 7.00ಕ್ಕೆ, ಬ್ರ್ಯಾಟ್(ಕ): ಬೆ.10.20ಕ್ಕೆ, ಯಜಮಾನ(ಕ): ಮ.1.30ಕ್ಕೆ, ದಿ ಗರ್ಲ್‌ಫ್ರೆಂಡ್ (ತೆ): ಸಂ.4.10ಕ್ಕೆ, ರಾ. 10.20ಕ್ಕೆ

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಕಾಂತಾರ –1(ಕ): ಬೆ.10.30, ಮ.1.35, ರಾ.7.15ಕ್ಕೆ

ಬ್ರ್ಯಾಟ್ (ಕ): ಬೆ.10.45ಕ್ಕೆ, ಮ.1.45, ಸಂ.4.45, ರಾ.7.45ಕ್ಕೆ

ನಿಷಿದ್ಧ (ಕ): ಬೆ.10.50ಕ್ಕೆ, ದಿ ಗರ್ಲ್‌ಫ್ರೆಂಡ್ (ತೆ): ಬೆ.11, ಸಂ.6.30, ರಾ.9.15ಕ್ಕೆ

ಕೋಣ (ಕ): ಮ.1.15ಕ್ಕೆ, ಐ ಆ್ಯಮ್ ಗಾಡ್ (ಕ): ಸಂ.3.40ಕ್ಕೆ,

ಲವ್ ಯು ಮುದ್ದು(ಕ): ಸಂ.6.40ಕ್ಕೆ, ಡೈಸ್ ಇರೇ (ಮ): ರಾ. 9.15ಕ್ಕೆ,

ನೆಕ್ಸಸ್ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 10.00ಕ್ಕೆ, ಸಂ.4.15ಕ್ಕೆ, ರಾ.10.30ಕ್ಕೆ.

ಬ್ರ್ಯಾಟ್ (ಕ): ಬೆ: 9.45ಕ್ಕೆ, ಸಂ.4.05ಕ್ಕೆ.

ದಿ ಗರ್ಲ್‌ಫ್ರೆಂಡ್ (ತೆ): ಬೆ: 9.55ಕ್ಕೆ, ಮ.12.50ಕ್ಕೆ, ಸಂ.6.55, ರಾ: 9.50ಕ್ಕೆ

ಹಕ್ (ಹಿ): ಬೆ: 10.05ಕ್ಕೆ, ಮ.1.25, ಸಂ.7.40, ರಾ.10.00ಕ್ಕೆ

ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ. 10.05ಕ್ಕೆ, ಮ.12.30, ಸಂ.7.15, ರಾ.9.40ಕ್ಕೆ

ದಿ ತಾಜ್ ಸ್ಟೋರಿ (ಹಿ): ಬೆ: 10.05, ಮ: 3.50ಕ್ಕೆ,

ಯಜಮಾನ (ಕ): ಮ: 12.40ಕ್ಕೆ, ಜಟಾಧರ (ತೆ): ಮ: 1.00ಕ್ಕೆ,

ಡೈಸ್ ಇರೇ (ಮ): ಮ. 1.35ಕ್ಕೆ, ರಾ: 7.40ಕ್ಕೆ, ಬಾಹುಬಲಿ (ಹಿ): ಮ. 2.55ಕ್ಕೆ,

ತಮ್ಮಾ (ಹಿ): ಮ.3.45ಕ್ಕೆ, ಚೆನ್ನೈ ಎಕ್ಸ್‌ಪ್ರೆಸ್ (ಹಿ): ಸಂ. 4.05ಕ್ಕೆ,

ಆರೋಮಲೆ (ತ): ಸಂ.7.15ಕ್ಕೆ, ಏಕ್ ದಿವಾನೆ ಕಿ ದೀವಾನಿಯಾತ್ (ಹಿ): ಸಂ.7.15ಕ್ಕೆ

ಇನ್ನೋಸೆಂಟ್(ಮ): ರಾ.10.10ಕ್ಕೆ, ಮರ್ಡರ್ ರಿಪೋರ್ಟ್(ಕೋ): ರಾ.10.20ಕ್ಕೆ,

ಗರುಡ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 9.50ಕ್ಕೆ, ಮ.1.10ಕ್ಕೆ, ಸಂ.7.05

ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ. 10.00ಕ್ಕೆ, ಸಂ.4.45, ರಾ.10.20ಕ್ಕೆ

ದಿ ಗರ್ಲ್‌ಫ್ರೆಂಡ್ (ತೆ): ಬೆ: 10.10ಕ್ಕೆ, ಸಂ.7.05, ರಾ.10.00ಕ್ಕೆ

ಹಕ್ (ಹಿ): ಬೆ: 10.40ಕ್ಕೆ, ಸ.4.15, ರಾ.10.30ಕ್ಕೆ

ಬಾಹುಬಲಿ (ತೆ): ಮ. 12.25ಕ್ಕೆ,

ಬ್ರ್ಯಾಟ್ (ಕ): ಮ. 1.05ಕ್ಕೆ, ಸಂ.7.10ಕ್ಕೆ

ಜಟಾಧರ (ತೆ): ಮ: 1.30ಕ್ಕೆ,

ಲವ್ ಯು ಮುದ್ದು(ಕ): ಸಂ.4.20ಕ್ಕೆ, ಡೈಸ್ ಇರೇ (ಮ): ಸಂ.4.35, ರಾ.10.10ಕ್ಕೆ

ಐ ಆ್ಯಮ್ ಗಾಡ್ (ಕ): ಸಂ.7.05ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೆ.ಆರ್.ಆಸ್ಪತ್ರೆಯಲ್ಲಿ ನವೀಕೃತ ತುರ್ತು ಡಯಾಲಿಸಿಸ್ ಘಟಕ ಉದ್ಘಾಟನೆ

ಮೈಸೂರು,19(ಎಂಕೆ)– ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ನವೀಕೃತ ತುರ್ತು ಡಯಾಲಿಸಿಸ್ ಘಟಕವನ್ನು ಬುಧವಾರ ಉದ್ಘಾಟಿಸಲಾಯಿತು.

ಆಸ್ಪತ್ರೆಯ ಮೆಡಿಷನ್ ವಿಭಾಗದ ಮುಖ್ಯಸ್ಥರಾದ ಡಾ.ಮಂಜುಳಾ ನವೀಕೃತ ಡಯಾಲಿಸಿಸ್ ಘಟಕವನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಕೆ.ಆರ್.ಆಸ್ಪತ್ರೆಯಲ್ಲಿರುವ ಎರಡು ಹಾಸಿಗೆಯುಳ್ಳ ಡಯಾಲಿಸಿಸ್ ಘಟಕದಲ್ಲಿ ತುರ್ತು ಸೇವೆಗಳನ್ನು ಮಾತ್ರ ನೀಡಲಾಗುವುದು. ಕೆ.ಆರ್.ಎಸ್. ರಸ್ತೆಯಲ್ಲಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿರುವ ಡಯಾಲಿಸಿಸ್ ಘಟಕದಲ್ಲಿ ನಿರಂತರವಾಗಿ ಈ ಸೌಕರ್ಯ ಕಲ್ಪಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಈ ವೇಳೆ ಡಾ.ಹಿಮಾ ಮಣಿ, ಡಾ.ನಿರಂಜನ್, ಡಾ.ಶ್ರೀನಿವಾಸ್, ಡಾ.ಮಂಜುನಾಥ್ ಮತ್ತಿತರರಿದ್ದರು.



ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ನವೀಕೃತ ತುರ್ತು ಡಯಾಲಿಸಿಸ್ ಘಟಕವನ್ನು ಬುಧವಾರ ಉದ್ಘಾಟಿಸಲಾಯಿತು.

ನಾಳೆಯಿಂದ ವಸುಂಧರೋತ್ಸವ

ಮೈಸೂರು, ನ. 19– ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ನ. 21 ರಿಂದ 27 ರವರೆಗೆ ಪ್ರತಿದಿನ ಸಂಜೆ 5.30 ರಿಂದ 8.30 ರವರೆಗೆ ಸರಸ್ವತಿಪುರಂನ ವಸುಂಧರ ಭವನದಲ್ಲಿ ವಸುಂಧರೋತ್ಸವ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಅಂತರರಾಷ್ಟ್ರೀಯ ಪಿಟೀಲು ವಾದಕ ಡಾ. ಮೈಸೂರು ಮಂಜುನಾಥ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಗಂಗೂಬಾಯಿ ಸಂಗೀತ ವಿವಿ ಕುಲಪತಿ ನಾಗೇಶ್ ಬೆಟ್ಟಕೋಟೆ, ಶ್ರೀ ಗಣೇಶ ಬೀಡಿ ವರ್ಕ್ಸ್ ನಿರ್ದೇಶಕ ಡಾ. ಎಂ. ಜಗನ್ನಾಥ್ ಶೆಣೈ ಭಾಗವಹಿಸಲಿದ್ದು, ವಿಪಿಎಸಿ ಮತ್ತು ಸಿ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಸವಿತಾ ರಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆ.